# ಸಚ್ಚಿದಾನಂದ ಸೂಕ್ತಿಗಳು



ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ-573211

2003

# ಅಧ್ಯಾತ್ಮಪ್ರಕಾಶಕಾರ್ಯಾಲಯ
## ಹೊಳೆನರಸೀಪುರ - ೫೭೩೨೧೧

**ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು ?**

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು - ವೇದಾಂತಸಪ್ತಾಹ, ವೇದಾಂತಶಿಬಿರ ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

೨. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಿಂದ ಪ್ರಕಟವಾಗುವ **ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ**ಗೆ ಮತ್ತು ಬೆಂಗಳೂರು ಶಾಖಾ ಕಾರ್ಯಾಲಯದಿಂದ ಪ್ರಕಟವಾಗುವ **ಶಂಕರ ಭಾಸ್ಕರ ತ್ರೈಮಾಸಿಕಪತ್ರಿಕೆ**ಗೆ ಚಂದಾದಾರರಾಗಿ ತಿಂಗಳು ತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಬರೆದುಸಿದ್ಧವಾಗಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳಬಹುದು ; ಈ ಪ್ರಕಟನೆಗಳ ಪುಸ್ತಕ ಭಂಡಾರವನ್ನು ಏರ್ಪಡಿಸಿಕೊಳ್ಳಬಹುದು.

೫. ಕಾರ್ಯಾಲಯದಲ್ಲಿರುವ **ಶ್ರೀ ಸಚ್ಚಿದಾನಂದ ಅಧ್ಯಾತ್ಮ ವಿದ್ಯಾನಿಲಯ**ಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾಪ್ರಚಾರವನ್ನು ಮಾಡಿಸಬಹುದು.

೬. ಕಾರ್ಯಾಲಯದ ಕಟ್ಟಡಕ್ಕೂ ವಿದ್ಯಾನಿಲಯ, ಪೂಜಾಮಂದಿರ, ಗುರು ಮಂದಿರ, ಪುಸ್ತಕ ಭಂಡಾರ - ಇವಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನುಗಳಿಸಿಕೊಳ್ಳ ಬಹುದು.

**ದಾನಿಗಳು 80G (ಆದಾಯ ತೆರಿಗೆ ವಿನಾಯಿತಿ)ಯನ್ನು ಸಹ ಪಡೆಯಬಹುದು.**

ಹೆಚ್ಚಿನ ವಿಷಯಕ್ಕೆ ಕಾರ್ಯದರ್ಶಿಗಳಿಗೆ ಬರೆಯಿರಿ.

ಅಧ್ಯಾತ್ಮ ಗ್ರಂಥಾವಳಿ

# ಸಚ್ಚಿದಾನಂದಸೂಕ್ತಿಗಳು

ಸಂಗ್ರಾಹಕ :
**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೨೦೭

ಪ್ರಕಾಶಕರು :
**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ
೨೦೦೩

ಪ್ರಥಮ ಮುದ್ರಣ ೧೯೯೯ ೧೦೦೦ ಪ್ರತಿಗಳು

ದ್ವಿತೀಯ ಮುದ್ರಣ ೨೦೦೩ ೨೦೦೦ ಪ್ರತಿಗಳು

ಪುಟಗಳು : iv + 79

**ಬೆಲೆ : ರೂ. ೨೦/-**

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದವು**

ಅಕ್ಷರ ಜೋಡಣೆ :

**ಪ್ರಶಾಂತ್ ಎಂಟರ್‌ಪ್ರೈಸಸ್**

ನಂ. 213, ಬಾಲಾಜಿರಸ್ತೆ, ತ್ಯಾಗರಾಜನಗರ

ಬೆಂಗಳೂರು - 560 028

✆ : 6764650

ಮುದ್ರಣ ಸ್ಥಾನ :

**ಶ್ರೀಗಣೇಶಮಾರುತಿ ಪ್ರಿಂಟರ್ಸ್**

76, 6ನೇ ಮುಖ್ಯರಸ್ತೆ, 3ನೇ ಬ್ಲಾಕ್

ತ್ಯಾಗರಾಜನಗರ, ಬೆಂಗಳೂರು - 560 028

✆ : 6766342

# ಮುನ್ನುಡಿ

ಬ್ರಹ್ಮೀಭೂತ ಪರಮಹಂಸ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯನ್ನು ತಮ್ಮ ಪೂರ್ವಾಶ್ರಮದಲ್ಲಿಯೇ 1923 ನೆಯ ಮಾರ್ಚಿಮಾಹೆಯಿಂದ ಆರಂಭಿಸಿ ಹದಿನೈದುವರ್ಷಗಳ ಕಾಲ ಪ್ರಕಟಿಸಿದ ಅನಂತರ ಆರ್ಥಿಕ ಅಡಚಣೆಗಳಿಂದ 1944ನೇ ಆಗಸ್ಟ್ಮಾಹೆಯಲ್ಲಿ ನಿಲ್ಲಿಸಿದ್ದರು. ಅನಂತರ 1946ನೇ ಸೆಪ್ಟೆಂಬರ್‌ನಿಂದ ಮತ್ತೆ ಪ್ರಾರಂಭಿಸಿ 1975ನೇ ಜನವರಿ ಮಾಹೆಯವರೆಗೂ ಪತ್ರಿಕೆಗೆ ತಮ್ಮ ಲೇಖನಗಳನ್ನು ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದರು. ಮುಂದೆ ವಯೋಧರ್ಮನಿಮಿತ್ತ ಬರವಣಿಗೆಯಿಂದ ವಿಶ್ರಾಂತರಾಗಿ 1975ನೇ ಆಗಸ್ಟ್ ಮಾಹೆಯಲ್ಲಿ ಬ್ರಹ್ಮೀಭೂತರಾದರು. ಆ ವೇಳೆಗೆ ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ 23 ವರ್ಷಗಳಿಂದಲೂ ಪಂಡಿತರಾಗಿದ್ದ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳಿಗೆ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಟ್ಟು ಪತ್ರಿಕೆಯ ಪ್ರಕಟಣೆಯನ್ನು ಮುಂದುವರೆಸಲಾಯಿತು. ಸದ್ಗುರುಗಳ ಕೃಪೆಯಿಂದ ಈಗಲೂ ಪತ್ರಿಕೆಯು ಮುಂದುವರೆದು ಪ್ರಕಟವಾಗುತ್ತಿದೆ.

1946ನೇ ಸೆಪ್ಟೆಂಬರ್‌ನಿಂದ 1975ನೇ ಫೆಬ್ರವರಿವರೆಗೆ ಪ್ರಕಟವಾಗಿರುವ '**ಅಧ್ಯಾತ್ಮ ಪ್ರಕಾಶ**' ಮಾಸಪತ್ರಿಕೆಯ ರಕ್ಷಾಪತ್ರದ ಕೊನೆಯ ಪುಟದಲ್ಲಿ ಶ್ರೀ ಶ್ರೀಗಳವರು ಪತ್ರಿಕೆಯ ಮುಖಪುಟದಿಂದ ಪ್ರಾರಂಭಿಸಿ ಬರೆಯುತ್ತಿದ್ದ "**ಸಂಪಾದಕರ ಸಂದೇಶ**" ಎಂಬ ಲೇಖನದ ಸಾರವನ್ನು ಆರೆಂಟುಸಾಲುಗಳಲ್ಲಿ ಸಂಗ್ರಹಿಸಿ **ಕೀಳಿರಿ** ಎಂಬ ಹೆಸರಿನಿಂದ ಪ್ರಕಟಿಸುತ್ತಿದ್ದರು. ಈ ಸೂಕ್ತಿಗಳು ಬಹಳ ಅರ್ಥಗರ್ಭಿತವೂ ಗಂಭೀರವೂ ಆಗಿದ್ದು ವೇದಾಂತ ದರ್ಶನದ ತಿರುಳನ್ನು ಒಳಗೊಂಡಿದ್ದವು. ಇಂಥ ಸೂಕ್ತಿಗಳು ಅಧ್ಯಾತ್ಮ ವಿಚಾರಪ್ರೇಮಿಗಳಿಗೆ ರುಚಿಕರವಾಗಿರುವವೆಂದು ಭಾವಿಸಿ ಪಂಡಿತ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು "**ಸಚ್ಚಿದಾನಂದ ಸೂಕ್ತಿಗಳು**" ಎಂಬ ಹೆಸರಿನಿಂದ ಗ್ರಂಥರೂಪವಾಗಿ ಈಗ ಸಿದ್ಧಗೊಳಿಸಿರುತ್ತಾರೆ. ಭಾರತ ದೇಶದ ಅನೇಕ ಮಹಾತ್ಮರುಗಳ ಸೂಕ್ತಿಗಳಂತೆ ಇವು ಕೂಡ ಮನನೀಯವಾಗಿವೆ. ವಾಚಕರು ಇವುಗಳನ್ನು ಪಠಿಸಿ, ಮನನ ಮಾಡಿಕೊಂಡು ಅಧ್ಯಾತ್ಮಜ್ಞಾನವನ್ನು ಪಡೆದುಕೊಳ್ಳುವಂತೆ ಗುರುಗಳು ಅನುಗ್ರಹಿಸಲೆಂದು ಪ್ರಾರ್ಥಿಸಿ ಈ ಪುಸ್ತಕವನ್ನು ವಾಚಕರಿಗೆ ಸಮರ್ಪಿಸಲಾಗಿದೆ.

ಬೆಂಗಳೂರು ಶಾಖಾಕಾರ್ಯಾಲಯದ ಅಧ್ಯಕ್ಷರಾದ ಶ್ರೀ ಬಿ. ಆರ್. ಸತ್ಯನಾರಾಯಣ (ಗಜಾನನ)ರವರು ಈ ಗ್ರಂಥದ ಪ್ರಕಟಣೆಗೆ ಒಂದುಸಾವಿರದ ಒಂದು (ರೂ. 1,001) ರೂಪಾಯಿಗಳನ್ನು ಸಮರ್ಪಿಸಿ ಸಹಾಯಮಾಡಿದ್ದಾರೆ. ಇವರಿಗೆ ನಮ್ಮ ಕೃತಜ್ಞತೆಗಳನ್ನು ಈ ಮೂಲಕ ಸಮರ್ಪಿಸುತ್ತೇವೆ.

ಹೊಳೆನರಸೀಪುರ
12- 1- 1999

**ಅಧ್ಯಕ್ಷರು,**
ಅಧ್ಯಾತ್ಮಪ್ರಕಾಶ ಕಾರ್ಯಾಲಯ

# ದ್ವಿತೀಯ ಮುದ್ರಣಕ್ಕೆ ಮುನ್ನುಡಿ

ಈ ಗ್ರಂಥದ ಪ್ರಥಮ ಮುದ್ರಣದ (1999) ಪ್ರತಿಗಳು ವಾಚಕರ ಕೈಸೇರಿ ಗ್ರಂಥವು ಪ್ರಕಟವಾದ ನಾಲ್ಕು ವರ್ಷಗಳಲ್ಲಿಯೇ ಪ್ರತಿಗಳೆಲ್ಲವೂ ಮಾರಾಟವಾದ್ದರಿಂದ ಈಗ ಎರಡನೆಯ ಬಾರಿಗೆ ಪರಿಷ್ಕರಿಸಿ ಪರಿಶಿಷ್ಟದೊಡನೆ ಮತ್ತೊಮ್ಮೆ ಮುದ್ರಿಸಿ ಸನ್ಮಾನ್ಯ ವಾಚಕ ವೃಂದಕ್ಕೆ ಸಮರ್ಪಿಸಲಾಗಿದೆ.

ಈ ಗ್ರಂಥವನ್ನು ಆಸಕ್ತಿಯಿಂದ ಅಧ್ಯಯನಮಾಡಿದ ತುಮಕೂರಿನ ಶ್ರೀ|| ವಿ. ರಾಮಮೂರ್ತಿ - ಎಂಬ ವಾಚಕರು ಗ್ರಂಥ ಶರೀರದ ಎಲ್ಲಾ ಸೂಕ್ತಿಗಳಲ್ಲಿರುವ ಪ್ರಧಾನವಾದ ಒಂದು ಪದವನ್ನು ಗುರುತಿಸಿ ಅದರ ವಿವರಣೆಯೇ ಆ ಸೂಕ್ತಿಯ ಅಭಿಪ್ರಾಯವೆಂದು ಗೊತ್ತುಮಾಡಿ ವಾಚಕರಿಗೆ ಇಷ್ಟವಾದ ಹಾಗೂ ಅನುಷ್ಠೇಯವಾದ ಆಯಾ ಸಾಧನ-ಸಿದ್ಧಾಂತಗಳ ವಿವರಗಳನ್ನು ಅನುಸಂಧಾನಮಾಡಲು ಅನುಕೂಲಿಸುವಂತೆ ಒಂದು ಪರಿಶಿಷ್ಟವನ್ನು ಸಿದ್ಧಗೊಳಿಸಿ ಸಮರ್ಪಿಸಿರುತ್ತಾರೆ. ಈ ಮಹನೀಯರ ಸೇವೆಯ ಫಲವು ವಾಚಕರೆಲ್ಲರಿಗೂ ಉಪಯೋಗವಾಗಲೆಂದು ಗ್ರಂಥದ **ಪರಿಶಿಷ್ಟ**ದಲ್ಲಿ ಅಳವಡಿಸಲಾಗಿದೆ. ಸನ್ಮಾನ್ಯ ವಾಚಕರು ಇದರ ಪ್ರಯೋಜನವನ್ನು ಪಡೆದುಕೊಳ್ಳುವರೆಂದು ಭಾವಿಸಲಾಗಿದೆ. ಈ ಸೇವೆಯನ್ನು ಸಲ್ಲಿಸಿರುವ ಶ್ರೀ|| ರಾಮಮೂರ್ತಿಗಳಿಗೆ ಸದ್ಗುರುಗಳ ಕೃಪಾನುಗ್ರಹವು ಲಭಿಸಲೆಂದು ಹಾರೈಸುವೆವು.

ಈ ಗ್ರಂಥದಂತೆಯೇ **ಸಚ್ಚಿದಾನಂದಮನನ** ಎಂಬ ಗ್ರಂಥವೂ ಸಹ ಕಾರ್ಯಾಲಯದಿಂದ ಈಚೆಗೆ ಪ್ರಕಟಿತವಾಗಿದೆ. 1949 ರಿಂದ 1955ರವರೆಗೆ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಶ್ರೀಶ್ರೀಗಳವರ 58 ಲೇಖನಗಳಲ್ಲಿ ಬರೆದಿರುವ 352 ಅಧ್ಯಾತ್ಮ ಉಪದೇಶಗಳ **ಸಂಕಲನ.** ಸಾಮಾನ್ಯ ಓದುಬರಹ ಪರಿಚಯವುಳ್ಳ ಯಾವ ಸಾಧಕನಾದರೂ ಈ ಎರಡು ಗ್ರಂಥಗಳನ್ನು ಹಾರ್ದಿಕವಾಗಿ ಸ್ವೀಕರಿಸಿ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜೀವನ್ಮುಕ್ತನಾಗಿ ಕೃತಾರ್ಥನಾಗಲು ಸಹಾಯಕವಾಗಿವೆ.

ಈ ಗ್ರಂಥಪ್ರಕಟನೆಗೆ ಬೆಂಗಳೂರಿನಲ್ಲಿರುವ ಅಂತರಂಗಭಕ್ತರೊಬ್ಬರು 5000ರೂ. ಮತ್ತು ಬೆಂಗಳೂರು ಜಯನಗರ ನಾಲ್ಕನೇ ಟಿ ಬ್ಲಾಕ್‌ನಲ್ಲಿರುವ ವೈ. ವಿ. ನಾರಾಯಣರಾಯರು 4000ರೂ. ಗಳನ್ನು ಉದಾರವಾಗಿ ಸಹಾಯಮಾಡಿರುತ್ತಾರೆ. ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳು.

ಎಂದಿನಂತೆ ವಾಚಕರು ಈ ಎರಡು ಗ್ರಂಥಗಳನ್ನು ಓದಿ ಕೃತಾರ್ಥರಾದಲ್ಲಿ ಕಾರ್ಯಾಲಯದ ಶ್ರಮ ಸಾರ್ಥಕವಾಗುವುದು.

26.7.2003<br>
ಶ್ರೀ ಸ್ವಭಾನುಸಂವತ್ಸರ,<br>
ಆಷಾಢ ಬಹುಳ ತ್ರಯೋದಶಿ

**ಪ್ರಕಾಶಕರು**

# ಸಚ್ಚಿದಾನಂದಸೂಕ್ತಿಗಳು

(ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು)

೧. ಪರಮೇಶ್ವರನು ಎಲ್ಲರಿಗೂ **ಸಮ**ನಾಗಿರುತ್ತಾನೆ. ಅವನಿಗೆ ಹಗೆಯಿಲ್ಲ; ನೆಚ್ಚಿನ ಗೆಳೆಯನೂ ಇಲ್ಲ. ಆತನನ್ನೇ ಅನನ್ಯಭಕ್ತಿಯಿಂದ ನಂಬಿದವನಿಗೆ ಆತನ ಅನುಗ್ರಹ ವುಂಟು, ಮತ್ತೆ ಯಾವದನ್ನು ನಂಬಿದರೂ ಸುಖವಿಲ್ಲ. ಜೀವನದಲ್ಲಿ ಪರಮೇಶ್ವರನ ಬಲವೇ ಬಲ.

೨. ಪರಮೇಶ್ವರನು ಎಲ್ಲೆಲ್ಲಿಯೂ ಇರುತ್ತಾನೆ. ಅವನ **ಇರವ**ನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಮನಸ್ಸಿನಲ್ಲಿ ಒಂದು ಭಾವನೆಯುಂಟಾಗಬೇಕಾಗುತ್ತದೆ. ವಾಯುವು ನಮ್ಮ ಸುತ್ತಮುತ್ತಲೂ ಇದೆ. ನಾವು ವಾಯುವಿನ ಬಲದಿಂದಲೇ ಉಸಿರಾಡುತ್ತಾ ಬದುಕಿರುವೆವು. ಆದರೆ ಈ ವಿಷಯವನ್ನು ಲಕ್ಷ್ಯವಿಟ್ಟು ಮನದಂದುಕೊಳ್ಳುವವರಿಗೆ ಮಾತ್ರ ಅನುಭವವುಂಟಾಗುತ್ತದೆ.

೩. ಧರ್ಮ, ಜ್ಞಾನ, ವೈರಾಗ್ಯ, ಶಕ್ತಿ , ದಯೆ, ಪ್ರೇಮ - ಮುಂತಾದ ಕಲ್ಯಾಣ ಗುಣಗಳೆಲ್ಲವೂ ಪರಮೇಶ್ವರನಿಂದಲೇ ಬಂದಿರುತ್ತವೆ. ಮೆಚ್ಚತಕ್ಕ, ಹರ್ಷದಾಯಕವಾದ, ಉತ್ಸಾಹವನ್ನುಂಟುಮಾಡುವ, ಶಾಂತಿಯನ್ನು ಕೊಡುವ ಗುಣಗಳು ಎಲ್ಲಿ ಕಂಡರೂ ಅವು ಭಗವಂತನಿಂದಲೇ ಬಂದಿರುತ್ತವೆ. ಸೂರ್ಯನ ಕಿರಣಗಳು ಭೂಮಿಯನ್ನು ವ್ಯಾಪಿಸಿರುವಂತೆ ಪರಮಾತ್ಮನ **ಕಲ್ಯಾಣಗುಣ**ಗಳೇ ನಮ್ಮ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿಕೊಂಡಿರುವವೆಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಆಗ ನಮ್ಮಲ್ಲಿ ಶಾಂತಿಸುಖಗಳು ನೆಲೆನಿಲ್ಲುವವು.

೪. ಮಲ್ಲಿಗೆಯ ಹೂವಿಗೆ ಯಾವ ಹೆಸರಿಟ್ಟರೂ ಅದು ಅಷ್ಟೇ ಘಮಘಮಿಸುತ್ತಿರುವದು. ಭಗವಂತನನ್ನು ಯಾವ ಹೆಸರಿನಿಂದ ಕರೆದರೂ ಆತನ ಕಲ್ಯಾಣಗುಣಗಳ ಪರಿಮಳವು ಅಷ್ಟೇ ಮನಮೋಹಕವಾಗಿರುವದು. ಭಗವಂತನ ಹೆಸರಿಗೂ ಆತನ ದಿವ್ಯವಾದ ಗುಣಕ್ಕೂ ಇರುವ **ಸಂಬಂಧ**ವನ್ನು ಮರೆಯದೆ ಇರಿ. ಭಗವಂತನ ನಾಮವು ನಮ್ಮನ್ನು ಪಾವನಗೊಳಿಸಿ ಸುಖಶಾಂತಿಗಳ ನಿತ್ಯಧಾಮದೊಳಕ್ಕೆ ಪ್ರವೇಶಮಾಡಿಸುತ್ತದೆ.

೫. ಪರಮೇಶ್ವರನನ್ನು ಧ್ಯಾನಿಸುವದಕ್ಕೆ ನಿಮ್ಮನಿಮ್ಮ ಹೃದಯವೇ ಸರಿಯಾದ ಸ್ಥಳ. ಅದರಷ್ಟು ಏಕಾಂತವಾಗಿರುವ ದೇವರಕೋಣೆಯು ಬೇರೊಂದಿರುವದಿಲ್ಲ. ಮಾನವರೆಲ್ಲರೂ ಭ್ರಾತೃಗಳೆಂಬ ಭಾವನೆಯ ಅಭ್ಯಾಸದಿಂದ ಅದನ್ನು **ಚೊಕ್ಕಟ**ವಾಗಿಟ್ಟುಕೊಳ್ಳಿರಿ. ಸಕಲಪ್ರಾಣಿಗಳನ್ನೂ ಪ್ರೇಮದಿಂದ ಕಾಣುವ ಭಾವದಿಂದ ಅದನ್ನು ನಿರ್ಮಲಗೊಳಿಸಿರಿ. ಆಗ ಅಲ್ಲಿ ಪರಮೇಶ್ವರನು ನಿಮ್ಮ ಆರಾಧನೆಯನ್ನು ಸ್ವೀಕರಿಸುವನು.

೬. ಧರ್ಮ, ಅರ್ಥ, ಕಾಮ, ಮೋಕ್ಷ - ಇವು ನಾಲ್ಕು ಪುರುಷಾರ್ಥಗಳು. ಪುರುಷನು ಬೇಡುವ ಈ ನಾಲ್ಕೂ ಭಗವಂತನ **ಸ್ಮರಣೆ**ಯಿಂದಲೇ ದೊರಕಬೇಕಾಗಿರುತ್ತದೆ. ಇಹದಲ್ಲಿ ನಮಗೆ ಒಳ್ಳೆಯದಾಗುವದಕ್ಕಾಗಲಿ ಪರದಲ್ಲಿ ಸದ್ಗತಿಯಾಗುವದಕ್ಕಾಗಲಿ ಭಗವಂತನನ್ನೇ ನಾವು ನಂಬಬೇಕು. ನಿಮ್ಮ ಜೀವನವು ಸುಖಶಾಂತಿಗಳಿಂದ ಕೂಡಿರಬೇಕಾದರೆ ಭಗವಂತನನ್ನು ತಪ್ಪದೇ ಸ್ಮರಿಸುತ್ತಿರಿ.

೭. ಮನಸ್ಸೆಂಬುದು ಮನನಮಾಡುವ ಯಂತ್ರವು. ಇದನ್ನು ಸರಿಯಾಗಿ ಉಪಯೋಗಿಸಿಕೊಂಡು ದೇವತ್ವಕ್ಕೆ ಏರಬಹುದು. ತಪ್ಪಾಗಿ ಉಪಯೋಗಿಸಿ ಜೀವನವನ್ನು ನರಕವಾಗಿಯೂ ಮಾಡಿಕೊಳ್ಳಬಹುದು. ಮನಸ್ಸಿಗೆ ಸರಿಯಾದ **ಸಂಸ್ಕಾರ**ವನ್ನು ಮಾಡಿ ಕೊಂಡು ದೇವತ್ವಕ್ಕೆ ಏರುವ ಮನನಮಾರ್ಗವನ್ನು ತಿಳಿಸಿಕೊಡುವ ಅಧ್ಯಾತ್ಮವಿದ್ಯೆಯನ್ನು ಸಂಪಾದಿಸಿಕೊಳ್ಳುವದೇ ಮಾನವಜನ್ಮದ ಸಾರ್ಥಕ್ಯವು.

೮. ಅಂತಃಕರಣವೆಂಬುದು ಒಂದು ಹೊಲದಂತೆ ಇರುತ್ತದೆ. ಹೊಲವನ್ನು ಚೆನ್ನಾಗಿ ಉತ್ತು ಕಾಲದಲ್ಲಿ ಒಳ್ಳೆಯ ಬೀಜವನ್ನು ಬಿತ್ತುತ್ತಿರಬೇಕು. ಅದು ಪಾಳುಬಿದ್ದರೆ ನಿಮಗೆ ಬೇಡದ ಗಿಡಗಳೆಲ್ಲ ಬೆಳೆದುಕೊಂಡುಬಿಡುತ್ತವೆ. ಅಂತಃಕರಣದಲ್ಲಿ ಒಳ್ಳೆಯ ಸಂಸ್ಕಾರವಾಗುವಂಥ ಉತ್ತಮಭಾವನೆಗಳನ್ನು ಬಿತ್ತುತ್ತಿರಬೇಕು. ಅದನ್ನು ಹಾಗೇ ಬಿಟ್ಟರೆ ದುರ್ಭಾವನೆಗಳು ಎದ್ದುಕೊಳ್ಳುತ್ತವೆ. ಹೊಲದ ನೆಲದ ಸ್ವಭಾವಕ್ಕೆ ತಕ್ಕಂತೆ ಪೈರು ಬೆಳೆಯುತ್ತದೆ. ಹಾಗೆಯೇ ಅಂತಃಕರಣದ **ವಾಸನಾಶಯಕ್ಕೆ** ತಕ್ಕಂತೆ ಅದರಲ್ಲಿ ಭಾವನೆಗಳು ಎದ್ದುಕೊಳ್ಳುತ್ತವೆ.

೯. ನಿಮ್ಮ ಭಾವನೆಗಳು ಮಂತ್ರಾಸ್ತ್ರಗಳಂತೆ ಇರುವವು. ಎಂಥ ಭಾವನೆಯನ್ನು ಮಾಡುವಿರೋ ಅಂಥ ವಾಸನೆಗಳು ಅಂತಃಕರಣದಲ್ಲಿ ತಳವೂರಿಕೊಳ್ಳುವವು. ಅವಕ್ಕೆ ವಿರುದ್ಧವಾದ ವಾಸನೆಗಳನ್ನು ನಿರ್ಬಲಗೊಳಿಸಿ ಕ್ರಮಕ್ರಮವಾಗಿ ಅವುಗಳನ್ನು ನಿರ್ಮೂಲ ಗೊಳಿಸುವವು. ಆದ್ದರಿಂದ ನಿಮ್ಮ **ಭಾವನೆ**ಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಿ.

೧೦. ನಿಮ್ಮ **ಮನಸ್ಸೇ** ನಿಮ್ಮ ಜೀವನವನ್ನು ಸುಖಮಯವಾಗಿ ಅಥವಾ ದುಃಖಮಯವಾಗಿ ಮಾಡುತ್ತಿರುವದು. ಮನಸ್ಸಿನಲ್ಲಿ ಉತ್ತಮವಾದ ಭಾವನೆಗಳೇ ಬರುತ್ತಿದ್ದರೆ ಅದರಲ್ಲಿ ದುಃಖವು ಎಂದೆಂದಿಗೂ ತಲೆದೋರದೆ ಇರುವದು. ಉತ್ತಮ ಭಾವನೆಗಳು ಮಾತ್ರವೇ ಮನಸ್ಸಿನಲ್ಲಿ ಮನೆಮಾಡಿಕೊಳ್ಳಬೇಕಾದರೆ ಅದನ್ನು ಯಾವಾಗಲೂ ಭಗವಂತನಿಗೆ ಸಂಬಂಧಿಸಿಕೊಳ್ಳಬೇಕು. ಅದು ಭಗವನ್ಮಯವಾಗಬೇಕು.

೧೧. ನಿಮಗೆ ಬೇಕಾಗಿರುವ ಆಹಾರ, ಬಟ್ಟೆ, ಭೋಗ್ಯವಸ್ತುಗಳು - ಎಲ್ಲವೂ ಈಶ್ವರನ ಅನುಗ್ರಹದಿಂದಲೇ ದೊರೆಯತಕ್ಕವು. ಭೋಗ್ಯವಸ್ತುಗಳನ್ನು ಅನುಭವಿಸುವದಕ್ಕೆ ಬೇಕಾದ ಆರೋಗ್ಯ, ಬಲ, ಬುದ್ಧಿ- ಮುಂತಾದವುಗಳೂ ಆತನಿಂದಲೇ ಪಡೆದುಕೊಳ್ಳ ಬೇಕಾದವುಗಳು. ಪರಮೇಶ್ವರನನ್ನೇ ಭಕ್ತಿಯಿಂದ **ಶರಣು**ಹೋಗುವವರಿಗೆ ಇಂದ್ರಿಯಗಳ

ದಾಸರಾಗದಂಥ ಸ್ವಾತಂತ್ರ್ಯವನ್ನೂ ಆನಂದವನ್ನೂ ಆತನೇ ಕೊಡುವನು. ಆತನನ್ನೇ ಮರೆಹೊಗಬೇಕು. ಆತನೇ ನಿಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ.

**೧೨.** ನಮ್ಮ ಬುದ್ಧಿಯು ಯಾವ ದಿಕ್ಕಿನಲ್ಲಿ ಹರಿಯುತ್ತಿರುವದೋ ಅದಕ್ಕೆ ತಕ್ಕಂತೆ ನಮ್ಮ ಹೊರಜೀವನವು ರೂಪಿಸಿಕೊಳ್ಳುವದು. ಬುದ್ಧಿಯನ್ನು ಉತ್ತಮವಾದ **ಹಾದಿ**ಯಲ್ಲಿ ಹೋಗುವಂತೆ ಮಾಡುವದಕ್ಕೆ ಭಗವಂತನನ್ನು ಬೇಡಿಕೊಳ್ಳುವದೇ ಉತ್ತಮವಾದ ಉಪಾಯ. 'ಭಗವಂತನೆ, ನಮಗೆ ಒಳ್ಳೆಯ ಬುದ್ಧಿಯನ್ನು ಕೊಡು' ಎಂಬುದು ಪ್ರಾರ್ಥನೆಗಳಲ್ಲೆಲ್ಲ ಉತ್ತಮವಾದದ್ದು.

**೧೩.** ಭಗವಂತನ ಚಿಂತನೆಯನ್ನು ಎಡೆಬಿಡದೆ ಮನಃಪೂರ್ವಕವಾಗಿ **ಶ್ರದ್ಧಾ**ಪೂರ್ವಕವಾಗಿ ಮಾಡುವವರ ಹೃದಯದಲ್ಲಿ ಭಗವಂತನು ಮನೆಮಾಡಿಕೊಳ್ಳುವನು. ಅಂಥವರ ಅಂತಃಕರಣದಲ್ಲಿ ಸಂಸಾರಿಗಳನ್ನು ಗೋಳುಗುಟ್ಟಿಸುತ್ತಿರುವಂಥ ದುಷ್ಟ ಆಲೋಚನೆಗಳಿಗೆ ಎಡೆಯೇ ಇರುವದಿಲ್ಲ.

**೧೪.** ಭಗವಂತನ ನಾಮವನ್ನು ಭಾವಪೂರ್ವಕವಾಗಿ ಉಚ್ಚರಿಸಿರಿ. ನಿಮ್ಮ ಜೀವನದ ಎಡರುಗಳನ್ನು ಧ್ವಂಸಗೊಳಿಸುವ ಶತಘ್ನಿಯದು. ನಿಮ್ಮ ಹೃದಯವನ್ನು **ನಿರ್ಮಲ**ಗೊಳಿಸುವ ದೇವಗಂಗೆಯದು.

**೧೫.** ಅಂತಃಕರಣವು ಭಗವಂತನ **ಪ್ರಾರ್ಥನೆ**ಯಿಂದ ಅಲ್ಪವಾದ ಈ ಸಂಸಾರದ ಸಂಕಟಗಳನ್ನು ಚಿಂತಿಸುವದನ್ನು ಬಿಟ್ಟು ಅನಂತವಾದ ಭಗವಂತನ ಮಹಿಮೆಯನ್ನು ಚಿಂತಿಸುವದಕ್ಕೆ ಮೊದಲಾಗುತ್ತದೆ. ಆಗ ಅದಕ್ಕೆ ಹೊಸ ಹುರುಪು, ಬಲ, ಉತ್ಸಾಹ - ಇವೆಲ್ಲವೂ ಸೇರಿಕೊಳ್ಳುತ್ತವೆ. ಈ ಹೆಚ್ಚಿನ ಸ್ಥಿತಿಯಲ್ಲಿ ಅಂತಃಕರಣದಲ್ಲಿರುವ ರಜಸ್ತಮೋಗುಣಗಳು ಮರೆಯಾಗಿ ಬರಿಯ ಸತ್ತ್ವಗುಣವೊಂದೇ ಉಳಿದುಕೊಳ್ಳುವದು. ಆಗ ಅಂತಃಕರಣಕ್ಕೆ ಪರಮಾರ್ಥವನ್ನು ಅರಿತುಕೊಳ್ಳುವ ಯೋಗ್ಯತೆಯು ಬರುತ್ತದೆ. ಕೆಟ್ಟ ವಾಸನೆಗಳ ಅಯುಕ್ತಭಾವನೆಗಳ ಕಾಟವೂ ತಪ್ಪಿ ಹೋಗುತ್ತದೆ.

**೧೬.** ಭಗವಂತನ **ನಾಮ**ವನ್ನು ಅರ್ಥಾನುಸಂಧಾನಪೂರ್ವಕವಾಗಿ ಉಚ್ಚರಿಸುವವರಿಗೆ ಕರಣತ್ರಯಗಳಲ್ಲಿಯೂ ಹೊಸ ಸಂಸ್ಕಾರವೊಂದು ಉಂಟಾಗುವದು. ಅವರ ಅಹಂಮತಿಯು ಮಾಯವಾಗಿ ಹೃದಯವು ಪರಮಾನಂದಸ್ವರೂಪನಾದ ಪರಮೇಶ್ವರನು ಕುಳಿತಿರುವ ಗದ್ದುಗೆಯಾಗುವದು.

**೧೭.** ಭಗವಂತನನ್ನು ಗೌರವಿಸುವಂತೆಯೇ ಆತನ ನಾಮವನ್ನೂ **ಗೌರವಿಸ**ಬೇಕು. ನಾಮವು ಬರಿಯ ಶಬ್ದವೆಂದು ಅಸಡ್ಡೆಮಾಡಬಾರದು. ಭಗವನ್ನಾಮದಲ್ಲಿ ಆತನ ಚೈತನ್ಯವು ಎಲ್ಲೆಲ್ಲಿಯೂ ತುಂಬಿತುಳುಕುತ್ತಿರುತ್ತದೆ. ಭಗವಂತನ ಶಕ್ತಿಯು ಭಗವನ್ನಾಮದಲ್ಲಿಯೇ ಕಾಣುತ್ತದೆ.

**೧೮.** ಭಗವಂತನ ಅರ್ಚನೆಯು ಹೃದಯದ ಭಾವವನ್ನು ಎಚ್ಚರಗೊಳಿಸುವಂಥದ್ದಾಗಿರಬೇಕು. ಹೊರಗಿನ ಜಗತ್ತಿನಲ್ಲಿ ಕಾಣುವ ಭವ್ಯದೃಶ್ಯಗಳು, ಉತ್ತಮಜೀವರುಗಳು - ಎಲ್ಲವೂ ಭಗವತ್‌ಪೂಜೆಗೆ **ದ್ವಾರ**ಗಳು. ಇಡಿಯ ಜಗತ್ತೇ ಭಗವಂತನ ಶರೀರವೆಂದು ಭಾವಿಸುವ ಅರ್ಚನೆಯು ಒಂದು ಉತ್ತಮಪೂಜೆಯು.

**೧೯.** ಭಗವಂತನಿಗೆ ವ್ಯಕ್ತವೆಂದೂ ಅವ್ಯಕ್ತವೆಂದೂ ಎರಡು ರೂಪಗಳಿರುತ್ತವೆ. ಅವ್ಯಕ್ತರೂಪದಲ್ಲಿ ಆತನು ನಮ್ಮಗಳೆಲ್ಲರ ಆತ್ಮನಾಗಿರುತ್ತಾನೆ. ಆತನಲ್ಲಿ ಮನಸ್ಸನ್ನು ನೆಲೆ ನಿಲ್ಲಿಸುವ **ಧ್ಯಾನವೇ** ಅವ್ಯಕ್ತರೂಪದ ಅರ್ಚನೆಯು. ಅವ್ಯಕ್ತದ ಧ್ಯಾನದಿಂದ ಮನಸ್ಸಿನಲ್ಲಿ ಶಾಂತಿಯು ನೆಲೆಗೊಳ್ಳುವದು. ಜೀವನದ ವ್ಯವಹಾರವೆಲ್ಲವೂ ಸುಪಥವಾಗುವದು.

**೨೦.** ಭಗವಂತನನ್ನು ಧ್ಯಾನಿಸಬೇಕೆನ್ನುವವರು ಅಂತಃಕರಣದ ಮೇಲುಭಾಗದಲ್ಲಿ ಏಳುವ **ವೃತ್ತಿ**ಗಳನ್ನು ತಡೆದುಕೊಳ್ಳಬೇಕು. ಒಳಕ್ಕೆ ಆಳವಾಗಿ ಇಳಿದು ಆತ್ಮಸ್ವರೂಪದಲ್ಲಿ ನಿಲ್ಲಬೇಕು. ಅಲ್ಲಿ ಹೆಚ್ಚಿನ ಶಾಂತಿಯೂ ಸುಖವೂ ಸೂರೆಯಾಗುವವು.

**೨೧.** ವಿಷಯಗಳ ಸಂಸ್ಪರ್ಶದಿಂದ ದುಃಖವು ತಪ್ಪದೆ ಆಗುವದು. ಅದರಿಂದಾಗುವ ಸುಖವು ನಿಜವಾಗಿಯೂ ಸುಖವಲ್ಲವೆಂಬುದು ಬ್ರಹ್ಮಸಂಸ್ಪರ್ಶದಿಂದ ಗೊತ್ತಾಗುವದು. **ಶುದ್ಧಚಿತ್ತ**ರಾದವರಿಗೆ ಮಾತ್ರ ಬ್ರಹ್ಮಸಂಸ್ಪರ್ಶವೂ ಅದರಿಂದಾಗುವ ಸುಖವೂ ಅನುಭವಕ್ಕೆ ಬರುವವು.

**೨೨.** ಇಷ್ಟಪ್ರಾಪ್ತಿಯಾಗಲಿ, ಅನಿಷ್ಟನಿವೃತ್ತಿಯಾಗಲಿ - ಹೊರಗಿನ ಸಹಾಯದಿಂದ ಆಗತಕ್ಕದ್ದಲ್ಲ. ನಮ್ಮ ಆತ್ಮನಾಗಿರುವ ಭಗವಂತನ **ಅನುಗ್ರಹ**ದಿಂದಲೇ ಆಗತಕ್ಕದ್ದಾಗಿರುತ್ತದೆ. ಭಗವಂತನ ಅನುಗ್ರಹವು ನಮ್ಮ ಅಂತಃಕರಣದ ಒಂದಾನೊಂದು ಮಾರ್ಪಾಡಿನಿಂದ ಆಗಬೇಕಾಗಿರುತ್ತದೆ. ಈ ಮಾರ್ಪಾಡನ್ನು ಧ್ಯಾನಯೋಗದಿಂದ ಪಡೆದುಕೊಳ್ಳಬಹುದು.

**೨೩.** ಎಲ್ಲಾ ಬಗೆಯ ಬಲಕ್ಕೂ ಪರಮಾತ್ಮನೇ **ಮೂಲವು**. ಹೊರಗಿನ ವಸ್ತುಗಳಿಂದ ಬಲವು ಬರುವದೆಂದು ನಂಬುವದು ತಪ್ಪು. ಅವುಗಳಲ್ಲಿರುವದೆಂದು ನಾವು ತಿಳಿಯುವ ಬಲಾಧಾನಶಕ್ತಿಯೂ ಪರಮಾತ್ಮನದೇ - ಎಂಬುದನ್ನು ಮರೆಯಬಾರದು. ಕೃತಕವಲ್ಲದ ಸಹಜವಾದ ಬಲವು ಬೇಕೆನ್ನುವವರು ಬಲದ ನಿಧಿಯಾಗಿರುವ ಪರಮಾತ್ಮನನ್ನು ಎಡೆಬಿಡದೆ ಧ್ಯಾನಿಸುತ್ತಿರಬೇಕು.

**೨೪.** **ಅಧ್ಯಾತ್ಮವಿದ್ಯೆ**ಯನ್ನು ವೈದ್ಯವಿದ್ಯೆಗೆ ಹೋಲಿಸುವದು ರೂಢಿಯಲ್ಲಿದೆ. ರೋಗದ ಸ್ವಭಾವ, ರೋಗದ ನಿದಾನ, ರೋಗದ ನಿವೃತ್ತಿ, ರೋಗನಿವೃತ್ತಿಯ ಉಪಾಯ - ಈ ನಾಲ್ಕನ್ನೂ ತಿಳಿದವನು ವೈದ್ಯನು. ಇದರಂತೆ ಸಂಸಾರದುಃಖ, ಆ ದುಃಖದ ಕಾರಣ, ದುಃಖನಿವೃತ್ತಿ, ದುಃಖನಿವೃತ್ತಿಯ ಉಪಾಯ - ಇವು ನಾಲ್ಕನ್ನೂ ತಿಳಿದವನು ಅಧ್ಯಾತ್ಮವಿದ್ಯಾವಿಶಾರದನು.

೨೫. ಮನುಷ್ಯನಿಗೆ **ಮುಪ್ಪೆಂ**ಬುದು ಸ್ವಾಭಾವಿಕವೆಂದು ಎಣಿಸುವದು ಸರಿಯಲ್ಲ. ಅನೇಕಸಂದರ್ಭಗಳಲ್ಲಿ ವಯಸ್ಸು ಬಹಳವಾಗುವದಕ್ಕೆ ಮೊದಲೇ ಶರೀರವು ಕುಂದಿ, ಚರ್ಮವು ಸುಕ್ಕಿ, ಅವಯವಗಳು ಶಿಥಿಲವಾಗಿರುತ್ತವೆ. ಇದಕ್ಕೆ ಅವರವರ ನಡತೆಗಳೂ ಮನಸ್ಸಿನಲ್ಲಿರುವ ಕೀಳುಭಾವನೆಗಳೂ ಕಾರಣವಾಗಿರುತ್ತವೆ. ಪೂರ್ಣವಯಸ್ಸು ಬಂದ ಮೇಲೂ ನಡುವಯಸ್ಸಿನ ಶರೀರದಾರ್ಢ್ಯವನ್ನೂ ಮುಖಕಾಂತಿಯನ್ನೂ ಇಟ್ಟುಕೊಂಡಿರಬಹುದು. ಅಜರನಾದ ಭಗವಂತನ ಚಿಂತನೆಯಿಂದ ಮುಪ್ಪಿನ ಹಾವಳಿಯನ್ನು ತಪ್ಪಿಸಿಕೊಳ್ಳುವದು ಎಲ್ಲರಿಗೂ ಸಾಧ್ಯವಾಗಿರುತ್ತದೆ.

೨೬. ಅನೇಕಜನರು ಸಾವಿಗೆ **ಅಂಜು**ತ್ತಾರೆ. ಆದರೆ ಬದುಕಿರುವಾಗಲೆ ತಮಗೆ ಒಂದು ಸಾವು ಬಂದಿದೆಯೆಂಬುದನ್ನು ಅರಿಯದೆ ಇರುತ್ತಾರೆ. ಎಲ್ಲರಿಗೂ ಆತ್ಮನಾದ ಭಗವಂತನೇ ತಮ್ಮ ಆತ್ಮನೆಂದು ಯಾರು ಇನ್ನೂ ಅರಿತುಕೊಂಡಿಲ್ಲವೋ ಅವರು ಬದುಕಿದ್ದರೂ ಸತ್ತಂತೆಯೇ. ಪರಮಾತ್ಮಸ್ವರೂಪವನ್ನು ಅರಿಯದವರು ಆತ್ಮಹತ್ಯೆಯನ್ನು ಮಾಡಿಕೊಂಡು ಆ ಪಾಪದ ಫಲದಿಂದ ಅಸುರರಾಗಿ ಸಂಸಾರದಲ್ಲಿ ತೊಳಲುತ್ತಿರುವರು. ಭಗವಂತನ ಧ್ಯಾನವನ್ನು ಎಡೆಬಿಡದೆ ಮಾಡಿರಿ. ಈಗ ಸತ್ತಂತಿರುವ ನಿಮ್ಮ ಆತ್ಮ ಸ್ವರೂಪವು ಬದುಕಿ ಚೇತರಿಸಿಕೊಂಡು ತನ್ನ ದಿವ್ಯಸ್ವರೂಪದಿಂದ ಬೆಳಗುವದು.

೨೭. ಪರಮೇಶ್ವರನು ಎಲ್ಲರಿಗೂ ಆತ್ಮನು. ಆತನು ಎಲ್ಲರ ಹದಯದಲ್ಲಿಯೂ **ಸಮ**ವಾಗಿಯೇ ಇರುತಾನೆ. ಎಲ್ಲರನ್ನೂ ಸಮವಾಗಿಯೇ ಪ್ರೀತಿಸುತ್ತಾನೆ. ನಮಗೆ ಈಗ ಉಂಟಾಗಿರುವ ಎಲ್ಲಾ ಸೌಕರ್ಯಗಳಿಗೂ ಭಗವಂತನೇ **ಮೂಲ**ವು. ನಮ್ಮ ಎಲ್ಲಾ ದುಃಖಗಳಿಗೂ ನಾವು ಭಗವಂತನಿಗೆ ವಿಮುಖರಾಗಿರುವದೇ ಕಾರಣವು. ಎಲ್ಲರಲ್ಲಿಯೂ ಇರುವ ಭಗವಂತನನ್ನು ಆರಾಧಿಸುವದೇ ಭಗವಂತನ ಪ್ರೇಮವನ್ನು ಸಂಪಾದಿಸಿಕೊಳ್ಳುವದಕ್ಕೆ ಉಪಾಯವು.

೨೮. ಭಗವಂತನ **ಪ್ರೇಮಕ್ಕೆ** ತಮ್ಮ ಹೃದಯವನ್ನು ಸಂಬಂಧಿಸಿಕೊಳ್ಳುವದಕ್ಕೆ ಸರ್ವಭೂತಪ್ರೇಮವು ಅತ್ಯವಶ್ಯವಾದ ಸಾಧನವು. ಆತನ ಪ್ರೇಮಕ್ಕೆ ನಮ್ಮ ಹೃದಯವು ಸಂಬಂಧಿಸಬೇಕಾದರೆ ನಮ್ಮ ಪ್ರೇಮದ ಕಾಲುವೆಗಳನ್ನು ನಮ್ಮ ಸುತ್ತಲೂ ಇರುವ ಜೀವರುಗಳ ಕಡೆಗೆ ಹಾಯಿಸಬೇಕು. ಭಗವಂತನನ್ನು ಪ್ರೀತಿಸುವದೆಂದರೂ ಒಂದೇ, ಆತನ ಮಕ್ಕಳಾದ ಜೀವರುಗಳನ್ನು ಪ್ರೀತಿಸುವದೆಂದರೂ ಒಂದೇ. ಜೀವರುಗಳನ್ನು ಪ್ರೀತಿಸದವನ ಧ್ಯಾನವು ಭಗವದ್ಧ್ಯಾನವಲ್ಲ.

೨೯. ಭಗವಂತನ ಮಾರ್ಗವೇ ಜೀವನಪಥದಲ್ಲಿ ಅನುಸರಿಸಬೇಕಾದ ಸರಿಯಾದ **ಮಾರ್ಗವು.** ಭಗವಂತನು ಅರ್ಜುನನಿಗೆ ಉಪದೇಶಿಸಿರುವ, ಭಕ್ತರ ಹೃದಯದಲ್ಲಿದ್ದುಕೊಂಡು ಈಗಲೂ ಅವರಿಗೆ ಉಪದೇಶಿಸುತ್ತಿರುವ ಮಾರ್ಗವೇ ಭಗವಂತನ **ಮಾರ್ಗವು.**

ಭಕ್ತರು ನಡೆಯುತ್ತಿರುವಂತೆ ನಡೆಯುತ್ತಿರಿ. ಅದೇ ಭಗವಂತನನ್ನು ಮುಟ್ಟಿಸುವ ಮಾರ್ಗವು.

**೩೦.** ಜೀವನದಲ್ಲಿ ಕಷ್ಟಗಳೇ ಬರಬಾರದೆಂತ ಬಯಸಬಾರದು. ಕಷ್ಟಗಳಿಲ್ಲದ ಜೀವನವೇ ಇಲ್ಲ. ಕಷ್ಟಗಳು ಬೇಕಾದಷ್ಟು ಬರಲಿ, ಅವುಗಳನ್ನು ಲೀಲಾಮಾತ್ರವಾಗಿ ದಾಟುವ, **ಅಥವಾ ತಾಳ್ಮೆ**ಯಿಂದ ತಡೆದುಕೊಳ್ಳುವ, ಶಕ್ತಿಯು ಇದ್ದರೆ ಸಾಕಾಗಿರುತ್ತದೆ. ಭಗವಂತನಲ್ಲಿಯೇ ಚಿತ್ತವಿರಲಿ, ಆತನ ಪ್ರಸಾದದಿಂದ ಎಂಥ ದುರ್ಗಗಳನ್ನಾದರೂ ದಾಟಬಹುದು.

**೩೧.** ಭಗವಂತನೇ ಆದಿಗುರು; ಭಗವಂತನೇ ಎಲ್ಲರಿಗೂ **ಗುರು;** ಭಗವಂತನನ್ನು ನಿಮ್ಮ ಹೃದಯಗುಹೆಯೊಳಗೆ ಕಂಡುಕೊಳ್ಳಿರಿ. ನಿಮ್ಮ ಸಂಶಯಗಳೆಲ್ಲವೂ ಕತ್ತರಿಸಿ ಹೋಗುವವು. ಭಗವಂತನನ್ನು ನೇರಾಗಿ ಕಾಣಲಾಗದಿದ್ದರೆ ಭಗವದ್ಭಕ್ತರ ಸಂಗವನ್ನಾದರೂ ಮಾಡಿರಿ. ನಿಮ್ಮ ಅಜ್ಞಾನದ ಮಬ್ಬು ನಾಶವಾಗುವದು. ಭಗವಂತನಲ್ಲಿ ಮನಸ್ಸನ್ನು ನೆಲೆನಿಲ್ಲಿಸಿಕೊಂಡವರ ಬೋಧನೆಯೇ ಶ್ರೋತೃಗಳ ಅಂತಃಕರಣದಮೇಲೆ ಪರಿಣಾಮವನ್ನುಂಟುಮಾಡುವದು. ಏಕೆಂದರೆ ಆಗ ಭಗವಂತನೇ ಅವರ ಮೂಲಕವಾಗಿ ಬೋಧಿಸುತ್ತಿರುವನು.

**೩೨.** ಇಡಿಯ ಜಗತ್ತಿಗೇ ಕೇಂದ್ರವಾಗಿರುವ ಪರಮಾತ್ಮನನ್ನು ನಮ್ಮ ಶರೀರದಲ್ಲಿಯೇ ಹೃದಯದೊಳಗೆ ಕಂಡುಕೊಳ್ಳಬೇಕು. ಈ **ಕೇಂದ್ರ**ವನ್ನು ಮುಟ್ಟಿ ಆತನ ಸನ್ನಿಧಿಯನ್ನು ಅನುಭವಿಸುವ ಸ್ಥಿತಿಯು ನಮ್ಮದಾದರೆ ನಮ್ಮ ಇಷ್ಟಾರ್ಥಗಳೆಲ್ಲ ನೆರವೇರುವವು. ಸತ್ಯಕಾಮನೂ ಸತ್ಯಸಂಕಲ್ಪನೂ ಆದ ಪರಮಾತ್ಮನೇ ನಮ್ಮ ಹೃದಯದಲ್ಲಿರುವನೆಂಬ ಭಾವನೆಯನ್ನು ಮನದಂದುಕೊಂಡು ಆತನನ್ನು ಕಂಡುಕೊಳ್ಳುವದಕ್ಕೆ ಮಾಡುವ ಪ್ರಯತ್ನಕ್ಕಿಂತಲೂ ಪರಮಪುರುಷಾರ್ಥಪ್ರದವಾದ ಬೇರೊಂದು ಸಾಧನವಿರುವದಿಲ್ಲ.

**೩೩.** ಮಾನವನ ಪ್ರಯತ್ನಕ್ಕೆ ಅಸಾಧ್ಯವಾದದ್ದು ಈಶ್ವರನ ಅನುಗ್ರಹದಿಂದ ಸುಲಭಸಾಧ್ಯವಾಗಿರುವದು. ಈಶ್ವರನಲ್ಲಿಯೇ ಮನಸ್ಸನ್ನು **ನೆಲೆ**ನಿಲ್ಲಿಸಿಕೊಳ್ಳಿರಿ. ನಿಮ್ಮ ಸಂಕಟಗಳ ಪರಿಹಾರ, ಮನಸ್ಸಿನ ಉಲ್ಲಾಸ, ಇಹಭೋಗಕ್ಕೆ ಬೇಕಾದ ಸಾಮಗ್ರಿಗಳು, ಪರಸುಖಕ್ಕೆ ಕಾರಣವಾದ ಅಧ್ಯಾತ್ಮಸಾಧನ- ಎಲ್ಲವೂ ನಿಮಗೆ ಆಯಾಸವಿಲ್ಲದೆ ದೊರಕುವವು.

**೩೪.** ಇಡಿಯ ಜಗತ್ತಿನ ಪರಮಮೂಲವಾಗಿರುವ, ಇಡಿಯ ಜಗತ್ತಿಗೆ ಪರಮಾಶ್ರಯನಾಗಿರುವ ಪರಮಾತ್ಮನ ಜ್ಞಾನವನ್ನು ಮಾಡಿಕೊಂಡು ಸರ್ವಾತ್ಮಭಾವನೆಯಿಂದ ಲೋಕದಲ್ಲಿ ವ್ಯವಹರಿಸುವದೇ ನಮ್ಮ ಬಾಳಿನ ಪರಮೋದ್ದೇಶವು.

**ಉದಾರಚರಿತ**ರಾದವರಿಗೆ ಇಡಿಯ ಪ್ರಪಂಚವೇ ಕುಟಂಬವಾಗಿರುವದು. ಎಲ್ಲರಿಗೂ ಸುಖಶಾಂತಿಗಳು ದೊರೆಯಲೆಂಬುದೇ ಅವರ ಹಾರೈಕೆಯಾಗಿರುವದು.

**೩೫.** ಸಂಸಾರದಲ್ಲಿ ಸುಖದುಃಖಗಳೆರಡೂ ನಮಗೆ ಒಂದೊಂದು ಹೊಸ ಅನುಭವವನ್ನು ಕೊಡುವದಕ್ಕಾಗಿ ಬರುತ್ತವೆ. ಆ **ಅನುಭವ**ವನ್ನು ನಾವು ತಂದುಕೊಂಡ ಹೊರತು ನಮಗೆ ಜೀವನಯಾತ್ರೆಯಲ್ಲಿ ಸಮಾಧಾನವುಂಟಾಗಲಾರದು. ಬರುವ ಘಟನೆಗಳನ್ನೆಲ್ಲ ಒಂದೇ ಮನಸ್ಸಿನಿಂದ ಸ್ವಾಗತಿಸುವದನ್ನೂ ನಮ್ಮ ಅಲ್ಪ ಸುಖದುಃಖಗಳನ್ನು ಮೀರಿರುವ ನಿತ್ಯಾನಂದಸ್ವರೂಪನಾದ ಪರಮೇಶ್ವರನ ಚಿಂತನೆಯಲ್ಲಿಯೇ ಇರುವದನ್ನೂ ಕಲಿತುಕೊಳ್ಳುವದೇ ನಮಗೆ ಉಂಟಾಗಬೇಕಾಗಿರುವ ಪರಮಾನುಭವವು.

**೩೬.** ಭಗವಂತನನ್ನು ಎಡೆಬಿಡದೆ **ಚಿಂತಿಸು**ವದೊಂದು ನಿತ್ಯಾನಂದಕ್ಕೆ ಮುಖ್ಯಸಾಧನವು. ಭಗವಂತನಿಗಾಗಿ ಭಗವಂತನನ್ನು ಧ್ಯಾನಿಸುವದನ್ನು ಅಭ್ಯಾಸಮಾಡಬೇಕು. ನಮ್ಮ ಬೇಕುಬೇಡಗಳನ್ನು ಸಂಪಾದಿಸುವದಕ್ಕೂ ಪರಿಹರಿಸಿಕೊಳ್ಳುವದಕ್ಕೂ ಪರಮೇಶ್ವರನನ್ನು ಪ್ರಾರ್ಥಿಸಿಕೊಳ್ಳುವದು ತಪ್ಪಲ್ಲ. ಆದರೆ ಹಾಗೆ ಮಾಡುವದರಿಂದ ಧ್ಯಾನದ ಪರಮಫಲವಾದ ನಿತ್ಯಾನಂದವು ನಮಗೆ ದೂರವಾಗುವದು.

**೩೭.** ನಮ್ಮ ಸುತ್ತಲೂ ಇರುವ ದೃಶ್ಯಗಳು ನಮ್ಮನ್ನು ಅಧ್ಯಾತ್ಮಸಾಧನೆಯ ಮಾರ್ಗದಿಂದ ಅಡ್ಡಹಾದಿಗೆ ಒಯ್ಯುವ ಮಾಯಾವಿಲಾಸಗಳು- ಎಂದು ಹಲವರು ನಿಟ್ಟುಸಿರುಬಿಡುತ್ತಿರುವರು. ಆದರೆ ಹೃದಯದಲ್ಲಿ ಪಾಪವಾಸನೆಯಿರುವವರಿಗೆ ಮಾತ್ರವೇ ಈ ದೃಶ್ಯಗಳು ಪ್ರಲೋಭಕವಾಗಿರುತ್ತವೆ. ಶುಭವಾಸನೆಯ ಅಂತಃಕರಣದಿಂದೊಡಗೂಡಿದ ಮಹಾತ್ಮರಿಗೆ ಇದೇ ದೃಶ್ಯಗಳು ಭಗವಂತನ ವಿಭೂತಿಗಳಾಗಿ ಕಾಣುತ್ತಿರುವವು. ಭಗವಂತನ **ಪ್ರಾಪ್ತಿ**ಯ ಮಾರ್ಗವನ್ನು ಪ್ರಕಟಿಸುವ ಕೈಕಂಬಗಳು ಅವು - ಎಂದೇ ಭಕ್ತ ಜನರು ಸಾರುತ್ತಿರುವರು.

**೩೮.** ಹೊರಗಿನ ಭೋಗಸಾಮಗ್ರಿಗಳೆಲ್ಲವೂ ಹೇರಳವಾಗಿದ್ದರೂ ಶಾಂತಿಸುಖಗಳಿಲ್ಲದವನ ಜೀವನವು ಒಂದು ಭಯಂಕರ **ಹೊರೆ**ಯಾಗಿರುವದು. ಶಾಂತಿಸುಖಗಳನ್ನು ಹಣದಿಂದ ಕೊಳ್ಳಲಾಗುವದಿಲ್ಲ. ಅವುಗಳ ಉಗಮವು ನಮ್ಮ ನಮ್ಮ ಹೃದಯದ ಒಳಗಡೆಯಲ್ಲಿರುವ ಒಂದಾನೊಂದು ಪರಮಾರ್ಥತತ್ತ್ವದಲ್ಲಿದೆ. ಅದೇ ಭಗವಂತನು. ಪರಮೇಶ್ವರನು, ಪರಮಾತ್ಮನು.

**೩೯.** ಇಂದ್ರಿಯವ್ಯವಹಾರಜೀವನವೆಂದೂ ಅಧ್ಯಾತ್ಮಜೀವನವೆಂದೂ ನಮ್ಮ ಜೀವನವು ಎರಡುಬಗೆಯಾಗಿರುತ್ತದೆ. ಅಧ್ಯಾತ್ಮಜೀವನವು ನಮ್ಮ ಮನಸ್ಸಿಗೆ ಸಂಬಂಧಪಟ್ಟದ್ದು. ಮನಸ್ಸಿನ ಭಾವನೆಗಳನ್ನು ಉತ್ತಮಗೊಳಿಸಿಕೊಂಡರೆ ಸುಖಶಾಂತಿಗಳು ಕಟ್ಟಿಟ್ಟಬುತ್ತಿಯಾಗುವವು. ಸುಖಶಾಂತಿಗಳ ಮೂಲವು ನಮ್ಮೊಳಗೇ ಇರುವ ಭಗವಂತನೇ ಆಗಿದ್ದಾನೆ.

ಅವನನ್ನು ಹುಡುಕಿ ಆತನಲ್ಲಿಯೇ ನಿಲ್ಲುವದಕ್ಕೆ ಸಜ್ಜಾಗುವ ಜೀವನವೇ **ಅಧ್ಯಾತ್ಮಜೀವನವು.** ಅಧ್ಯಾತ್ಮಜೀವನದಿಂದ ಹೊರಗೆ ನಮಗೆ ಈಗ ಪ್ರತಿಕೂಲವಾಗಿ ಕಾಣುವ ದೃಶ್ಯಗಳೂ ಅನುಕೂಲವಾಗಿ ಮಾರ್ಪಡುವವು.

**೪೦.** ಹಿಂದಿನ ಕಾಲವು ಅಳಿದುಹೋಗಿರುತ್ತದೆ. ಮುಂದಿನ ಕಾಲವು ಹುಟ್ಟಿರುವದೇ ಇಲ್ಲ. ಆದ್ದರಿಂದ ಮನಸ್ಸನ್ನು ಪಶ್ಚಾತ್ತಾಪಾದಿಗಳಿಂದ ಹಿಂದಕ್ಕೆ ತಳ್ಳುವದಾಗಲಿ, ನಿರೀಕ್ಷಣಾದಿಗಳಿಂದ ಮುಂದಕ್ಕೆ ಚಾಚುವದಾಗಲಿ ವ್ಯರ್ಥ. ಈಗಿನ ಕ್ಷಣವೇ ಅತ್ಯಂತಪವಿತ್ರವಾದ ಮುಹೂರ್ತವು. ಇಂದೇ **ಈ ಕ್ಷಣವೇ** ಭಗವಂತನಲ್ಲಿ ಚಿತ್ತವನ್ನಿಡುವದಕ್ಕೆ ಪ್ರಯತ್ನಿಸಿರಿ. ಅಭ್ಯುದಯ - ನಿಃಶ್ರೇಯಸಗಳು ಖಂಡಿತವಾಗಿ ನಿಮ್ಮದಾಗುವವು. ನಿಮ್ಮ ಅಧ್ಯಾತ್ಮಸಾಧನೆಯು ಬಲಿಷ್ಠವಾಗಿ ಫಲವನ್ನು ಕೊಡುವದಕ್ಕೂ ನಿಮ್ಮ ಜೀವನದ ಕಷ್ಟಪರಂಪರೆಗಳ ಗಂಟು ಸಡಿಲವಾಗಿ ಸುಖದ ಬಾಗಿಲು ತೆರೆಯುವದಕ್ಕೂ ಈ ಭಾವನೆಯೇ ಮುಖ್ಯೋಪಾಯವಾಗಿರುತ್ತದೆ. ಕಾಲಪ್ರವಾಹದಲ್ಲಿ ಈಗಿನ ಕ್ಷಣವೇ ಉತ್ತಮಕಾಲವು; ಈಗ ನಾನು ನಿಂತಿರುವ ದೇಶವೇ ಪವಿತ್ರ ತಮವಾದದ್ದು- ಎಂದು ಮತ್ತೊಮ್ಮೆ ಭಾವಿಸಿರಿ.

**೪೧.** ನಮ್ಮ ಸುತ್ತಲೂ ಇರುವ ಪ್ರಪಂಚದಲ್ಲಿ ಯಾವ ಹೊಂದುಗಡೆಯೂ ಇಲ್ಲದಂತೆ ತೋರುತ್ತಿರುವದು. ಯಾವ ಸಂಬಂಧವೂ ಇಲ್ಲದಂತೆ ಕಾಣುವ ಹಲವು ಪ್ರಾಣಿಗಳೂ ವಸ್ತುಗಳೂ ಬಿಡಿಬಿಡಿಯಾಗಿ ಕಾಣುತ್ತಿರುವವು. ಹೊರಗಿನ ಪ್ರಪಂಚವು ನಮಗೆ ಎದುರಾಳಿಯಾಗಿ ನಿಂತು ನಮಗೆ ದುಃಖವನ್ನುಂಟುಮಾಡುವದಕ್ಕೇ ಸಂಕಲ್ಪವನ್ನು ಮಾಡಿಕೊಂಡಿರುವಂತೆ ತೋರುತ್ತಿರುವದು. ಆದರೆ ಇದೆಲ್ಲವೂ ನಮ್ಮ ಜೀವನದ ಕೇಂದ್ರವಾದ ಭಗವಂತನನ್ನು ಕಂಡುಕೊಳ್ಳುವವರೆಗೆ. ನಮ್ಮ **ಹೃದಯ**ದಲ್ಲಿರುವ ಭಗವಂತನೇ ಇಡಿಯ ವಿಶ್ವದ ಬಾಳಿಗೆ ಕೇಂದ್ರವಾಗಿರುವದರಿಂದ ಆತನಲ್ಲಿ ನೆಲೆನಿಂತರೆ ಎಲ್ಲಾ ವಿರೋಧಗಳೂ ಭಿನ್ನಭಾವಗಳೂ ಕಣ್ಮರೆಯಾಗುವವು; ಎಲ್ಲೆಲ್ಲಿಯೂ ಹೊಂದಿಕೆಯು ಕಾಣಿಸಿಕೊಳ್ಳುವದು.

**೪೨.** ಭಗವಂತನು ಎಲ್ಲೆಲ್ಲಿಯೂ ಇರುತ್ತಾನೆ. ಅವನು ನಮ್ಮಲ್ಲಿ ಪ್ರತಿಯೊಬ್ಬನ ಹೃದಯದಲ್ಲಿಯೂ ಇರುತ್ತಾನೆ. ಆದರೂ ನಮ್ಮಗಳ **ಅಹಂಭಾವ**ದಿಂದ ಆತನು ನಮಗೆ ದೂರನಾಗಿರುತ್ತಾನೆ. ನಮ್ಮ ಶರೀರ, ವಾಕ್ಕು , ಮನಸ್ಸು- ಇವುಗಳ ವ್ಯಾಪಾರವನ್ನು ಭಗವಂತನ ಸೇವೆಯೆಂಬ ದೃಷ್ಟಿಯಿಂದ ಆತನಿಗೆ ಅರ್ಪಿಸುವದರಿಂದ ಅಹಂಭಾವವು ಮೈಗರೆಯುವದು. ಈಗ ಅತಿದೂರನಾಗಿರುವಂತೆ ತೋರುವ ಭಗವಂತನು ಆಗ ನಮಗೆ ತೀರ ಹತ್ತಿರನಾಗುವನು. ನಮ್ಮ ಒಳಗಿನ ಹಾಗೂ ಹೊರಗಿನ ಜಗತ್ತೆಲ್ಲವೂ ಭಗವನ್ಮಯವಾಗಿ ಕಾಣಿಸುವದಕ್ಕೆ ಮೊದಲಾಗುವದು.

**೪೩** ಹಿಂದಿನ ಕಾಲವು ಈಗಲೇ ಸತ್ತಿದೆ. ಮುಂದಿನ ಕಾಲವು ಇನ್ನೂ ಹುಟ್ಟಿರುವದಿಲ್ಲ. ಈಗಿನ ಕಾಲವು 'ಈಗ' ಎಂಬ ಶಬ್ದವನ್ನು ಉಚ್ಚರಿಸುವದರೊಳಗಾಗಿ

ಹಿಂದಿನ ಕಾಲವಾಗುವದು. ಆದ್ದರಿಂದಲೇ ಹಿಂದಿನ ಅನುಭವದ ಆಧಾರದಿಂದ ಮುಂದಿನ ಕಾಲಕ್ಕೆ ಹೀಗೆ ಹೀಗೆ ಅಣಿಮಾಡಿಕೊಳ್ಳುವೆನೆಂದು ಬಗೆಯುವ ವ್ಯವಹಾರವು ಜಯಶೀಲವಾಗದೆ ಇರುತ್ತದೆ. ಆದರೆ ನಿತ್ಯವರ್ತಮಾನಸ್ವರೂಪನಾದ ಭಗವಂತನಲ್ಲಿ ನೆಲೆನಿಲ್ಲುವವನು ಈ **ಕಾಲಪ್ರವಾಹ**ವನ್ನು ಮೀರುವನು. ಕಾಲದಲ್ಲಾಗುವ ಘಟನೆಗಳು ಎಂದಿಗೂ ಅವನಿಗೆ ಪ್ರತಿಕೂಲವಾಗಿ ವರ್ತಿಸಲಾರದೆ ಇರುವವು. ಭಗವದ್ಭಕ್ತನು ಇಂದಿನ ಕಾಲದಲ್ಲಿ ಯುಕ್ತವಾಗಿ ನಡೆಯುವನು; ಮುಂದಿನ ಕಾಲವು ತಪ್ಪದೆ ಅವನಿಗೆ ಅನುಕೂಲವಾಗಿ ರೂಪಿಸಿಕೊಳ್ಳುವದು.

**೪೪.** ಸುಖದುಃಖಗಳ ಅನುಭವವೆಂಬ ಬೇವುಬೆಲ್ಲಗಳ ಸವಿಯು ಮಾನವಜನ್ಮಕ್ಕೆ ಸಹಜವೆಂತ ಬಗೆಯದಿರಿ. ಸುಖದುಃಖಗಳನ್ನು ಮೀರಿದ ಪರಮಾತ್ಮನಲ್ಲಿ ನೆಲೆನಿಂತವರಿಗೆ ಸುಖದುಃಖಗಳೆಂಬ ದ್ವಂದ್ವದ ಪೆಟ್ಟು ಬೀಳುವದೇ ಇಲ್ಲ. ನಿತ್ಯಾನಂದವೇ ಸ್ವಾಭಾವಿಕವೆಂಬ **ಅರಿವು** ಆತ್ಮನಿಷ್ಠರಿಗೆ ಮಾತ್ರ ಆಗುವದು.

**೪೫.** ಹೊರಗಿನ ವಸ್ತುಗಳಲ್ಲಿ ನಾನು, ನನ್ನದು- ಎಂಬ ಅಭಿಮಾನವನ್ನು ಬಿಟ್ಟು ಭಗವಂತನಿಗೆ ಶರಣುಹೊಗುವವರಿಗೆ ಮಾತ್ರ ಆತನ ಅನುಗ್ರಹವು ದೊರಕುವದು. ಸರ್ವಕಾಮಗಳ ಮತ್ತು ಸರ್ವಕರ್ತವ್ಯಗಳ ಹಂಗನ್ನೂ ಬಿಟ್ಟು ಪರಮಾತ್ಮನಲ್ಲಿಯೇ ಮನಸ್ಸನ್ನಿಡುವ ಭಕ್ತರೇ **ಪರಮಹಂಸಸಂನ್ಯಾಸ**ವನ್ನು ಮಾಡಿದವರೆನ್ನಿಸುತ್ತಾರೆ.

**೪೬.** ಎಲ್ಲಾ ಮನುಷ್ಯರಿಗೂ ಎಲ್ಲಾ ಪ್ರಾಣಿಗಳಿಗೂ ಒಬ್ಬ ಪರಮಾತ್ಮನೇ ಆತ್ಮನಾಗಿರುವನು. ಇದನ್ನು ಅರಿತುಕೊಂಡವರು ಮೃತ್ಯುವಿನ **ಅಂಜಿಕೆ**ಯನ್ನು ಕಳೆದು ಕೊಳ್ಳುವರೆಂದು ವೇದಾಂತದಲ್ಲಿ ಸಾರಿರುತ್ತದೆ. ಇದನ್ನು ಈಗಲೇ ಇಲ್ಲಿಯೇ ನಾವೆಲ್ಲರೂ ಪ್ರಯತ್ನಪಟ್ಟು ಅನುಭವಕ್ಕೆ ತಂದುಕೊಳ್ಳಬಹುದು.

**೪೭.** ದೇವರನ್ನು ಕಾಣಬೇಕೆಂದು ಕೊರಗುವ ಜನರು ಕೆಲವರುಂಟು. ಆದರೆ ಆ ಒಬ್ಬ ದೇವರೇ ನಮ್ಮಗಳಿಗೆಲ್ಲ ಆತ್ಮನಾಗಿ ನಮ್ಮನ್ನೂ ನಮ್ಮ ಕರ್ಮಗಳನ್ನೂ ನೋಡುತ್ತಿರುವ ಸಾಕ್ಷಿಚೈತನ್ಯಸ್ವರೂಪನೆಂಬುದನ್ನು ಅವರು ಅರಿಯರು. ಪ್ರತ್ಯಕ್ಷಾದಿಪ್ರಮಾಣಗಳಿಂದ ಅರಿತ ವಿಷಯವು ನಿಶ್ಚಿತವಾಗಿರುವದೆಂದು ನಾವೆಲ್ಲರೂ ನಂಬಿರುವೆವು. ಆದರೆ ಪ್ರಮಾಣಗಳ ನಿಶ್ಚಯದ ಸ್ವರೂಪನೇ ಆಗಿರುವ, ನಮ್ಮೆಲ್ಲರ ಪರಮಾರ್ಥಸ್ವರೂಪನಾಗಿರುವ ಪರಮಾತ್ಮನ ಇರವಿನ ವಿಷಯದಲ್ಲಿ ಸಂದೇಹವನ್ನು ತೋರಿಸುತ್ತಿರುವೆವು ! ಶಾಸ್ತ್ರದೃಷ್ಟಿಯಿಂದಲೇ ಎಲ್ಲವನ್ನೂ ನೋಡುವ ಮಹಾಪುರುಷರ ಸಂಗವನ್ನು ಮಾಡಿರಿ; ನಿಮ್ಮ ಪರಮಾರ್ಥವಾದ ಆತ್ಮನಾಗಿರುವ ಆ ಸರ್ವಸಾಕ್ಷಿಯನ್ನು ಅರಿತುಕೊಳ್ಳುವ **ಒಳನೋಟವು** ನಿಮ್ಮದಾಗುವದು.

**೪೮.** ನಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ ಅವ್ಯಕ್ತವಾಗಿರುವ ಅನೇಕ ಶಕ್ತಿಗಳಿರುವವು. ಸತ್ಯ, ಅಹಿಂಸೆ, ಪ್ರೇಮ- ಮುಂತಾದ ಈ ಅವ್ಯಕ್ತಶಕ್ತಿಗಳಿಗೆ ಸರಿಯಾದ ಸಂನಿವೇಶಗಳನ್ನು ಕಲ್ಪಿಸಿ

ಬೆಳಯಿಸಿಕೊಳ್ಳಬಹುದು. ನಮ್ಮಲ್ಲಿ ಈಗ ವ್ಯಕ್ತವಾಗಿರುವದು ಎಷ್ಟೇ ಅಲ್ಪವಾಗಿರಲಿ, ಅದನ್ನು ಈಶ್ವರ**ಾರ್ಪಣ**ಬುದ್ಧಿಯಿಂದ ಉಪಯೋಗಿಸಬೇಕು. ನಮ್ಮ ವಿದ್ಯೆ, ಸತ್ಯಧರ್ಮಪ್ರವಣತೆ-ಮುಂತಾದ ಆಧ್ಯಾತ್ಮಿಕಸಂಪತ್ತನ್ನು ಸದುಪಯೋಗಮಾಡಿಕೊಂಡಂತೆಲ್ಲ ಅವು ಬೆಳೆಯುತ್ತಾಹೋಗುವವು. ಇದು ಈಶ್ವರನ ನಿಯಮವಾಗಿರುತ್ತದೆ. ಈಶ್ವರನ ಪ್ರಪಂಚದಲ್ಲಿ ಮಾನವನಿಗೆ ಬೇಕಾದ ವಸ್ತುಗಳು ಸಮೃದ್ಧವಾಗಿರುತ್ತವೆ. ಅವುಗಳನ್ನು ಪಡೆದುಕೊಳ್ಳಲು ಈಶ್ವರಾನುಗ್ರಹವನ್ನು ಸಂಪಾದಿಸಿಕೊಳ್ಳಬೇಕು.

**೪೯.** ಬುದ್ಧಿ, ಬಲ, ಹಣ, ಕುಶಲವಿದ್ಯೆ - ಇವುಗಳನ್ನು ಧರ್ಮಬುದ್ಧಿಯಿಂದ ಸಮಾಜದ ಹಿತಕ್ಕಾಗಿ ಉಪಯೋಗಿಸುವದು - ಅವನ್ನು ನಮ್ಮ ಹಕ್ಕಿನ ಸ್ಥಾಪನೆಗಾಗಿ ಉಪಯೋಗಿಸುವದಕ್ಕಿಂತ ಹೆಚ್ಚಿನ ಸುಖಶಾಂತಿಗಳಿಗೆ ಕಾರಣವಾಗಿರುವದು. ಸಮಾಜದಲ್ಲಿ ಎಲ್ಲರಲ್ಲಿಯೂ ಒಬ್ಬನೇ ಪರಮೇಶ್ವರನಿರುವನೆಂದು ತಿಳಿದು ಸರ್ವರಲ್ಲಿಯೂ ಪ್ರೇಮದಿಂದ ವರ್ತಿಸಬೇಕು ; ಎಲ್ಲರಿಗೂ **ಸಂತೋಷ**ವನ್ನುಂಟುಮಾಡುವದೇ ಈಶ್ವರಾರ್ಚನೆ ; ಅದೇ ನಮ್ಮ ಪುರುಷಾರ್ಥಕ್ಕೆ ಸಾಧನವು.

**೫೦.** ಪರಮೇಶ್ವರನು **ಅನಂತನು.** ಅವನಿಗೆ ಯಾವ ದೇಶದ ಎಲ್ಲೆಕಟ್ಟೂ ಇರುವದಿಲ್ಲ. ಯಾವ ಕಾಲದ ಅಳತೆಯೂ ಇರುವದಿಲ್ಲ. ಆತನು ಕಾಲದೇಶಗಳನ್ನೂ ಮೀರಿರುವನಾದರೂ ಅವನನ್ನು ಭಕ್ತಿಯಿಂದ ಯಾರು ಬೇಕಾದರೂ ಇಲ್ಲಿಯೇ ಈಗಲೇ ಕಂಡುಕೊಳ್ಳಬಹುದು. ಭಕ್ತರು ಭಗವಂತನನ್ನು ತಮ್ಮತಮ್ಮ ಹೃದಯದಲ್ಲಿಯೇ ಕಂಡುಕೊಂಡಿರುತ್ತಾರೆ. ನಾವೂ ಅವರ ಚಿತ್ತಭೂಮಿಕೆಯ ಅಂತಸ್ತನ್ನು ಏರಿದರೆ ನಮ್ಮ ಹೃದಯದಲ್ಲಿಯೇ ಆ ಭಗವಂತನನ್ನು ಕಂಡುಕೊಂಡು ನಲಿಯಬಹುದು.

**೫೧.** ಪರಮಾತ್ಮನು ಸತ್ಯನಾಗಿರುತ್ತಾನೆ; ಎಂದರೆ ಯಾವ ದೇಶದಲ್ಲಿಯೂ ಯಾವ ಕಾಲದಲ್ಲಿಯೂ ಬದಲಾಗದ **ಸ್ವರೂಪ**ವುಳ್ಳವನಾಗಿರುತ್ತಾನೆ. ಪರಮಾತ್ಮನು ಜ್ಞಾನವೂ ಆಗಿರುತ್ತಾನೆ, ಎಂದರೆ ಕಾಲದೇಶಗಳಲ್ಲಿ ಮಾರ್ಪಡದ ಸ್ವಪ್ರಕಾಶವಾದ ಅರಿವಾಗಿರುತ್ತಾನೆ. ಈ ಪರಮಾತ್ಮನು ನಮ್ಮಗಳ ಹೃದಯದಲ್ಲಿಯೇ ಇರುವ ನಮ್ಮ ನಿಜವಾದ ಸ್ವರೂಪವೇ ಆಗಿರುತ್ತಾನೆಂಬುದನ್ನು ಅನುಭವಕ್ಕೆ ತಂದುಕೊಂಡಿರುವವರೇ ಋಷಿಗಳು.

**೫೨.** ವಿಶ್ವಶಾಂತಿಗೆ ಒಬ್ಬರನ್ನೊಬ್ಬರು ಶಂಕಿಸುತ್ತಾ ಶಸ್ತ್ರಾಸ್ತ್ರಗಳನ್ನೂ ಸೇನೆಯನ್ನೂ ಹೆಚ್ಚಿಸಿಕೊಳ್ಳುವದು ಉಪಾಯವಲ್ಲ. ಒಬ್ಬರಿಂದೊಬ್ಬರು ಅಪಾಯವನ್ನು ಶಂಕಿಸುವದೂ ನಮ್ಮ ರಕ್ಷಣೆಗೆ ಶಸ್ತ್ರಬಲವನ್ನು ನಂಬುವದೂ ಪರಸ್ಪರವೈರವೂ, ದ್ವೇಷವೂ ಹೆಚ್ಚುವದಕ್ಕೆ ಕಾರಣವಾಗುವದು. ನಮ್ಮೆಲ್ಲರಲ್ಲಿಯೂ ಆತ್ಮನಾಗಿರುವ ಭಗವಂತನನ್ನು ತಮ್ಮತಮ್ಮ ಹೃದಯದಲ್ಲಿ ಕಾಣುವ ಜನರ ಸಂಖ್ಯೆಯನ್ನು ಹೆಚ್ಚಿಸಿಕೊಂಡರೆ ಜನಾಂಗಗಳಿಗೆ ಪರಸ್ಪರಪ್ರೇಮವುಂಟಾಗುವದು ; **ವಿಶ್ವಶಾಂತಿಯು** ಸುಲಭವಾಗಿ ವಶವಾಗುವದು.

**೫೩.** ಜಗತ್ತೆಲ್ಲವನ್ನೂ ಹಿಡಿದೆತ್ತಿ ವ್ಯವಸ್ಥಿತವಾಗಿ ನಿಲ್ಲಿಸಿಕೊಂಡಿರುವ ಪರಮಾತ್ಮನಿಗೆ **ಧರ್ಮ** ಎಂದು ಹೆಸರು. ಪರಮಾತ್ಮಪ್ರಾಪ್ತಿಗೆ ಅನುಕೂಲವಾದ ನಡೆವಳಿಕೆಯನ್ನೂ **ಧರ್ಮವೆಂದೇ** ಶಾಸ್ತ್ರಕಾರರು ಕರೆಯುತ್ತಾರೆ. ಇಂಥ **ಧರ್ಮ**ವನ್ನು ಅವಲಂಬಿಸುವದೇ ನಮ್ಮ ಅಭ್ಯುದಯಕ್ಕೆ ಕಾರಣವಾಗುವದು ; ಪರಮಪುರುಷಾರ್ಥವಾದ ನಿತ್ಯಾನಂದವೂ ಅದರಿಂದಲೇ ದೊರಕುವದು.

**೫೪.** ಅಧ್ಯಾತ್ಮವಿದ್ಯೆಯು ಬ್ರಹ್ಮವಿದ್ಯೆ, ಎಲ್ಲಕ್ಕೂ ಹೆಚ್ಚಿನ ವಿದ್ಯೆ. ಅದನ್ನು ಸಂಪಾದಿಸಿಕೊಂಡ ಬಳಿಕ ಮತ್ತೆ ಯಾವದರ ತತ್ತ್ವವನ್ನೂ ನಿರ್ಧರಿಸಬೇಕಾದ್ದು ಉಳಿಯುವದಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಎಲ್ಲಾ ವಿದ್ಯೆಗಳೂ ಬ್ರಹ್ಮವಿದ್ಯೆಯ ವಿಷಯದ ಒಂದೊಂದಂಶವನ್ನೇ ಪ್ರತಿಪಾದಿಸುತ್ತಿರುವವು. ಆದ್ದರಿಂದ ಯಾವ ವಿದ್ಯೆಯಾದರೂ ಒಂದಲ್ಲ - ಒಂದು ಕಾಲಕ್ಕೆ ಈ **ವಿದ್ಯೆ**ಯಲ್ಲಿಯೇ ಕೊನೆಗಾಣಬೇಕು. ಹೀಗಿರುವದರಿಂದ ಈ ಗುರಿಯಿಂದ ಹೊರಟ ವಿದ್ಯೆಗಳಿಂದಲೇ ಅನರ್ಥನಿವಾರಣೆಯೂ ಪುರುಷಾರ್ಥಪ್ರಾಪ್ತಿಯೂ ಆಗುವವು.

**೫೫.** ಒಬ್ಬನೇ ಪರಮಾತ್ಮನು ನಮ್ಮ ಬುದ್ಧಿವೃತ್ತಿಗಳಿಗೆಲ್ಲ **ಸಾಕ್ಷಿ**ಯಾಗಿರುತ್ತಾನೆ. ಆ ಪರಮಾತ್ಮನ ಚೈತನ್ಯಪ್ರಕಾಶವನ್ನು ಧ್ಯಾನಮಾಡುವದರಿಂದ ಉತ್ತಮವಾದ ವೃತ್ತಿಗಳು ಅಂತಃಕರಣದಲ್ಲಿ ಎದ್ದುಕೊಳ್ಳುವವು. ಪರಮಾತ್ಮನ ಅನುಗ್ರಹದಿಂದುಂಟಾದ ಉತ್ತಮ ಬುದ್ಧಿಯೇ ಆನಂದಜೀವನಕ್ಕೆ ಕಾರಣವಾಗುವದು.

**೫೬.** ಪರಿಪೂರ್ಣಜ್ಞಾನಶಕ್ತಿಗಳುಳ್ಳ ಪರಮಾತ್ಮನಿಂದಲೇ ನಾವೆಲ್ಲರೂ ಬಂದಿರುವೆವು. ನಾವೆಲ್ಲರೂ ಆತನಲ್ಲಿಯೇ ಇದ್ದು ಆತನನ್ನೇ ಸೇರುವೆವು. ಸೂರ್ಯನ ಪ್ರತಿಬಿಂಬಗಳು ಎಲ್ಲವೂ ಎಷ್ಟು ಭಿನ್ನವಾಗಿ ಕಂಡರೂ ಸೂರ್ಯನ ರೂಪದಿಂದ ಒಂದಾಗಿರುವಂತೆ , ನಾವೆಲ್ಲರೂ ಎಷ್ಟೇ ಭಿನ್ನ ಭಿನ್ನಸ್ವರೂಪವುಳ್ಳವರಂತೆ ತೋರಿದರೂ, ಆ ಪರಮಾತ್ಮನ ಸ್ವರೂಪದಿಂದ **ಒಂದೇ** ಆಗಿರುವೆವು.

**೫೭.** ಪರಮಾತ್ಮನಿಂದ ಬಂದಿರುವ ಒಬ್ಬೊಬ್ಬ ಜೀವನೂ ಶಾಸ್ತ್ರದೃಷ್ಟಿಯಿಂದ ಪೂರ್ಣನಾಗಿಯೇ ಇರುತ್ತಾನೆ. ನಾವು ಆ ದೃಷ್ಟಿಯನ್ನವಲಂಬಿಸುವ ಯೋಗ್ಯತೆಯನ್ನು ಅಧ್ಯಾತ್ಮಸಾಧನಗಳಿಂದ ಸಂಪಾದಿಸಿಕೊಂಡರೆ ನಮ್ಮಲ್ಲಿ ಕಾಣುತ್ತಿರುವ **ಸಂಸಾರದ** ಕುಂದುಕೊರತೆಗಳಲ್ಲಿ ಯಾವದೊಂದೂ ಒಂದಿಷ್ಟೂ ಯಾವಾಗಲೂ ಇರಲೇಇರಲಿಲ್ಲವೆಂಬ ತತ್ತ್ವವು ಮನದಲ್ಲಿ ಮಿಂಚುವದು. ಎಲ್ಲೆಲ್ಲಿಯೂ ಪೂರ್ಣವಾದ ತತ್ತ್ವವೊಂದೇ ನಿಜವಾಗಿರುತ್ತದೆ. ಅದರಲ್ಲಿ ಯಾವ ಕುಂದುಕೊರತೆಗಳಾದರೂ ಹೇಗೆ ಇದ್ದಾವು ?

**೫೮. ಆಹಾರವು** ಶುದ್ಧಿಯಾದರೆ ಅಂತಃಕರಣವು ಶುದ್ಧಿಯಾಗುವದು - ಎಂದು ಶ್ರುತಿಯಲ್ಲಿದೆ. ನಾವು ತೆಗೆದುಕೊಳ್ಳುವ ವಿಷಯಗಳನ್ನೆಲ್ಲ ರಾಗದ್ವೇಷವಿಲ್ಲದೆ ಪರಮೇಶ್ವರನಲ್ಲಿ ಇಟ್ಟ ಶುದ್ಧಮನಸ್ಸಿನಿಂದ ಸೇವಿಸುತ್ತಾ ಬಂದಂತೆಲ್ಲ ನಮ್ಮ ಮನಸ್ಸು

ಮೇಲಿನ ಮಟ್ಟಕ್ಕೇರುವದು. ಅದರಲ್ಲಿ ಪರಿಶುದ್ಧವಾದ ಆಲೋಚನೆಗಳೇ ಬಂದು ನಿಲ್ಲುವವು.

**೫೯.** ಪರಮಾತ್ಮನ ಅನುಗ್ರಹವಿಲ್ಲದೆ ಯಾವನೊಬ್ಬನೂ ಅವನ ತತ್ತ್ವವನ್ನು ಅರಿತುಕೊಳ್ಳಲಾರನು. ಆತನ ಅನುಗ್ರಹವಿಲ್ಲದೆ ಯಾವನೊಬ್ಬನೂ ಸಂಸಾರದ ಕಷ್ಟಗಳಿಂದ **ಮುಕ್ತನಾಗ**ಲಾರನು. ಭಕ್ತಿಯ ಭರದಿಂದ ತಮ್ಮತಮ್ಮ ಹೃದಯದಲ್ಲಿಯೇ ಹುಡುಕುವವರಿಗೆ ಆ ಕರುಣಾನಿಧಿಯು ನಿಜವಾದ ವೇದವನ್ನು ಅನುಗ್ರಹಿಸುವನು. ಅದರಿಂದಲೇ ತತ್ತ್ವಜ್ಞಾನವೂ, **ಮುಕ್ತಿಯೂ** ಲಭಿಸುವವು.

**೬೦.** ಪರಮಾತ್ಮನ ನಾಮವು ಅತ್ಯಂತ ಪವಿತ್ರವಾದದ್ದು. ನಾಮಸ್ಮರಣೆಯಿಂದ ದುಃಖವೆಲ್ಲವೂ ತೊಲಗುವದು, ಸುಖವು ಪ್ರಾಪ್ತವಾಗುವದು. ಭಗವಂತನ ನಾಮಗಳನ್ನು ಸ್ಮರಿಸುವಾಗ ದುಃಖಗಳನ್ನು ಮನಸ್ಸಿಗೆ ತರಬಾರದು. ಭಗವಂತನನ್ನೇ ಮನಸ್ಸಿಗೆ ತಂದುಕೊಳ್ಳಬೇಕು. ದುಃಖದ ಸ್ಮರಣೆಯು ದುಃಖವನ್ನು ಹೆಚ್ಚಿಸುತ್ತದೆ. ಭಗವ**ನ್ನಾಮಸ್ಮರಣೆ**ಯು ಅದನ್ನು ಸಂಪೂರ್ಣವಾಗಿ ನಾಶಗೊಳಿಸುತ್ತದೆ.

**೬೧.** ಪರಮಾತ್ಮನನ್ನು ಅನನ್ಯಶರಣರಾಗಿ ಭಜಿಸುತ್ತಿರುವವರ ಯೋಗ ಕ್ಷೇಮವನ್ನು ಆತನೇ ನೋಡಿಕೊಳ್ಳುವನು. ಅನನ್ಯಭಕ್ತಿಯು ಎಲ್ಲಾ ಅನರ್ಥಗಳ **ಪರಿಹಾರ**ಕ್ಕೂ ಎಲ್ಲಾ ಪುರುಷಾರ್ಥಗಳಿಗೂ ಉಪಾಯವು. ಪರಮೇಶ್ವರನ ಭಕ್ತರಿಗೆ ಯಾವ ಕಾರಣದಿಂದಲೂ ಸುಖಶಾಂತಿಗಳ ಕೊರತೆಯಿರುವದಿಲ್ಲ.

**೬೨.** ಪಾರಾಯಣಗ್ರಂಥಗಳನ್ನು ಸಾಹಿತ್ಯದೃಷ್ಟಿಯಿಂದ ಅಥವಾ ಐತಿಹಾಸಿಕ ದೃಷ್ಟಿಯಿಂದ ನೋಡುವದಕ್ಕೆ ಹೋಗುವದಕ್ಕಿಂತಲೂ ಅವುಗಳಲ್ಲಿರುವ ತತ್ತ್ವದ ಕಡೆಗೆ **ಲಕ್ಷ್ಯ**ವಿಟ್ಟು ಓದುವದರಿಂದ ಹೆಚ್ಚು ಪ್ರಯೋಜನವಾಗುವದು. ಅಲ್ಲಿ ಸಾಕ್ಷಾದ್ ಭಗವಂತನೇ ನಮಗಾಗಿ ಬೋಧಿಸುತ್ತಾನೆಂಬ ಭಾವನೆಯಿಂದ ಅಭಿಪ್ರಾಯಗಳನ್ನು ಜೀವಂತರೂಪದಿಂದ ಮನಸ್ಸಿನಲ್ಲಿ ಮೂಡಿಸಿಕೊಳ್ಳಬೇಕು. ಹಾಗಾದರೆ ಅವುಗಳ ಪರಿಣಾಮವನ್ನು ನಮ್ಮ ಜೀವನದಲ್ಲಿ ನಿಸ್ಸಂಶಯವಾಗಿ ಕಾಣಬಹುದಾಗುವದು.

**೬೩.** ಪರಮಾತ್ಮನ ಪ್ರಾಪ್ತಿಗೆ ಪರಮಾತ್ಮನೇ ತನಗೆ ಬೇಕೆಂಬ ಹಣ್ಣಾದ **ಹಂಬಲಿಕೆಯೇ** ಮುಖ್ಯಸಾಧನವಾಗಿರುವದು. ಪ್ರತಿಕೂಲವಾದ ಆಚಾರಗಳನ್ನೆಲ್ಲ ಬಿಟ್ಟು ಪರಮಾತ್ಮನನ್ನೇ ಆರಿಸಿಕೊಳ್ಳುವದಕ್ಕೆ ಯತ್ನಿಸುವವನನ್ನೇ ಪರಮಾತ್ಮನು ಆರಿಸಿ ಕೊಳ್ಳುವನು. ಅವನಿಗೆ ತನ್ನ ನಿಜವನ್ನು ತಿಳಿಯಿಸಿಕೊಡುವನು.

**೬೪.** ನಾವು ಒಬ್ಬೊಬ್ಬರೂ ನಿತ್ಯಾನಂದಸ್ವರೂಪನಾದ ಭಗವಂತನ ಅಂಶಭೂತರಾಗಿರುವದರಿಂದ ವಾಸ್ತವವಾಗಿ ನಿತ್ಯಾನಂದಸ್ವರೂಪರೇ ಆಗಿರುತ್ತೇವೆ.

ಆದರೂ ಆ ಪರಮಾತ್ಮನನ್ನು ಮರೆತಿರುವ ಪಾಪದ ಫಲವಾಗಿ ಮಾಯಿಕವಾದ ದುಃಖವನ್ನು ಅನುಭವಿಸುತ್ತಿದ್ದೇವೆ. ದುಃಖವೆಂಬುದು ಪರಮೇಶ್ವರನು ಪಾಪಕ್ಕಾಗಿ ವಿಧಿಸಿರುವ ಶಿಕ್ಷೆಯಲ್ಲ. **'ಸ್ವಾತ್ಮಭೂತವಾಗಿರುವ ಆನಂದವನ್ನು ಸೇರಿಕೊಳ್ಳಿ'** ಎಂದು ಎಚ್ಚರಿಸುವ ಸಂದೇಶ.

**೬೫.** ಲೋಕದಲ್ಲಿ ಜೀವನಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆನ್ನುವವರು ಮೇಲುಮೇಲಿನ ವಸ್ತುಗಳಿಗೆ ಕಾರ್ಯಕಾರಣವನ್ನು ಕಲ್ಪಿಸಿಕೊಂಡು ಮನಸ್ಸನ್ನು ಹೊಲಗೆಡಿಸಿಕೊಳ್ಳಬಾರದು. ಎಲ್ಲಕ್ಕೂ ಪರಮಕಾರಣನಾಗಿರುವ ಪರಮಾತ್ಮನಲ್ಲಿಯೇ **ನೆಲೆ** ನಿಲ್ಲುವ ಪ್ರಯತ್ನವನ್ನು ಮಾಡಬೇಕು. ಆಗ ನಮ್ಮ **ಜೀವನವು** ಆನಂದಮಯವಾಗುವದು.

**೬೬.** ಪರಮೇಶ್ವರನ ಭಕ್ತಿಯಿಂದ ಮನಸ್ಸು ಎಲ್ಲಾ ಬಗೆಯಿಂದಲೂ **ಪರಿಶುದ್ಧ**ವಾಗುತ್ತದೆ. ಅದರಲ್ಲಿ ಕಾಮಕ್ರೋಧಮದಮೋಹಮಾತ್ಸರ್ಯಾದಿಗಳು ಹಿಂದೆ ಇದ್ದವು ನಾಶವಾಗುವವು; ಇನ್ನು ಮುಂದಕ್ಕೆ ತಲೆದೋರುವದಿಲ್ಲ. ಸರ್ವಭೂತ**ಪ್ರೇಮ**ವೇ ಪರಮೇಶ್ವರಭಕ್ತಿಯ ಗುರುತು.

**೬೭.** ಪರಮಾತ್ಮನು ಆಕಾಶದಂತೆ ಸರ್ವವ್ಯಾಪಕನಾಗಿದ್ದರೂ ನಮ್ಮ ಚಿತ್ತವನ್ನು ಆತನ ಸಾಂನಿಧ್ಯಕ್ಕೆ ಸಂಬಂಧಿಸಿಕೊಳ್ಳದೆ ಇರುವದರಿಂದ ನಮಗೆ ಈಶ್ವರನು ಎಲ್ಲಿಯೋ ದೂರನಾಗಿರುವನೆಂಬ ಭಾವನೆ ಉಂಟಾಗಿದೆ. ಪರಮಾರ್ಥವೇನೆಂದರೆ : **ಬ್ರಹ್ಮ**ನಿಂದ ಸ್ತಂಭದವರೆಗಿನ ಪ್ರಾಣಿಗಳೆಲ್ಲವೂ ಪರಮಾತ್ಮನಿಂದಲೇ ಬಂದಿದ್ದು, ಆತನಲ್ಲಿಯೇ ತಮ್ಮತಮ್ಮ ವ್ಯವಹಾರಗಳನ್ನೆಲ್ಲ ಮಾಡಿಕೊಂಡಿರುವವು. 'ನಾನು ಪರಮಾತ್ಮನಿಗೆ ನಿತ್ಯ ಸಂಬದ್ಧನಾಗಿರುವೆನು; ಆತನನ್ನು ಬಿಟ್ಟರೆ ನನಗೆ ಯಾವ ಸ್ವರೂಪಸ್ಥಿತಿಗಳೂ ಇಲ್ಲ' ಎಂದು ಸಾಧಕನಾದವನು ಅಡಿಗಡಿಗೂ ಮನಸ್ಸಿಗೆ ತಂದುಕೊಳ್ಳುತ್ತಿರಬೇಕು.

**೬೮.** ಪರಮೇಶ್ವರನ ಸಾಂನಿಧ್ಯವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವದೇ ಜೀವರ ಜೀವನದ **ಸಾಫಲ್ಯ**ವು. ಪರಮೇಶ್ವರನ ಪೂಜೆ, ಧ್ಯಾನ, ಭಜನೆ, ಗುಣಕಥನ, ಶಾಸ್ತ್ರಾವಲೋಕನ, ಪುರಾಣಶ್ರವಣ, ತೀರ್ಥಯಾತ್ರೆ, ಸಾಧುಸಂಗ, ಪ್ರಕೃತಿಯಲ್ಲಿ ಕಾಣುವ ಭಗವದ್ವಿಭೂತಿಗಳ ಭಾವನೆ - ಇವೇ ಮುಂತಾದ ಉಪಾಯಗಳಿಂದ ಭಗವಂತನ ಸಾಂನಿಧ್ಯದ ಭಾವನೆಯನ್ನು ಉದ್ಬೋಧಮಾಡಿಕೊಳ್ಳಬಹುದು. ಆತನ ಅನುಗ್ರಹದಿಂದಲೇ ಆತನ ಸಾಕ್ಷಾತ್ಕಾರವಾಗುವದು.

**೬೯.** ನಮ್ಮ ವ್ಯವಹಾರವು ಕಾಲದ ಆಶ್ರಯದಲ್ಲಿ ಪಡೆಯುವ, ಕಾರ್ಯಕಾರಣ ಭಾವಕ್ಕೆ ಕಟ್ಟುಬಿದ್ದಿರುವ, ಧರ್ಮಾಧರ್ಮಗಳ ರೂಪದಲ್ಲಿರುವದು. ಆದರೆ ಭಗವನಂತನನ್ನು ಶರಣುಹೊಕ್ಕ ಮಹನೀಯರು ಕಾಲಾತೀತವಾದ, ಕಾರ್ಯಕಾರಣಭಾವವನ್ನು ಮೀರಿದ, ಧರ್ಮಾಧರ್ಮಗಳ ಸೋಂಕಿಲ್ಲದ **ಪರಮಪದ**ವನ್ನು ಹೊಂದುವರು.

**೭೦.** ನಮ್ಮ ಜೀವನಕ್ಕೆ ಅಮೃತದ ಅಭಿಷೇಕವನ್ನು ಮಾಡಿಸುತ್ತಿರುವ ಪರಮಾತ್ಮನು ನಮ್ಮನಮ್ಮ ಹೃದಯದಲ್ಲಿಯೇ ಇರುತ್ತಾನೆ. ಆತನನ್ನು ಅನನ್ಯಭಕ್ತಿಯಿಂದ ಶರಣು ಹೊಕ್ಕವರಿಗೇ **ಅಮೃತತ್ವವು** ದೊರಕುವದು. ಆತನ ಅನುಗ್ರಹವಿದ್ದರೆ ವ್ಯವಹಾರದಲ್ಲಿ ನಮಗೆ ಅವಶ್ಯವಾಗುವ ಸಾಮಗ್ರಿಗಳು ತಮಗೆ ತಾವೇ ಒದಗುವವು.

**೭೧.** ನಮ್ಮ ಜೀವನವೆಲ್ಲವೂ ಪರಮೇಶ್ವರನು ಅನುಗ್ರಹಿಸುವ ಪ್ರಜ್ಞಾನೇತ್ರದ ಸಹಾಯದಿಂದಲೇ ನಡೆಯುತ್ತಿರುವದು. ಪರಮೇಶ್ವರನ ಅನುಗ್ರಹದಿಂದಲೇ ಅದಕ್ಕೆ ಬೇಕಾದ ಸಾಮಗ್ರಿಗಳು ದೊರೆಯುತ್ತಿರುವವು. ಪರಮೇಶ್ವರ **ಪ್ರಜ್ಞೆ**ಯೇ ನಮಗೆ ಆಧಾರವು, ನಮ್ಮ ಸರ್ವಸ್ವವು - ಎಂದು ತಿಳಿದು ವ್ಯವಹರಿಸುವವನಿಗೆ ಸಂಸಾರದ ತೊಡರುಗಳು ಮಾಯವಾಗುವವು.

**೭೨.** ಪ್ರತಿಯೊಬ್ಬ ಜೀವನೂ ಪ್ರಕೃತಿಯ ಗುಣಗಳಿಗೆ **ವಶ**ನಾಗಿ ಯಾವದಾದರೊಂದು ಕರ್ಮವನ್ನು ಮಾಡುತ್ತಲೇ ಇರುವನು. ಆದರೆ ಹೀಗೆ ಅವಶನಾಗಿ ಕರ್ಮವನ್ನು ಮಾಡುವದರಲ್ಲಿಯೇ ಕರ್ಮದ ಕಟ್ಟಿನಿಂದ ಬಿಡಿಸಿಕೊಳ್ಳುವ ರೀತಿಯನ್ನು ಅನುಸರಿಸುವಷ್ಟು ಸ್ವಾತಂತ್ರ್ಯವು ಪ್ರತಿಯೊಬ್ಬನಿಗೂ ಇರುತ್ತದೆ. ಪರಮೇಶ್ವರನ ಆರಾಧನೆಗೆಂದು ಕರ್ಮವನ್ನು ಮಾಡುವದೇ ಕರ್ಮಬಂಧದಿಂದ ಬಿಡುಗಡೆಯಾಗುವದಕ್ಕೆ ಪರಮೋಪಾಯವು.

**೭೩.** ಅಧ್ಯಾತ್ಮಗ್ರಂಥಗಳಲ್ಲಿ ನಿತ್ಯಸಿದ್ಧವಾದ ಪರಮಾತ್ಮತತ್ತ್ವವನ್ನೇ ವರ್ಣಿಸಿದೆಯಾದರೂ ಅದು ಯಾವಾಗಲೂ ಜಿಜ್ಞಾಸುಗಳಿಗೆ ಹೊಸದಾಗಿಯೇ ಕಾಣುತ್ತಿರುವದು. ಅದರ ವಿಚಾರವು ಜೀವನಕ್ಕೆ ಬೇಕಾದ ಹೊಸಹೊಸ **ಸ್ಫೂರ್ತಿ**ಗಳನ್ನು ಸೂಚಿಸುತ್ತಲೇ ಇರುವದು. ಬಲ್ಲವರಿಂದ ಉಪದೇಶವನ್ನು ಪಡೆದು ಭಾವವನ್ನೇ ಮುಖ್ಯವಾಗಿ ಲಕ್ಷ್ಯದಲ್ಲಿಟ್ಟು ಪಾರಾಯಣಮಾಡುವವರಿಗೆ ಈ ಗ್ರಂಥಗಳಲ್ಲಿ ಭಗವಂತನೇ ಸಂನಿಹಿತನಾಗಿದ್ದು ಜೀವಂತವಾದ ಉಪದೇಶಗಳನ್ನು ಮಾಡುತ್ತಿರುವನೆಂಬುದು ಮನದಟ್ಟಾಗುವದು.

**೭೪.** ನಮ್ಮ ನಮ್ಮ ಒಳಗೇ ದೇವಾಸುರ**ಸಂಗ್ರಾಮವು** ಎಡೆಬಿಡದೆ ನಡೆದಿರುತ್ತದೆ. ಇಂದ್ರಿಯಗಳ ಸದ್ವೃತ್ತಿಗಳೇ ದೇವತೆಗಳು, ಅಸದ್ವೃತ್ತಿಗಳೇ ಅಸುರರು. ಅಸುರರಿಗೆ ಪರಾಜಯವೂ ದೇವತೆಗಳಿಗೆ ಜಯವೂ ಆಗುವದಕ್ಕೆ ಸದ್ಗ್ರಂಥಗಳ ಪಾರಾಯಣವೂ ಸತ್ಪುರುಷರ ಸಹಾಯವೂ ಸಹಾಯಕವಾಗಿರುತ್ತದೆ.

**೭೫.** ಅಧ್ಯಾತ್ಮಗ್ರಂಥಗಳಿಂದ ನಮಗೆ ನಿಜವಾದ ಪ್ರಯೋಜನವು ದೊರೆಯಬೇಕಾದರೆ ಅವುಗಳಲ್ಲಿರುವ ಯಾವದಾದರೊಂದು ಉತ್ತಮಭಾವನೆಯು ನಮ್ಮ ಮನಸ್ಸಿನಲ್ಲಿ **ಉತ್ಕಟ**ವಾಗಿ ಎದ್ದುಕೊಳ್ಳಬೇಕು. ಅದರ ಫಲವಾಗಿ ನಮ್ಮ ವ್ಯವಹಾರದಲ್ಲಿ ಆ

ಭಾವನೆಯು ಕರ್ಮರೂಪವಾಗಿ ತೋರಬೇಕು. ನಾವು ಮಾಡುವ ಆ ಕರ್ಮವು ಭಗವಂತನ ಆರಾಧನೆಯಾಗಿ ಪರಿಣಮಿಸಬೇಕು.

**೭೬.** ಅಧ್ಯಾತ್ಮಗ್ರಂಥಗಳನ್ನು ಓದುವದರಲ್ಲಿಯೂ ಅವುಗಳಲ್ಲಿ ಹೇಳಿರುವ ಸಾಧನೆಗಳನ್ನು ಅವಲಂಬಿಸುವದರಲ್ಲಿಯೂ ಬಲವಾದ ಇಚ್ಛೆಯುಂಟಾಗುವದು ಪರಮೇಶ್ವರನ ಅನುಗ್ರಹದಿಂದಲೇ, ಅಂಥ **ಇಚ್ಛೆ**ಯುಂಟಾದವರು ಶಾಸ್ತ್ರೀಯಕರ್ಮಗಳನ್ನೂ, ಲೌಕಿಕಕರ್ಮಗಳನ್ನೂ ಆ ಪರಮೇಶ್ವರನ ಆರಾಧನೆಗೆಂದು ಮಾಡಿ ಕೃತಕೃತ್ಯರಾಗಬೇಕು.

**೭೭.** ಅಧ್ಯಾತ್ಮಸಾಧನೆಗಳಲ್ಲಿಯೂ ಅಧ್ಯಾತ್ಮವಿಚಾರಗಳಲ್ಲಿಯೂ **ಅಭಿರುಚಿ** ಉಂಟಾಗಬೇಕಾದರೆ, ಈಗಾಗಲೇ ನೀವು ಮಾಡುತ್ತಿರುವ ಸಾಧನೆಗಳು ವೀರ್ಯವತ್ತರವಾಗಬೇಕಾದರೆ, ಮತ್ತು ಅಧ್ಯಾತ್ಮವಿಚಾರವು ಸಜೀವವಾಗಬೇಕಾದರೆ ಸತ್ಪುರುಷರ ಸಂಗವನ್ನು ಮಾಡಿಕೊಳ್ಳಬೇಕು. ಸತ್ಸಂಗದಿಂದ ಸಕಲಸಾಧನೆಗಳನ್ನೂ ಸಂಪಾದಿಸಿಕೊಳ್ಳಬಹುದು, ಸಕಲಪುರುಷಾರ್ಥಗಳನ್ನೂ ಪಡೆದುಕೊಳ್ಳಬಹುದು.

**೭೮.** ಪ್ರಪಂಚದಲ್ಲೆಲ್ಲ ಭಗವಂತನ ಪ್ರೇಮದ ವ್ಯಾಪಾರವು ನಡೆದಿರುತ್ತದೆ. ಸ್ವಾರ್ಥವನ್ನು ಬಿಟ್ಟು ಪ್ರೇಮದ ಕಣ್ಣನ್ನು ತೆರೆದು ನೋಡಿದವರಿಗೆ ಇದು ಸ್ಫುಟವಾಗಿ ಕಾಣುವದು. ಸತ್ಪುರುಷರು ಭಗವಂತನ ಪರಮಪ್ರೇಮಕ್ಕೆ ಪಾತ್ರರಾಗಿರುವರು. ಅವರಿಗೆ ಎಲ್ಲಾ ಪ್ರಾಣಿಗಳಲ್ಲಿಯೂ ಭಗವಂತನೇ ಕಾಣಿಸುತ್ತಿರುವನು. ಆದ್ದರಿಂದ ನಾವು **ಸತ್ಸಂಗ**ದಿಂದ ಈ ಸರ್ವತ್ರ ಭಗವದ್ಭಾವನೆಯನ್ನು ಸಂಪಾದಿಸಿಕೊಂಡು ಭಗವಂತನಲ್ಲಿ ದೃಢವಾದ ಭಕ್ತಿಯನ್ನು ಬೆಳೆಯಿಸಿಕೊಳ್ಳಬೇಕು.

**೭೯. ದಮ** : (ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವದು), **ಶಮ** (ಅಂತಃಕರಣವನ್ನು ಹಿಡಿತದಲ್ಲಿಟ್ಟುಕೊಂಡಿರುವದು), **ತಿತಿಕ್ಷೆ** (ಶೀತೋಷ್ಣಾದಿದ್ವಂದ್ವಗಳನ್ನು ವಿಚಾರಪೂರ್ವಕವಾಗಿ ಸಹಿಸಿಕೊಳ್ಳುವದು), **ಉಪರತಿ** (ಹೊರಮುಖವಾಗಿ ಕರ್ಮಗಳಲ್ಲಿಯೇ ತೊಡಗದಂತೆ ಮನಸ್ಸನ್ನು ಹಿಂಜಗ್ಗಿಸಿಕೊಳ್ಳುವದು), **ಶ್ರದ್ಧೆ** (ಗುರುಶಾಸ್ತ್ರವಾಕ್ಯಗಳಲ್ಲಿ ವಿಶ್ವಾಸವನ್ನಿಟ್ಟುಕೊಳ್ಳುವದು), **ಸಮಾಧಾನ** ( ಮನಸ್ಸನ್ನು ವಿವಿಧ ವಿಚಾರಗಳಿಂದ ಹರಿದಾಡಿಸತೊಡಗದೆ ತತ್ತ್ವವಿಚಾರದಲ್ಲಿ **ಏಕಾಗ್ರ**ಗೊಳಿಸಿಕೊಳ್ಳುವದು) - ಇವು ಆರೂ ಅಧ್ಯಾತ್ಮವಿಚಾರಕ್ಕೆ ಬಹುಮುಖ್ಯವಾದ ಸಾಧನೆಗಳು. ಇವುಗಳನ್ನು ಸತ್ಸಂಗದಿಂದಲೂ ಭಗವದ್ಭಕ್ತಿಯಿಂದಲೂ ಸುಲಭವಾಗಿ ಸಂಪಾದಿಸಿಕೊಳ್ಳಬಹುದು.

**೮೦.** ಯಾವನು ಶಾಸ್ತ್ರೋಕ್ತಕರ್ಮಗಳನ್ನೂ ವ್ಯವಹಾರದ ಕರ್ತವ್ಯಗಳನ್ನೂ ಈಶ್ವರಾರ್ಚನೆಯ ಬುದ್ಧಿಯಿಂದ ಮಾಡಿ ಚಿತ್ತಶುದ್ಧಿಯನ್ನು ಪಡೆದುಕೊಂಡಿರುವನೋ

ಯಾವನು ಶಮದಮಾದಿಗಳೆಂಬ ತತ್ತ್ವಜ್ಞಾನದ ಅಂತರಂಗಸಾಧನೆಗಳನ್ನೂ ಭಗವಂತನಲ್ಲಿ ಭಕ್ತಿಯನ್ನೂ ಸಂಪಾದಿಸಿಕೊಂಡಿರುವನೋ ಅವನಿಗೆ ಮತ್ತೆ ಕರ್ಮಗಳನ್ನು ಮಾಡಬೇಕಾದ ಅವಶ್ಯಕತೆಯಿರುವದಿಲ್ಲ. ಯಾವ ಊರಿಗೆ ತಲುಪಬೇಕೋ ಆವೂರ ಸ್ಟೇಷನ್ನಿಗೆ ಬಂದು ಮುಟ್ಟಿದ ಮೇಲೆ ರೈಲು ಟಿಕೆಟ್ಟನ್ನು ರೈಲಿನವರಿಗೇ ಒಪ್ಪಿಸಿ ಬಿಡುವಂತೆ ಅಂಥ ಮುಮುಕ್ಷುವು ಎಲ್ಲಾ **ಕರ್ಮಗಳನ್ನೂ ಸಂನ್ಯಾಸ**ಮಾಡಿಬಿಡುತ್ತಾನೆ.

**೮೧.** ಇಂಥ ಸಾಧನದಿಂದ ಇಂಥ ಫಲವನ್ನು ಸಾಧಿಸಿಕೊಳ್ಳಬೇಕೆಂಬ ಆಶೆಯನ್ನು ಸಂಪೂರ್ಣವಾಗಿ ತೊರೆಯುವದೇ ಸಂನ್ಯಾಸವು. ಪರಮಾರ್ಥವು ಸಾಧ್ಯಸಾಧನಗಳೆಲ್ಲಕ್ಕಿಂತಲೂ ವಿಲಕ್ಷಣವಾಗಿರುವದೆಂತಲೂ ಸಾಧ್ಯಸಾಧನಗಳು ಅದರಲ್ಲಿಯೇ **ಅಧ್ಯಸ್ತ**ವೆಂತಲೂ ಅರಿತುಕೊಂಡ ಆತ್ಮಜ್ಞಾನಿಯೇ ಪರಮಾರ್ಥಸಂನ್ಯಾಸಿಯು. ಆ ಜ್ಞಾನವನ್ನು ಪಡೆದುಕೊಳ್ಳುವದಕ್ಕೆಂದು ಶಾಂತಿದಾಂತ್ಯಾದಿಗಳನ್ನೂ ಶ್ರವಣಾದಿಗಳನ್ನೂ ಅಭ್ಯಾಸ ಮಾಡುವದಕ್ಕಾಗಿ ಸಕಲಶಾಸ್ತ್ರೋಕ್ತ ಕರ್ಮಗಳನ್ನೂ ಬಿಟ್ಟಿರುವವನನ್ನು ವಿವಿದಿಷಾಸಂನ್ಯಾಸಿ - ಜ್ಞಾನೇಚ್ಛೆಯುಳ್ಳ ಸಂನ್ಯಾಸಿ - ಎಂದು ವೇದಾಂತಿಗಳು ಕರೆಯುವರು.

**೮೨.** ಅಧ್ಯಾತ್ಮವಿದ್ಯೆಯು ಪರಮಾರ್ಥವಾಗಿರುವ ಬ್ರಹ್ಮದ ತತ್ತ್ವವನ್ನು ತಿಳಿಸುತ್ತದೆ. ಈ ಸದ್ಬ್ರಹ್ಮವು ನಮ್ಮೆಲ್ಲರ ಆತ್ಮನೇ ಆಗಿರುತ್ತದೆಯಾದ್ದರಿಂದ ಆತ್ಮತತ್ತ್ವವನ್ನು ತಿಳಿದುಕೊಳ್ಳಬೇಕೆಂಬ ಜಿಜ್ಞಾಸುಗಳೆಲ್ಲರೂ ಇದಕ್ಕೆ ಅಧಿಕಾರಿಗಳು. **ತತ್ತ್ವಜಿಜ್ಞಾಸು**ಗಳಾದವರು ಈ ತತ್ತ್ವವನ್ನು ಅರಿತು ಅದರಲ್ಲಿಯೇ ನೆಲೆನಿಂತಿರುವ ಸದ್ಗುರುವನ್ನು ಸೇರಿ ಆತನ ಉಪದೇಶದಿಂದಲೇ ಸದ್ವಿದ್ಯೆಯನ್ನು ಸಂಪಾದಿಸಿಕೊಂಡು ಕೃತಾರ್ಥರಾಗಬೇಕು.

**೮೩.** ನಾವೆಲ್ಲರೂ ಕೂಟಸ್ಥಸಚ್ಚಿದಾನಂದಸ್ವರೂಪರೇ ಆದರೂ ಆ ಸ್ವರೂಪದ ಪರಮಾತ್ಮನಿಂದ ಜಾರಿಬಂದಿರುತ್ತೇವೆ. ನಾವು ಹೋಗುತ್ತಿರುವದು ಅಜ್ಞಾನದ ತಪ್ಪು ಹಾದಿಯಲ್ಲಿ. ಆದ್ದರಿಂದ ಈ ಕೂಡಲೇ ಜ್ಞಾನವೈರಾಗ್ಯಗಳೆಂಬ ನಿವೃತ್ತಿಮಾರ್ಗಕ್ಕೆ ಹಿಂದಿರುಗುವದನ್ನು ಕಲಿಯಬೇಕು. ಪರಮಾತ್ಮನ ನಾಮವೊಂದಲ್ಲದೆ ಮತ್ತೇನನ್ನೂ ಸ್ಮರಿಸದೆ ಇರುವ **ನಿವೃತ್ತಿನಿಷ್ಠರು** ತಮ್ಮ ಸ್ವರೂಪವಾದ ಆನಂದವನ್ನು ಬೇಗನೆ ಕಂಡುಕೊಂಡು ಕೃತಕೃತ್ಯರಾಗುವರು.

**೮೪.** ಬೀಳುಮಾತುಗಳಿಗೂ ಬಿಡಿಯಮಾತುಗಳಿಗೂ ಕಿವಿಗೊಡುವದಕ್ಕಿಂತ ವ್ಯವಹಾರದಲ್ಲಿ ಮುಂದುವರಿಯುವ ಮಾರ್ಗವನ್ನು ಉಪದೇಶಿಸುವ ಮಾತುಗಳನ್ನು ಕೇಳುವದು ಉತ್ತಮ. ಆದರೆ ಹೊರಗಿನ ವಿಚಾರಗಳನ್ನು ಎಷ್ಟು ಕೇಳಿದರೂ ಪರಮಪುರುಷಾರ್ಥವು ದೊರೆಯಲಾರದು. ಪರಮಾತ್ಮವಿಷಯವಾದ ಶಾಸ್ತ್ರವಚನಗಳಿಗೂ ಗುರುಬೋಧೆಗೂ ಕಿವಿಗೊಡುವದೇ ನಿಜವಾದ **ಶ್ರವಣ.** ಅದರಿಂದಲೇ ನಮ್ಮ ಜೀವನವು ಆನಂದಮಯವಾಗುವದು.

**೮೫.** ಉಪನಿಷತ್ತುಗಳಲ್ಲಿ ಹೇಳಿರುವ **ತತ್ತ್ವ**ವು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಅರಿತುಕೊಳ್ಳುವದಕ್ಕೆ ನಮಗೆಲ್ಲರಿಗೂ ಹಕ್ಕು ಇರುತ್ತದೆ. ಹಾಗೆ ಅರಿತುಕೊಳ್ಳುವದಕ್ಕೆ ಪ್ರಯತ್ನಿಸುವದು ಮಾನವನ ಮುಖ್ಯಕರ್ತವ್ಯವಾಗಿರುತ್ತದೆ. ವೇದಾಂತವಾಕ್ಯಗಳನ್ನು ಮತ್ತೆ ಮತ್ತೆ **ಶ್ರವಣ**ಮಾಡಿರಿ; ವಿಷಯಗಳನ್ನು ಮತ್ತೆ ಮತ್ತೆ ಮನದಟ್ಟು ಮಾಡಿಕೊಳ್ಳಿರಿ.

**೮೬.** ವೇದಾಂತವಾಕ್ಯವನ್ನು ಶ್ರವಣಮಾಡಬೇಕು - ಎಂದರೆ ಅದರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಅದನ್ನು ಅನುಭವಕ್ಕೆ ಹೊಂದಿಸುವಂಥ **ಸತ್ತರ್ಕ**ವನ್ನು ಅವಲಂಬಿಸಿ ವಾಕ್ಯಾರ್ಥವನ್ನು ಮನನಮಾಡಬೇಕು. ವೇದಾಂತವಾಕ್ಯವು ಸಾರ್ವತ್ರಿಕವಾದ ಅನುಭವವನ್ನೇ ತಂದುಕೊಂಡುತ್ತದೆ. ಪರಮಾನಂದರೂಪನೇ ಆಗಿರುವ ಪರಮಾತ್ಮನು ಈಗಲೇ ನಮ್ಮ ಆತ್ಮನಾಗಿರುವನೆಂಬುದನ್ನು ಅದು ಮನಗಾಣಿಸಿಕೊಡುತ್ತದೆ.

**೮೭.** ಸರ್ವಭೂತಗಳಲ್ಲಿಯೂ ಪರಮಾತ್ಮನಿರುವನು ; ಪರಮಾತ್ಮನಲ್ಲಿಯೇ ಸರ್ವಭೂತಗಳೂ ಇರುವವು. ಈ ತತ್ತ್ವವನ್ನು ವೇದಾಂತದ ಶ್ರವಣಮನನನಿದಿಧ್ಯಾಸನಗಳಿಂದ ಅರಿತುಕೊಂಡು ಆನಂದಿಸಿರಿ. ಈ ಭಾಗ್ಯವು ಈಗಲೇ ದಕ್ಕದವರು ಸರ್ವತ್ರ ಭಗವದ್ಭಾವನೆಯನ್ನು ಮಾಡುವ ಸಾಧನವನ್ನು ಕೈಗೊಳ್ಳಬೇಕು. ದೇಹಾತ್ಮಭಾವನೆಯ **ತ್ಯಾಗ,** ಸತ್ಸಂಗ - ಇವುಗಳಿಂದ ಈ ಭಾವನೆಯನ್ನು ಸುಲಭವಾಗಿ ಸಂಪಾದಿಸಿಕೊಳ್ಳಬಹುದು.

**೮೮.** ಮನುಷ್ಯನು ಬದುಕಿರುವದು ಆಹಾರಸೇವನೆಗಲ್ಲ, ಪರಮಾತ್ಮಪ್ರಾಪ್ತಿಯೇ **ಜೀವನದ ಗುರಿ.** ಆಹಾರವು ಹಿತಮಿತವಾಗಿದ್ದು ಈ ಗುರಿಯ ಸಾಧನೆಗೆ ತಕ್ಕಂತೆ ಇರಬೇಕು. ಪರಮಾತ್ಮವಿಚಾರಕ್ಕೆ, ಪರಮಾತ್ಮಚಿಂತನೆಗೆ - ಎಂದೇ ತಮ್ಮ ಬಾಳನ್ನು ಮುಡಿಪಾಗಿಟ್ಟುಕೊಂಡಿರುವ ಸಂನ್ಯಾಸಿಗಳು ಹಸಿವೆಂಬ ನಿತ್ಯರೋಗದ ಪರಿಹಾರದ ಮಟ್ಟಿಗೆ ಸಾಕಾಗುವಷ್ಟು ಅನ್ನವನ್ನು ಭಿಕ್ಷಾಚರ್ಯೆಯಿಂದ ಸಂಪಾದಿಸಿಕೊಂಡು ಔಷಧದಂತೆ ಸೇವಿಸಿ ಮಿಕ್ಕ ಕಾಲವನ್ನು ಅಧ್ಯಾತ್ಮಚಿಂತನೆಯಲ್ಲಿಯೇ ಕಳೆಯುತ್ತಾರೆ.

**೮೯.** ಒಂದಕ್ಕೊಂದು ಪ್ರತಿಪಕ್ಷವಾಗಿ ತೋರುವ ಪದಾರ್ಥಗಳಿಗೆ **ದ್ವಂದ್ವ**ಗಳೆಂದು ಹೆಸರು. ದ್ವಂದ್ವಗಳಿಂದ ಪರಸ್ಪರವಿರುದ್ಧವಾದ ವೇದನೆಗಳು ನಮಗೆ ತೋರುತ್ತಿರುವವು. ನಮ್ಮ ಮನಸ್ಸಿನಲ್ಲಾಗುವ ಅಂಜಿಕೆ, ಧೈರ್ಯ ; ನಾಚಿಕೆ, ದಿಟ್ಟತನ; ಕುತೂಹಲ, ಔದಾಸೀನ್ಯ; ಮಾನ, ಅಪಮಾನ - ಮುಂತಾದ ಭಾವನೆಗಳೆಲ್ಲ ದ್ವಂದ್ವಗಳೇ. ಇಚ್ಛಾದ್ವೇಷಗಳಿಂದಲೇ ದ್ವಂದ್ವಗಳು ನಮ್ಮನ್ನು ಕಾಡುತ್ತಿರುವವು. ತತ್ತ್ವವನ್ನು ತಿಳಿದು ಕೃತಾರ್ಥರಾಗಬೇಕೆನ್ನುವ ಮುಮುಕ್ಷುಗಳು **ದ್ವಂದ್ವ**ಗಳನ್ನು ಸಹನೆಮಾಡಿಕೊಳ್ಳುವ ತಿತಿಕ್ಷೆ - ಎಂಬ ಸಾಧನವನ್ನು ಅಳವಡಿಸಿಕೊಳ್ಳಬೇಕು.

**೬೦.** ತಮಗೆ ಮತ್ತೊಬ್ಬರಿಂದಾಗುವ ಒಳಿತುಕೆಡಕುಗಳಿಂದ ಮನಸ್ಸಿನಲ್ಲಿ ಏರುಪೇರಿಲ್ಲದೆ ಇರುವದು ಎಷ್ಟು ಅವಶ್ಯವೋ ತಮ್ಮಿಂದಲೂ ಮತ್ತೊಬ್ಬರಿಗೆ ಒಳಿತು ಕೆಡಕುಗಳು ಆಗಿ ಅವರ ಮನಸ್ಸನ್ನು ಏರುಪೇರುಗೊಳಿಸದಂತೆ ನೋಡಿಕೊಳ್ಳುವದೂ ಮುಮುಕ್ಷುಗಳಿಗೆ ಅಷ್ಟೇ ಅವಶ್ಯವು. ವ್ಯವಹಾರದಿಂದ ದೂರವಾಗಿ ಕೇವಲ ಭಗವಚ್ಚಿಂತನೆ ಯಲ್ಲಿಯೇ ನಿಲ್ಲಲಾರದವರು ಸರ್ವರಲ್ಲಿಯೂ ಭಗವದ್ಭಾವನೆಯಿಂದ **ಮಿತ**ವ್ಯವಹಾರ ವನ್ನಿಟ್ಟುಕೊಳ್ಳುವದೇ ಮೇಲು.

**೬೧.** ನಿರ್ಜನವಾಗಿರುವ ವಿಶಾಲವಾದ ಬಯಲು, ಅರಣ್ಯ, ನದಿಯ ದಂಡೆ, ಬೆಟ್ಟದ ತಪ್ಪಲು, ದೇವಾಲಯ - ಮುಂತಾದ ಸ್ಥಳಗಳಲ್ಲಿ ಮನಸ್ಸು ಸ್ವಭಾವದಿಂದ ಶಾಂತಿಯನ್ನು ಪಡೆಯುವದು. ಪ್ರತ್ಯಗಾತ್ಮನಲ್ಲಿಯೇ ನಿಲ್ಲುವದಕ್ಕೆ ಸಜ್ಜಾಗುವದು. ಆದ್ದರಿಂದ ಇಂಥ **ಏಕಾಂತವಾಸ**ವನ್ನು ಮುಮುಕ್ಷುಗಳು ಆಶ್ರಯಿಸಬೇಕು. ಆದರೆ ನಿಜವಾದ ಏಕಾಂತವಾಸವೆಂದರೆ ತಾನೊಬ್ಬನೇ ಇರುವದೆಂದೇನೂ ಅರ್ಥವಲ್ಲ. ಎಲ್ಲೆಲ್ಲಿಯೂ ಇರುವ ಪರಮಾತ್ಮನೊಬ್ಬನೇ ಪರಮಾರ್ಥವೆಂದು ಆತ್ಮನಲ್ಲಿಯೇ ನೆಲೆ ನಿಲ್ಲುವದೇ ಮುಖ್ಯಾರ್ಥದಲ್ಲಿ ಏಕಾಂತವಾಸವು.

**೬೨.** ಮಾನವನ ಚಿತ್ತವು ಒಂದರಿಂದ ಒಂದು ವಸ್ತುವಿಗೆ ಹಾರಾಡುತ್ತಿರುವದು. ಅದಕ್ಕೆ ಯಾವ ಲಾಭದಿಂದಲೂ ಯಾವ ಭೋಗದಿಂದಲೂ ತೃಪ್ತಿಯಾಗಲಿ, ಸಮಾಧಾನ ವಾಗಲಿ, ದೊರೆಯುತ್ತಲಿಲ್ಲ. ಹೊರಗಿನ ಪ್ರಪಂಚವನ್ನು ಬಿಟ್ಟು ಏಕಾಂತದಲ್ಲಿ ಕುಳಿತು ತಮ್ಮ ತಮ್ಮೊಳಗೇ ಚಿತ್ತವನ್ನಿಟ್ಟುಕೊಂಡರೂ ಅದಕ್ಕೆ ಶಾಂತಿಸಮಾಧಾನಗಳು ದೊರೆಯದೇ ಇರುತ್ತವೆ - ಎಂದು ಅನೇಕರು ಗೊಣಗುಟ್ಟುವರು. ಆದರೆ ಇನ್ನೂ ಒಳಕ್ಕೆ ಸರಿದರೆ ಅಲ್ಲಿ ಎಲ್ಲರಿಗೂ ಆತ್ಮನಾಗಿರುವ ಭಗವಂತನು ಕಾಣಿಸುವನು. ಆ ಭಗವಂತನಲ್ಲಿ ನೆಲೆನಿಂತಾಗ ಮಾತ್ರವೇ ಚಿತ್ತಕ್ಕೆ ನಿಜವಾದ **ಶಾಂತಿ**ಸಮಾಧಾನಗಳು ದೊರೆಯುವವು.

**೬೩.** ಭಗವಂತನ ಪರಮಭಕ್ತರಾದವರು ಆತನ ಪೂರ್ಣಸ್ವರೂಪವನ್ನು ಕಂಡು ಕೊಂಡಿರುವರು. ಅವರಿಗೆ ಭಗವಂತನು ತಮ್ಮ ಆತ್ಮನಾಗಿರುವಂತೆಯೇ ಸರ್ವಭೂತ ಗಳಿಗೂ ಆತ್ಮನಾಗಿರುವನೆಂಬುದು ಮನದಟ್ಟಾಗಿಬಿಟ್ಟಿರುವದು. ಜಗತ್ತೆಲ್ಲವೂ ಪರಮಾತ್ಮನ **ವಿಭೂತಿ**ಯೇ, ಪರಮಾತ್ಮನನ್ನು ಬಿಟ್ಟು ಯಾವದೊಂದೂ ನಿಜವಾಗಿರುವದೇ ಇಲ್ಲ - ಎಂದು ಅವರ ತಿಳಿವಳಿಕೆ.

**೬೪.** ಪರಮಾತ್ಮನು ಪೂರ್ಣನಾಗಿರುತ್ತಾನೆ- ಎಂದರೆ ತನಗಿಂತ ಹೊರಗೆನಿಸುವ ಮತ್ತೊಂದು ತತ್ತ್ವವೇ ಇಲ್ಲದ **ವಿಶುದ್ಧ**ಸಚ್ಚಿದಾನಂದಘನನಾಗಿರುತ್ತಾನೆ. ಯಾರು ತಮ್ಮ ಬುದ್ಧಿಗೆ ಸಾಕ್ಷಿಯಾಗಿರುವ ಆತ್ಮನೇ ಸರ್ವರಿಗೂ ಆತ್ಮನಾಗಿರುವ ಪೂರ್ಣಾತ್ಮನೆಂಬುದನ್ನು ಶಾಸ್ತ್ರಾಚಾರ್ಯರ ಉಪದೇಶವನ್ನನುಸರಿಸಿ ಕಂಡುಕೊಂಡಿರುವರೋ ಅವರಿಗೆ ನಿತ್ಯವಾದ ಸುಖಶಾಂತಿಗಳು ದೊರೆತಿರುವವು.

**೯೫.** ಇರುವದೆಲ್ಲ ಒಂದೇ ತತ್ತ್ವವು. ಅದೇ ಪೂರ್ಣಾತ್ಮನು. ನಾನೂ ನೀವೂ ಎಲ್ಲರೂ ಪೂರ್ಣಾತ್ಮನಲ್ಲಿ ಒಂದಾಗಿರುವೆವು. ನಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ ಆತನು **ಪೂರ್ಣ**ನಾಗಿಯೇ ಇರುತ್ತಾನೆ. ಪೂರ್ಣಾತ್ಮಾನುಭವವನ್ನು ತಂದುಕೊಂಡ ಮಹಾತ್ಮನಿಗೆ ಯಾವ ಅಜ್ಞಾನವಾಗಲಿ, ಕಾಮವಾಗಲಿ ಉಳಿಯುವದಿಲ್ಲ. ಎಲ್ಲಾ ಸಂಶಯಗಳೂ ಕತ್ತರಿಸಿಹೋಗುವವು. ಕರ್ಮಬಂಧನವು ಒಂದಿಷ್ಟೂ ಉಳಿಯುವದಿಲ್ಲ.

**೯೬.** ಅಧ್ಯಾತ್ಮಸಾಧನದಲ್ಲಿ ಶ್ರದ್ಧೆ, ತಾತ್ಪರ್ಯ, ಇಂದ್ರಿಯಸಂಯಮ - ಈ ಮೂರು ಅಮೂಲ್ಯಸಹಕಾರಿಗಳು. ಯಾರು ಅಧ್ಯಾತ್ಮಗ್ರಂಥಗಳನ್ನು ನಿತ್ಯವೂ ಪಠನಮಾಡುತ್ತಾ, ಅವುಗಳಲ್ಲಿರುವ ವಿಷಯಗಳನ್ನು ಸಂಚಿಂತನಮಾಡುತ್ತಾ ಸ್ಥೈರ್ಯದಿಂದ ಸಾಧನವನ್ನು ಮಾಡುತ್ತಿರುವರೋ ಅವರಿಗೆ **ಪರಮೇಶ್ವರನ ಅನುಗ್ರಹ**ದಿಂದ ಬಲು ಬೇಗನೆ ಪರಮಪುರುಷಾರ್ಥದ ಪ್ರಾಪ್ತಿಯಾಗುವದು.

**೯೭.** ಪರಮಾತ್ಮನು ಬ್ರಹ್ಮಾದಿಸ್ತಂಬಪರ್ಯಂತವಾದ ಭೂತಗಳಿಗೆಲ್ಲ ಆತ್ಮನಾಗಿರುತ್ತಾನೆ. ಆದ್ದರಿಂದ ನಾವು ಆತನನ್ನು ನಮ್ಮೊಳಗೂ ನಮ್ಮ ಹೊರಗೂ ಎಲ್ಲೆಲ್ಲಿಯೂ ಕಾಣುವದಕ್ಕೂ ಆರಾಧಿಸುವದಕ್ಕೂ ಪ್ರಯತ್ನಿಸಬೇಕು. ಪರಮಾತ್ಮನು ಬಾಹ್ಯಪ್ರಪಂಚದಲ್ಲಿ ತುಂಬಿರುವದಲ್ಲದೆ ಅದನ್ನು ಮೀರಿಯೂ ಇರುತ್ತಾನೆ. ಆಂತರಿಕವಾದ ಸ್ವಾನುಭವದಿಂದ ಆ ಪ್ರಪಂಚಾತೀತತತ್ತ್ವವನ್ನು ಕಂಡುಕೊಳ್ಳುವದೇ ಮಾನವಸಂಸ್ಕೃತಿಯ **ತುಟ್ಟತುದಿ.**

**೯೮.** ಭಗವಂತನು ಎಲ್ಲಾ ದೇಶಕಾಲಗಳಲ್ಲಿಯೂ ಇರುವದಲ್ಲದೆ ದೇಶಕಾಲಗಳೆರಡನ್ನೂ ಮೀರಿರುವ ಸ್ವಭಾವದವನಾಗಿರುತ್ತಾನೆ. ಆತನೇ ನಮ್ಮಗಳಿಗೆಲ್ಲ ಆತ್ಮನಾಗಿರುವದರಿಂದ ತತ್ತ್ವದೃಷ್ಟಿಯಿಂದ ನೋಡಿದಾಗ ನಾವೆಲ್ಲರೂ ಅಮೃತಸ್ವರೂಪನಾಗಿರುವ ಆ ಪರಮಾತ್ಮನಲ್ಲಿ ಒಂದಾಗಿರುವೆವು. ಈ ನಿಜವನ್ನು ನಾವು ಮನಗಂಡಷ್ಟೂ ಇಹಲೋಕದಲ್ಲಿ ಸುಖದಿಂದ ಬಾಳುವದಕ್ಕೆ **ಅರ್ಹ**ರಾಗುವೆವು; ಪರುಮಪುರುಷಾರ್ಥಕ್ಕೂ ಅರ್ಹರಾಗುವೆವು.

**೯೯.** ದೇಶಕಾಲಾತೀತನಾದ ಪರಮೇಶ್ವರನು ನಮ್ಮಗಳ ಅಭ್ಯುದಯ ನಿಃಶ್ರೇಯಸಗಳಿಗಾಗಿ ದೇಶಕಾಲಪರಿಮಿತವಾದ ಪ್ರಪಂಚದಲಿಯೂ ತೋರಿಕೊಳ್ಳುತ್ತಿದ್ದಾನೆ. ಆ ದಯಾಘನನನ್ನು ಸೇವಿಸಿ ಕೃತಾರ್ಥರಾಗುವ ಪ್ರಯತ್ನವಿಶೇಷವೇ ನಿಜವಾದ **ಸಂಸ್ಕೃತಿ**ಯ ಹೆಗ್ಗುರುತು. ಆ ಸಂಸ್ಕೃತಿಯನ್ನು ಆರಿಸಿಕೊಂಡಿರುವವರ ಕಾವ್ಯ, ಶಾಸ್ತ್ರ, ಕಲೆ-ಎಲ್ಲವು ಗಳಲ್ಲಿಯೂ ಈ ಧ್ಯೇಯದ ಸೂಚನೆಯೇ ಕಾಣುತ್ತಿರುವದು.

**೧೦೦.** ಕಾಲಾಕಾಶಾದಿಗಳಲ್ಲಿ ತೋರಿಕೊಳ್ಳುತ್ತಿರುವ ಪ್ರಪಂಚದ **ವ್ಯವಸ್ಥೆ**ಯೆಲ್ಲವೂ ಪರಮೇಶ್ವರನ ಮಹಿಮೆಯು. ಆದರೆ ಆತನ ಪರಮಾರ್ಥಸ್ವರೂಪವು ಇಷ್ಟೇ ಅಲ್ಲ. ಇದನ್ನೆಲ್ಲ ಮೀರಿರುವ ಆತ್ಮಸ್ವರೂಪವು ಇದಕ್ಕಿಂತಲೂ ಬಹಳ ಹೆಚ್ಚಿನದು. ಈ ಮಹಿಮೆ

ಯನ್ನು ಕಂಡು ಆರಾಧಿಸುವದು ನಮ್ಮ ಆದ್ಯಕರ್ತವ್ಯವು. ಆದರೆ ದೃಶ್ಯಪ್ರಪಂಚವನ್ನು ಮೀರಿರುವ ಆತನ ಅಮೃತಸ್ವರೂಪವನ್ನು ಅರಿತುಕೊಂಡು ಆದರಲ್ಲಿ ಬೆರೆತು ಒಂದಾಗಿ ಶಾಶ್ವತವಾಗಿ ಅಲ್ಲಿಯೇ ನಿಲ್ಲುವದು ಈ ನಮ್ಮ ವ್ಯವಹಾರದ ಅಂತಿಮಧ್ಯೇಯವು.

**೧೧೧.** ಪರಮಾತ್ಮನು ದೇಶಕಾಲಪರಿಚ್ಛೇದವಿಲ್ಲದ ತನ್ನ **ಪೂರ್ಣರೂಪ**ದಲ್ಲಿ ಯಾವಾಗಲೂ ಇರುತ್ತಿರುವನು. ಆತನು ಪ್ರಪಂಚದಲ್ಲೆಲ್ಲ ತುಂಬಿಕೊಂಡಿರುವನಾದರೂ ದೇಶಕಾಲಗಳ ಕಟ್ಟಿಗೆ ಸ್ವಲ್ಪವೂ ಒಳಪಟ್ಟಿರುವದಿಲ್ಲ. ಪ್ರಪಂಚವೂ ನಿಜವಾಗಿ ಆತನ ಸ್ವರೂಪದಲ್ಲಿಯೇ ಇರುತ್ತದೆ.

**೧೧೨.** ಪರಮಾತ್ಮನು ತಾನು ಇರುವಂತೆಯೇ ಇದ್ದುಕೊಂಡಿದ್ದರೂ **ಮಾಯೆ**ಯಿಂದ ಪ್ರಪಂಚರೂಪದಲ್ಲಿಯೂ ತೋರಿಕೊಳ್ಳುತ್ತಿರುವನು. ಪ್ರಪಂಚವು ನಿಜವಾಗಿ ಪರಮಾತ್ಮನೇ ಆಗಿರುತ್ತದೆ. ಆತನನ್ನು ವಿಶ್ವರೂಪನೆಂದು ಭಾವಿಸುವದು ಒಂದು ದೊಡ್ಡ ಸಾಧನ. ಪ್ರಪಂಚದಲ್ಲಿರುವ ಯಾವದಾದರೂ ಉತ್ತಮವಸ್ತುವನ್ನು ಪರಮೇಶ್ವರನ ಪ್ರತೀಕವಾಗಿ ಭಾವಿಸಿ ಪೂಜಿಸಬಹುದೆಂತ ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆ ಪೂಜೆಗೆ ಭಾವನೆಗೆ ತಕ್ಕಂತೆ ಫಲವಾಗುವದು.

**೧೧೩.** ಪರಮಾತ್ಮನು ನಿರ್ಗುಣನೂ ನಿರಾಕಾರನೂ ಆಗಿರುವದೂ ನಿಜ. ಆದರೆ ಇಡಿಯ ಪ್ರಪಂಚವೇ ಅವನ ಶರೀರವಾಗಿರುವದರಿಂದ ಆತನನ್ನು ನಾವು ದಿನದಿನವೂ ಸರ್ವಕರಣಗಳಿಂದಲೂ ನೋಡುತ್ತಿರುವೆವು. ಪರಮೇಶ್ವರನನ್ನು ಸಗುಣರೂಪದಿಂದ ಆರಾಧಿಸುವದಕ್ಕೂ ನಿರ್ಗುಣರೂಪದಿಂದ ಅರಿತುಕೊಳ್ಳುವದಕ್ಕೂ ಒಂದು ಮುಖ್ಯ ಸಾಧನವು ಅವಶ್ಯವಾಗಿರುತ್ತದೆ. ಈ ಜಗತ್ತು ನಮ್ಮ ಪರಿಚ್ಛಿನ್ನರೂಪದ ಜೀವನಕ್ಕೆ ಭೋಗ ಸಾಮಗ್ರಿಗಳನ್ನು ಒದಗಿಸುವ ಕಾರಖಾನೆ-ಎಂಬ ಪಶುಬುದ್ಧಿಯನ್ನು **ಬಿಡಬೇಕು.** ಪರಮೇಶ್ವರನ ಆರಾಧನೆಗೆ ಬೇಕಾಗಿರುವ ಯಜ್ಞಸಾಧನಗಳ ಶಾಲೆಯಿದೆಂಬ ಭಾವನೆಯನ್ನು ಅಳವಡಿಸಿಕೊಳ್ಳಬೇಕು.

**೧೧೪.** ಬ್ರಾಹ್ಮಣಾದಿವರ್ಣಗಳು ಜನ್ಮಕ್ಕಿಂತಲೂ ಗುಣಕರ್ಮಗಳಿಗೆ ಹೆಚ್ಚು ಹೊಂದಿಕೊಂಡಿರುವವು. ಮುಖ್ಯಾರ್ಥದಲ್ಲಿ ಬ್ರಾಹ್ಮಣನೆಂದರೆ ಬ್ರಹ್ಮಜ್ಞಾನದಿಂದ ಪರಮಾತ್ಮನಲ್ಲಿಯೇ ನೆಲೆನಿಂತವನು. ಬ್ರಾಹ್ಮಣ್ಯವನ್ನು ಕಾಪಾಡಿದರೇ ವೈದಿಕಧರ್ಮವನ್ನು ಕಾಪಾಡಿದಂತೆ. ಅದರಿಂದಲೇ ಜಗತ್ತಿನ ಸ್ಥಿತಿಯಾಗುವದು. ಬ್ರಾಹ್ಮಣರೂ ಅವರಿಗೆ ಸಹಾಯಕರಾದ ಇತರವರ್ಣದವರೂ ಸಾಕಾರಪರಮೇಶ್ವರನ ಪವಿತ್ರಾವಯವಗಳಿಂದಲೇ ಹುಟ್ಟಿಬರುವರೆಂದೂ ಧರ್ಮೋದ್ಧಾರಕ್ಕೆ ನೆರವಾಗುವದರಿಂದಲೇ ಅವರ ಜನ್ಮವು **ಸಾರ್ಥಕ**ವಾಗುವದೆಂದೂ ವೇದವು ಸಾರುತ್ತಿದೆ.

**೧೧೫.** ವಿಶ್ವದಲ್ಲಿರುವ ಸ್ಥಾವರಜಂಗಮಪ್ರಾಣಿಗಳೆಲ್ಲವೂ ಪರಮಾತ್ಮಚೈತನ್ಯದಿಂದ ವ್ಯಾಪ್ತವಾಗಿರುವವು. ಪ್ರಾಣಿಗಳೂ ಮನುಷ್ಯರೂ ದೇವತೆಗಳೂ ಕಡಿದುಹಾಕಲಾಗಲಾರದ

ನಿತ್ಯಸಂಬಂಧದಿಂದ ಒಬ್ಬರಿಗೊಬ್ಬರು ಹೊಂದಿಕೊಂಡಿರುವರು. ದೇವತೆಗಳು ಪರಮೇಶ್ವರನ ಶಕ್ತಿವಿಶೇಷಗಳು. **ಚೈತನ್ಯ**ಸ್ವರೂಪನಾದ ಪರಮೇಶ್ವರನಿಗಿಂತ ಅವರು ಬೇರೆಯಲ್ಲ. ದೇವತೆಗಳ ಆರಾಧನೆಯೂ ದೇವಾಧಿದೇವನಾದ ಆ ಪರಮೇಶ್ವರನ ಆರಾಧನೆಯೂ ನಮ್ಮೆಲ್ಲರ ಕಲ್ಯಾಣಕ್ಕೆ ಕಾರಣವಾಗಿರುತ್ತದೆ.

**೧೦೬.** ಯಜ್ಞ, ದಾನ, ತಪಸ್ಸು-ಎಂಬ ಮೂರು **ಸಾಧನ**ಗಳನ್ನು ವೇದದಲ್ಲಿ ಹೇಳಿರುತ್ತದೆ. ಪರಮೇಶ್ವರನ ಆರಾಧನೆಯೆಂಬ ಬುದ್ಧಿಯಿಂದ ಸರ್ವಭೂತಗಳಿಗೂ ಯಥೋಚಿತವಾದ ಉಪಕಾರವನ್ನು ಯಥಾಶಕ್ತಿಯಾಗಿ ಮಾಡುವವರ ವ್ಯವಹಾರವೂ ಯಜ್ಞದಾನತಪಸ್ಸೇ ಆಗಿರುತ್ತದೆ.

**೧೦೭.** ಪರಮಾತ್ಮ, ಪ್ರಪಂಚ- ಎಂದು ಎರಡು ತತ್ತ್ವಗಳಿಲ್ಲ. ಒಂದೇ ತತ್ತ್ವವು ಎರಡು ಬೇರೆಬೇರೆಯ ದೃಷ್ಟಿಗಳಿಂದ ಬೇರೆಬೇರೆಯಾಗಿ ಕಾಣುತ್ತಿರುವದು. ನಿಜವಾಗಿ ನೋಡಿದರೆ ಸಚ್ಚಿದಾನಂದಸ್ವರೂಪವಾದ ಒಂದೇಒಂದು ಪರಮಾರ್ಥತತ್ತ್ವವಿದೆ. ಅದನ್ನು ಋಷಿಗಳು ಉಪದೇಶಿಸುವ **ಒಳದೃಷ್ಟಿ**ಯಿಂದ ನಮ್ಮಲ್ಲಿ ನಾವು ಕಂಡುಕೊಂಡು ಆನಂದಿಸಬೇಕು.

**೧೦೮.** ಪರಮಾತ್ಮನು ತಾನೊಬ್ಬನೇ ಎಲ್ಲೆಲ್ಲಿಯೂ ತುಂಬಿಕೊಂಡಿರುವದರಿಂದ ಪುರುಷನೆಂಬ ಹೆಸರು ಅವನಿಗೆ ಅನ್ವರ್ಥವಾಗಿರುವದು. ಮನಮೆಚ್ಚುವ ಯಾವ ಯಾವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಭಾವಗಳಿರುವವೋ ಅವೆಲ್ಲ ಆತನ ವಿಭೂತಿಗಳೇ. ವಿಭೂತಿಗಳನ್ನು ಗೌರವಿಸಿ ಚಿಂತನೆಮಾಡುವದನ್ನು ಮೊದಲುಮಾಡಿ ಇಡಿಯ ಜಗತ್ತೇ ಪರಮಾತ್ಮನ ಆಕಾರವಿಶೇಷವೆಂಬ **ಉದಾತ್ತಭಾವನೆ**ಯನ್ನು ತಂದುಕೊಳ್ಳುವದಕ್ಕೆ ಯತ್ನಿಸಬೇಕು. ಭಕ್ತರಿಗೆ ಆತನ ಅನುಗ್ರಹದಿಂದಲೇ ಆತನ ಪರಮಾರ್ಥರೂಪದ ತತ್ತ್ವಜ್ಞಾನವೂ ದೊರಕುವದು.

**೧೦೯.** 'ಬ್ರಹ್ಮೈವೇದಂ ವಿಶ್ವಮ್' (ಈ ವಿಶ್ವವೆಲ್ಲವೂ ಬ್ರಹ್ಮವೇ) 'ಅಯಮಾತ್ಮಾ ಬ್ರಹ್ಮ' (ಈ ಆತ್ಮನೇ ಬ್ರಹ್ಮವು) ಎಂಬೀ ಎರಡು ಅಮೋಘವಾಕ್ಯಗಳಲ್ಲಿ ವೇದಾಂತ ವೇದ್ಯವಾದ ಪರಮಾರ್ಥತತ್ತ್ವದ **ಉಪದೇಶವು** ಅಡಕವಾಗಿರುತ್ತದೆ. ಈ ಪರಮಾರ್ಥ ತತ್ತ್ವವನ್ನು ಅಧಿಕಾರಿಗಳಾದವರೆಲ್ಲರೂ ಈಗಲೆ ಇಲ್ಲಿಯೇ ಅನುಭವದಲ್ಲಿ ಕಂಡು ಕೊಂಡು ನಲಿದಾಡಬಹುದೆಂದು ಋಷಿಗಳ ಉಪದೇಶವು.

**೧೧೦.** ಭೂತಭವಿಷ್ಯದ್ವರ್ತಮಾನಗಳೆಂಬ ಮೂರು ಕಾಲಗಳಲ್ಲಿ ತೋರುವ ದೆಲ್ಲವೂ, ಈ ಮೂರು ಕಾಲಗಳನ್ನು ಮೀರಿರುವದೆಲ್ಲವೂ ಪರಮಾರ್ಥತತ್ತ್ವದ ವಿಭೂತಿಮಾತ್ರವು. ಅದನ್ನು ವೇದದಲ್ಲಿ **ಓಂಕಾರ**ವೆಂದು ನಿರ್ದೇಶಿಸಲಾಗಿದೆ. ಓಂಕಾರಕ್ಕೆ ಹೊರತಾಗಿ ಯಾವದೊಂದೂ ಇರುವದಿಲ್ಲವೆಂಬುದೇ ವೇದಾಂತಸಿದ್ಧಾಂತ.

**೧೧೧.** ನಮ್ಮ ಮುಂದೆ ಹರಡಿರುವ ಪ್ರಪಂಚವೆಲ್ಲ (ಅಭಿಧಾನ) ಹೇಳಿ ತಿಳಿಸುವ ಶಬ್ದ, (ಅಭಿಧೇಯ) ಶಬ್ದಕ್ಕೆ ವಿಷಯವಾದ ಪದಾರ್ಥ- ಎಂಬ ಎರಡು ದೊಡ್ಡ ರಾಶಿಗಳಾಗಿ ವಿಂಗಡಿಸಿಕೊಂಡಿರುವದು. ಮನಸ್ಸಿನಲ್ಲಿ ತಿಳಿದದ್ದನ್ನೇ ನಾವು ವಾಕ್ಕಿನಿಂದ ಹೇಳುತ್ತೇವಾದ್ದರಿಂದ ಪ್ರಪಂಚವನ್ನು ವಿಷಯವಿಷಯಿಗಳ ಒಟ್ಟು- ಎಂದು ಭಾವಿಸಬಹುದು. ಆದ್ದರಿಂದ ಈ ಪ್ರಪಂಚದ ಪರಮಾರ್ಥವು ಇವೆರಡನ್ನೂ ತನ್ನಲ್ಲಿ ಅಡಕಮಾಡಿಕೊಂಡು ಇವೆರಡನ್ನೂ ಮೀರಿರುತ್ತದೆ. ಅದು ವಿಷಯವೂ ಅಲ್ಲ; ವಿಷಯಿಯೂ ಅಲ್ಲ. ಅದನ್ನು ಅರಿತುಕೊಳ್ಳುವದೇ **ಬ್ರಹ್ಮವಿದ್ಯೆ.**

**೧೧೨.** ನಮ್ಮನಮ್ಮ ಶರೀರೇಂದ್ರಿಯಗಳಿಗೆ ಕಟ್ಟುಬಿದ್ದವರು ನಾವೆಂದು ಭಾವಿಸಿ ಕೊಂಡು ನೋಡುವಾಗ ನಾವು ಪ್ರಪಂಚದಲ್ಲಿ ಒಂದು ಮೂಲೆಯಲ್ಲಿ ಇರುವವರಾಗಿ ಕಾಣಿಸುತ್ತೇವೆ. ಆದರೆ ನಮ್ಮೊಳಗೆ ಇರುವ ಚಿನ್ಮಾತ್ರಸ್ವರೂಪವಾದ ಸಾಕ್ಷಿಯ ಕಣ್ಣಿನಿಂದ ನೋಡಿದರೆ ನಮ್ಮ ಎಚ್ಚರದವಸ್ಥೆಯೂ ಇದರಲ್ಲಿ ಕಾಣುವ ಪ್ರಪಂಚವೂ ಆ ಆತ್ಮನ ಆಸರೆಯಲ್ಲಿಯೇ ಜೀವಿಸಿಕೊಂಡಿರುತ್ತದೆಯೆಂಬುದು **ಸ್ಫುಟ**ವಾಗುತ್ತದೆ. ಆ ಸಾಕ್ಷಿಯಾದ ಆತ್ಮನಿಗೆ ಎಚ್ಚರದವಸ್ಥೆಯ ಅಥವಾ ಅದರೊಳಗೆ ಕಾಣುವ ಪ್ರಪಂಚದ ಸಂಪರ್ಕವು ಎಳ್ಳಷ್ಟೂ ಇರುವದೇ ಇಲ್ಲ.

**೧೧೩.** ನಿಮ್ಮ ಎಚ್ಚರದಲ್ಲಿಯೂ ಕನಸಿನಲ್ಲಿಯೂ ನಿಮಗೆ ಕಾಣುವ ಪ್ರಪಂಚವು-ಎಂದರೆ ಜ್ಞಾತೃಜ್ಞಾನಜ್ಞೇಯಗಳೆಂಬ ಮೂರುಬಗೆಯ ಭೇದವು ನಿಮ್ಮ ಆತ್ಮನೇ ಆಗಿರುವ ಪರಮಾತ್ಮನನ್ನು ಅವಲಂಬಿಸಿಕೊಂಡೇ ತೋರುತ್ತಿರುವದು. ಆ ಆತ್ಮನ ರೂಪವು ಈ ಎರಡವಸ್ಥೆಗಳಲ್ಲಿಯೂ ಯಾವ ಭೇದವನ್ನೂ ತಳೆಯದೆ ಚಿನ್ಮಾತ್ರ ಜ್ಯೋತಿಯಾಗಿ ಅನುಭವಕ್ಕೆ ಬರುತ್ತಿರುವದು. ಜ್ಞಾತೃವಿನ ರೂಪವನ್ನೇ ನಾನೆಂದುಕೊಂಡು ಹೊರಗಣ್ಣಿನಿಂದ ವಿಷಯಾಸಕ್ತರಾಗಬೇಡಿರಿ. ಎಲ್ಲಕ್ಕೂ ಸಾಕ್ಷಿಯಾಗಿರುವ ಆ ಪರಮಾತ್ಮ ಸ್ವರೂಪವೇ ನನ್ನದು-ಎಂಬ ಮಹಾಜ್ಞಾನವನ್ನು ಸತ್ಪುರುಷರ ಬೋಧೆಯಿಂದ ಪಡೆದು ಕೊಂಡು **ಧನ್ಯ**ರಾಗಿರಿ.

**೧೧೪.** ಸುಷುಪ್ತಿ, ತನಿನಿದ್ರೆ-ಎಂಬ ಅವಸ್ಥೆಯ ವಿಷಯದಲ್ಲಿ ಜನರಿಗೆ ಬಹಳ ತಪ್ಪು ಅಭಿಪ್ರಾಯವಿರುತ್ತದೆ. ಅದೊಂದು ವ್ಯರ್ಥಕಾಲಕ್ಷೇಪಕ್ಕೆ ಕಾರಣವಾದ ದುರವಸ್ಥೆಯ ಸ್ಥಿತಿ ಎಂದು ಅನೇಕರು ಭಾವಿಸಿರುತ್ತಾರೆ. ಅಲ್ಲಿ ನಮ್ಮ ಆತ್ಮನು ಪ್ರಾಜ್ಞನಾದ- ಚೈತನ್ಯಮಾತ್ರ ಸ್ವರೂಪನಾದ ಅದ್ವಿತೀಯಪರಮಾತ್ಮನಲ್ಲಿ ಒಂದಾಗಿರುತ್ತಾನೆಂದು ಶಾಸ್ತ್ರಗಳು ಸಾರುತ್ತಿರು ವವು. ಅಲ್ಲಿರುವ ಆನಂದವು ಆ ಪರಮಾತ್ಮನ ಆನಂದವೇ ಎಂದೂ ಶಾಸ್ತ್ರಗಳಲ್ಲಿ ಹೇಳಿದೆ. ಆದ್ದರಿಂದ **ತನಿನಿದ್ರೆ**ಯಲ್ಲಿರುವ ಆತ್ಮಸ್ವರೂಪವನ್ನು ವಿಚಾರಮಾಡಿ ಅರಿತುಕೊಳ್ಳುವದರಿಂದ ಬಹಳ ಪ್ರಯೋಜನವಿದೆ.

೧೧೫. **ಸುಷುಪ್ತಿ**ಯಲ್ಲಿ ಎಂದರೆ ಕನಸಿಲ್ಲದ ಗಾಢನಿದ್ರೆಯಲ್ಲಿ ಪರಮೇಶ್ವರನು ಜೀವರೆಲ್ಲರನ್ನೂ ತನ್ನೊಳಗೆ ಒಂದುಗೂಡಿಸಿಕೊಂಡುಬಿಟ್ಟಿರುತ್ತಾನೆ. ಶಾಸ್ತ್ರಾಚಾರ್ಯರ ಉಪದೇಶವನ್ನವಲಂಬಿಸಿ ಸುಷುಪ್ತಿಯಲ್ಲಿರುವ ನಮ್ಮ ಆತ್ಮಸ್ವರೂಪವನ್ನು ವಿಮರ್ಶಿಸಬೇಕು. ಈ ವಿಮರ್ಶೆಯನ್ನು ಉತ್ತಮರೀತಿಯಿಂದ ಮಾಡಿದವರಿಗೆ ಪರಮಾತ್ಮನು ಸರ್ವೇಶ್ವರನು, ಸರ್ವಜ್ಞನು, ಸರ್ವಾಂತರ್ಯಾಮಿ, ಸರ್ವಪ್ರಪಂಚಗಳ ಸೃಷ್ಟಿಪ್ರಲಯಗಳಿಗೂ ಕಾರಣನಾದವನು- ಎಂಬ ವರ್ಣನೆಯ ಮರ್ಮವು ಮನದಟ್ಟಾಗುವದು.

೧೧೬. ಜಾಗ್ರತ್ ಸ್ವಪ್ನಗಳಲ್ಲಿ ಆತ್ಮನು ಸಪ್ರಪಂಚನಾಗಿಯೂ ಜ್ಞಾನಯುಕ್ತನಾಗಿಯೂ ಇರುವನೆಂದೂ ಸುಷುಪ್ತಿಯಲ್ಲಿ ಅವನು ಯಾವ ಪ್ರಪಂಚವನ್ನೂ ಕಾಣದೆ ಮರವೆಯು ಮುಸುಕಿಕೊಂಡವನಾಗಿರುವನೆಂದೂ ತಿಳಿಯುವ ವ್ಯವಹಾರದೃಷ್ಟಿಯು **ಪ್ರಮಾತೃಸ್ವರೂಪರೇ** ನಾವೆಂದು ತಿಳಿಯುವ ದೃಷ್ಟಿಕೋನದಿಂದ ಆದದ್ದು. ಶಾಸ್ತ್ರ ದೃಷ್ಟಿಯಿಂದ ನೋಡಿದಾಗ ನಮ್ಮ ಸ್ವರೂಪವು ಯಾವಾಗಲೂ ಸತ್ಯಜ್ಞಾನಾನಂದ ರೂಪವಾಗಿಯೇ ಇರುತ್ತದೆ. ಅದರಲ್ಲಿ ಯಾವ ಪ್ರಪಂಚವಾಗಲಿ, ಜ್ಞಾನಾನಂದಗಳ ಸಂಕೋಚವಾಗಲಿ ಇರುವದಿಲ್ಲ.

೧೧೭. ಪರಮಾರ್ಥವು ನಮ್ಮೆಲ್ಲರಿಗೂ ಆತ್ಮನಾಗಿರುವದರಿಂದ ಅದನ್ನು ಹೊಸ ದಾಗಿ ಅರಿಯಬೇಕಾದದ್ದೇನೂ ಇರುವದಿಲ್ಲ. ಆದರೆ ಆದರಲ್ಲಿ ಬಗೆಬಗೆಯ ಮಿಥ್ಯಾ ಕಲ್ಪನೆಗಳನ್ನು ನಾವು ಮಾಡಿಕೊಂಡಿರುತ್ತೇವೆ. ಈ ಕಲ್ಪನೆಗಳನ್ನು ನಾವು ಕ್ರಮಕ್ರಮವಾಗಿ ಕಳೆದುಕೊಂಡು ಪರಮಾತ್ಮನಲ್ಲಿಯೇ **ನಿಷ್ಠೆ**ಯನ್ನು ಪಡೆದುಕೊಳ್ಳಬೇಕಾಗಿದೆ. ಆತ್ಮಸ್ವರೂಪದಲ್ಲಿ ಅಧ್ಯಾರೋಪಿತವಾಗಿರುವ ವಿಶೇಷಗಳನ್ನು ಅಲ್ಲಗಳೆದು ಪರಮಾರ್ಥದಲ್ಲಿ ನಮ್ಮನ್ನು ನೆಲೆಗೊಳಿಸುವದೇ ಶಾಸ್ತ್ರದ ಕೆಲಸವಾಗಿರುತ್ತದೆ.

೧೧೮. ಎಲ್ಲಾ ಜೀವರುಗಳಿಗೂ ಒಬ್ಬ ಪರಮಾತ್ಮನೇ ಆತ್ಮನಾಗಿರುವನು. ಒಬ್ಬೊಬ್ಬ ಜೀವನ ದೇಹೇಂದ್ರಿಯಾದಿಗಳ ಗುಂಪಿನ ನಿಮಿತ್ತದಿಂದ ಆಯಾ ಜೀವರು ಬೇರೆಬೇರೆಯೆಂದೇ ತೋರುತ್ತಿದ್ದರೂ ಶಾಸ್ತ್ರದೃಷ್ಟಿಯಿಂದ ಪರಿಶೀಲಿಸಿದಾಗ ಯಾವ ದೊಂದು ಉಪಾಧಿಯ ಗೋಜೂ ಈ ಆತ್ಮನಿಗೆ ಇಲ್ಲವೆಂದೂ ಇವನು ನಿರ್ವಿಶೇಷನಾದ ಶುದ್ಧನಾದ ಅದ್ವಿತೀಯನಾದ ಆತ್ಮನೆಂದೂ ತಿಳಿಯಬರುವದು. ಇದನ್ನು ಅರಿತು ಕೊಂಡವರು ಆ ಜ್ಞಾನದ ಮಹಿಮೆಯಿಂದ ಆ ಪರಮಾತ್ಮನಲ್ಲಿ **ಐಕ್ಯ**ವನ್ನು ಹೊಂದುವರು. ಅವರಿಗೆ ಯಾವ ಸಂಸಾರದ ದುಃಖಗಳೂ ಅಂಟುವದಿಲ್ಲ.

೧೧೯. ಪರಮಾತ್ಮನೇ ನಮ್ಮೆಲ್ಲರಿಗೂ ಆತ್ಮನಾಗಿರುತ್ತಾನೆ. ಎಚ್ಚರ, ಕನಸು, ನಿದ್ರೆ- ಎಂಬ ಮೂರು, ಅವಸ್ಥೆಗಳಲ್ಲಿಯೂ ಅವನು ಸರ್ವಸಾಕ್ಷಿಯಾಗಿ ಎಲ್ಲವನ್ನೂ ಬೆಳಗುತ್ತಿರುತ್ತಾನೆ. ಪರಮಾತ್ಮವಾಚಕಶಬ್ದಗಳಲ್ಲಿ ಓಂಕಾರವು ಅವನನ್ನು ತೀರ ಹತ್ತಿರ ವಾಗಿ ಅನುಭವಕ್ಕೆ ತಂದುಕೊಡುವ ಶಬ್ದವಾಗಿದೆ. ಎಚ್ಚರವೇ ಮುಂತಾದ ಅವಸ್ಥೆಗಳ

ಆತ್ಮಸ್ವರೂಪಕ್ಕೆ ಕ್ರಮವಾಗಿ ಅಕಾರ, ಉಕಾರ, ಮಕಾರ- ಇವು ಹೆಸರುಗಳು. ಲೋಕದಲ್ಲಿರುವ ಎಲ್ಲಾ ನಾಮಗಳ ಅರ್ಥವನ್ನೂ ಓಂಕಾರವು ಆಡಗಿಸಿಕೊಂಡಿರುತ್ತದೆ- ಎಂಬುದನ್ನು ನೆನಪಿಟ್ಟರೆ ಎಚ್ಚರವನ್ನೆಲ್ಲ ಅಕಾರವೂ ಕನಸನ್ನೆಲ್ಲ ಉಕಾರವೂ ತನಿ ನಿದ್ರೆಯನ್ನೆಲ್ಲ ಮಕಾರವೂ ತಿಳಿಸುತ್ತದೆ-ಎಂಬ ಉಪದೇಶವು ಸುಲಭವಾಗಿ ಮನದಟ್ಟಾಗುವದು. ಆದರೆ ಈ ಜ್ಞಾನಕ್ಕೆ ದೇಹಾತ್ಮಬುದ್ಧಿಯನ್ನು ಕಳೆದುಕೊಂಡ **ವಿರಕ್ತರು** ಮಾತ್ರ ಅಧಿಕಾರಿಗಳಾಗಿರುತ್ತಾರೆ.

**೧೨೦.** ಇಂದ್ರಿಯಗಳಿಂದಾಗುವ ತಿಳಿವಳಿಕೆಯು ಬಾಹ್ಯಪ್ರಪಂಚದ ಅನುಭವಕ್ಕೆ ಆಧಾರವಾಗಿರುವದು. ಅಂತಃಕರಣದಲ್ಲಿ ಆಗುವ ಜ್ಞಾನೇಚ್ಛಾಕ್ರಿಯಾಶಕ್ತಿಗಳ ವ್ಯಾಪಾರದ ತಿಳಿವಳಿಕೆಯು ಆಧ್ಯಾತ್ಮಿಕಾನುಭವಕ್ಕೆ ಆಧಾರವಾಗಿರುವದು. ಈ ಎರಡನ್ನೂ ನೇರಾಗಿ ಅರಿಯುವ ಸಾಕ್ಷ್ಯನುಭವವು ಪೂರ್ಣಪರಮಾರ್ಥದ **ನಿರ್ಣಯಕ್ಕೆ** ಆಧಾರವಾಗಿರುವದು. ಮುಮುಕ್ಷುಗಳು ಅಂತರ್ಮುಖಿಗಳಾದ ಜ್ಞಾನಿಗಳ ಅನುಗ್ರಹದಿಂದ ಈ ಮೂರನೆಯ ಅನುಭವದ ಪರಿಚಯವನ್ನು ಮಾಡಿಕೊಳ್ಳುವದಕ್ಕೆ ಪ್ರಯತ್ನಿಸಬೇಕು.

**೧೨೧.** ಅಧ್ಯಾತ್ಮಮಾರ್ಗವೆಂಬುದು ಪ್ರಯತ್ನಮಾಡುವವರೆಲ್ಲರಿಗೂ ಒಂದಾನೊಂದು ದಿನ ಸಿಕ್ಕಿಯೇ ಸಿಕ್ಕುವದು. ಅದಕ್ಕೆ ತಕ್ಕ **ಸ್ಥಿರಪ್ರಯತ್ನವು** ಬೇಕು. ಶರೀರ, ಇಂದ್ರಿಯಮನಸ್ಸುಗಳು- ಇವುಗಳನ್ನು ಸರಿಯಾಗಿ ಸಜ್ಜುಗೊಳಿಸಿಕೊಳ್ಳಬೇಕು ಆ ಮಾರ್ಗವನ್ನು ದೊರಕಿಸಿಕೊಂಡ ಉತ್ತಮಾಧಿಕಾರಿಗಳಿಗೆ ಇಲ್ಲಿಯೇ ಈ ಜನ್ಮದಲ್ಲಿಯೇ ನಿತ್ಯಾನಂದರೂಪವಾದ ಪುರುಷಾರ್ಥವು ದೊರಕುವದು. ಮಿಕ್ಕವರಿಗೆ ಕಾಲಾಂತರದಲ್ಲಿ ಯಾದರೂ ಅದು ದೊರಕುತ್ತದೆ. ಸದ್ಯಕ್ಕೆ ಪ್ರಯತ್ನಕ್ಕೆ ತಕ್ಕಂತೆ ಫಲವಾಗುವದು.

**೧೨೨.** ಶಾಸ್ತ್ರದಲ್ಲಿ ವಿಹಿತವಾಗಿರುವ ವರ್ಣಾಶ್ರಮಕರ್ಮಗಳನ್ನೂ ವ್ಯವಹಾರದಲ್ಲಿ ನಮ್ಮ ನಮ್ಮ ಉದ್ಯೋಗಗಳ ಕೆಲಸಗಳನ್ನೂ ಪರಮೇಶ್ವರನ ಆರಾಧನೆ- ಎಂಬ ಭಾವನೆಯಿಂದ ಮಾಡುವದರಿಂದ ಆ ಕರ್ಮಗಳಿಗೆ ವೀರ್ಯವು ಬರುವದು. ಕರ್ಮಗಳು ಆಗ ನಮ್ಮ **ಚಿತ್ತಕ್ಕೆ** ಒಂದುಬಗೆಯ ಸಂಸ್ಕಾರವನ್ನುಂಟುಮಾಡಿ ಅದನ್ನು ಮೇಲು ಮಟ್ಟಕ್ಕೇರಿಸುವವು.

**೧೨೩.** ಶರೀರಪ್ರಧಾನವಾದ ಯಜ್ಞದಾನತಪಸ್ಸುಗಳಂಥ ಕರ್ಮಗಳಿಗಿಂತಲೂ **ಮನಃಪ್ರಧಾನ**ವಾದ ಶಮದಮಾದಿಸಾಧನಗಳು ಆತ್ಮಜ್ಞಾನಕ್ಕೆ ಹತ್ತಿರವಾಗುತ್ತವೆ. ಏಕೆಂದರೆ ಜ್ಞಾನವು ಅಂತಃಕರಣದಲ್ಲಿ ಉಂಟಾಗಬೇಕು. ಶಮದಮಾದಿಗಳಂಥ ಒಳಗಿನ ಸಾಧನಗಳಿಂದ ಸಂಸ್ಕಾರವಾಗದೆ ಇರುವ ಅಂತಃಕರಣದಲ್ಲಿ ಅತಿಸೂಕ್ಷ್ಮವಾಗಿರುವ ಪರಮಾತ್ಮವಸ್ತುವಿನ ಜ್ಞಾನವು ಮೂಡಲಾರದು. ಆದ್ದರಿಂದ ಮುಮುಕ್ಷುಗಳು ಶಮದಮಾದಿಗಳನ್ನು ಪ್ರಯತ್ನಪೂರ್ವಕವಾಗಿ ಸಂಪಾದಿಸಿಕೊಂಡು ತಮ್ಮೊಳಗೇ ಪರಮಾತ್ಮನನ್ನು ಕಂಡುಕೊಳ್ಳಬೇಕು.

**೧೨೪.** ಯಾವನು ಕರ್ಮವನ್ನು ಪರಮೇಶ್ವರನ ಆರಾಧನೆ - ಎಂಬ ಬುದ್ಧಿಯಿಂದ ಮಾಡಿ ಅಂತಃಕರಣಶುದ್ಧಿಯನ್ನು ಹೊಂದಿರುವನೋ ಯಾವನು ಶಮ ದಮಾದಿಗಳ ಸಾಧನೆಯಿಂದ ಹೊರಗಿನ ಕರಣಗಳನ್ನೂ ಅಂತಃಕರಣವನ್ನೂ ಹಿಡಿತ ದಲ್ಲಿಟ್ಟುಕೊಂಡಿರುವನೋ ಯಾವನಿಗೆ ಇಹಲೋಕಪರಲೋಕಭೋಗಗಳ ಅಭಿಲಾಷೆ ಗಿಂತಲೂ ಪರಮಾರ್ಥತತ್ತ್ವವನ್ನೇ ಅರಿತುಕೊಂಡು ಕೃತಾರ್ಥನಾಗಬೇಕೆಂಬ ಹಂಬಲು ಹೆಚ್ಚಿರುವದೋ ಅವನೇ ಅಧ್ಯಾತ್ಮವಿಚಾರಕ್ಕೆ ನಿಜವಾದ ಅಧಿಕಾರಿ. ಅವನೇ ಸದ್ಗುರು ವನ್ನು ಸೇರಿ ತತ್ತ್ವವಿಷಯಕವಾದ ಶ್ರವಣವನ್ನು ಮಾಡಿ ಮನನಮಾಡುವದರಿಂದ ಕೃತಾರ್ಥನಾಗುವನು. ಅವನಿಗೆ ಆಗುವ **ಸತ್ಫಲವು** ವೇದಾಂತದ ಒಣಮಾತುಗಳನ್ನಾಡುತ್ತಾ ಕಾಲಕ್ಷೇಪವನ್ನು ಮಾಡುತ್ತಿರುವವರಿಗೆ ಎಂದಿಗೂ ದಕ್ಕಲಾದರು.

**೧೨೫.** ಮನುಷ್ಯನಿಗೆ **ಸಾವಿನ ಅಂಜಿಕೆ**ಯು ಅನಂತಕಾಲದಿಂದಲೂ ಇದ್ದು ಕೊಂಡಿರುತ್ತದೆ. ಆದರೆ ಅವನಲ್ಲಿ (ಅಮೃತಸ್ವರೂಪವಾದ, ಎಂದಿಗೂ ವಿನಾಶವನ್ನು ಕಾಣದ) ಆನಂದಸ್ವರೂಪವೊಂದು ಇರುತ್ತದೆ. ಆ ಸ್ವರೂಪವನ್ನು ಕುರಿತೇ ಶ್ರವಣ ಮನನನಿಧಿದ್ಯಾಸಗಳನ್ನು ಮಾಡಬೇಕು. ಅದರಿಂದ ಮೃತ್ಯುವಿನ ಅಂಜಿಕೆಯು ದೂರವಾಗುವದು.

**೧೨೬.** ಇಂದ್ರಿಯಗಳ ಹೊರಅರಿವೇ ಆತ್ಮವಿಷಯದ ಅಜ್ಞಾನವು. ಇಂದ್ರಿಯ ವ್ಯವಹಾರವೇ ಮರ್ತ್ಯತ್ವದ ಬಾಗಿಲು. ಇಂದ್ರಿಯಗಳನ್ನು ಕೇವಲ ವಿಷಯಾಸಕ್ತಿಯಿಂದ ಲಾಲಿಸಿ ಮುದ್ದುಮಾಡುತ್ತಿರುವದೇ ಸಂಸಾರದ ಬಂಧವು. ನಮ್ಮೆಲ್ಲರ ಒಳಗೆ ಸರ್ವರಿಗೂ ಆತ್ಮನಾಗಿರುವ ಸಚ್ಚಿದಾನಂದಪರಮಾತ್ಮನನ್ನು ಕಂಡುಕೊಳ್ಳುವ ಅರಿವೇ ಜ್ಞಾನವು. ಅದಕ್ಕಾಗಿ ಮಾಡುವ **ಮಾನಸಪ್ರಯತ್ನವೇ** ಅಮೃತತ್ವದ ಹಾದಿ. ಮನಸ್ಸನ್ನು ಪರಮಾತ್ಮ ವಿಷಯಕವಾದ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಭಾವನೆಮಾಡಿಕೊಂಡಿದ್ದೇ ಆತ್ಯಂತಿಕ ಮುಕ್ತಿಯು- ಎಂದು ಬಲ್ಲವರು ಹೇಳುವರು.

**೧೨೭.** ಪರಮಾತ್ಮನು ನಮ್ಮ ಆತ್ಮನೇ ಆದರೂ ನಮ್ಮ ಅಜ್ಞಾನದಿಂದ ನಮ್ಮ ಒಳಗೆ ಹುಡುಕುವದಕ್ಕೆ ಬದಲು ಹೊರಕ್ಕೇ ನೋಡಿ ತಡಕಾಡುತ್ತಿರುವೆವು. ವಸ್ತುಗಳ **ತಿರುಳೇ** ಅವುಗಳ ಆತ್ಮನಾಗಿರುವದರಿಂದ ಅದನ್ನು ಒಳಗೇ ಹುಡುಕಬೇಕಾಗಿದ್ದರೂ ಮೇಲೆ ಮೇಲಿಯೇ ಅದು ಸಿಕ್ಕಬೇಕೆಂದು ಭಾವಿಸಿರುವೆವು. ಈ ಅಜ್ಞಾನದ ಮಬ್ಬುಗಣ್ಣನ್ನು ತೆಗೆದುಹಾಕಿ ಪ್ರತ್ಯಗ್‌ದೃಷ್ಟಿಯನ್ನು ಅನುಗ್ರಹಿಸುವದಕ್ಕೆ ತತ್ತ್ವವನ್ನು ಬಲ್ಲ ಸದ್ಗುರುವಿನ ಉಪದೇಶವು ಅವಶ್ಯವಾಗಿರುತ್ತದೆ.

**೧೨೮.** ನೀವು ಎಷ್ಟೇ ಕೆಳಮಟ್ಟದಲ್ಲಿರುವ ಸಂಸಾರಿಗಳಾಗಿ ತೋರುತ್ತಿರಲಿ, ನಿಮ್ಮ ನಿಜವಾದ ಸ್ವರೂಪವು ಜನ್ಮಜರಾಮರಣಗಳಿಂದ ದೂರವಾಗಿರುವ ಬ್ರಹ್ಮವೇ ಆಗಿರು

ವದು. ಆದ್ದರಿಂದ ನಿಮ್ಮ ಈಗಿನ ಕೀಳುಸ್ಥಿತಿಯನ್ನು ಮನದಂದುಕೊಂಡು ಮರುಗದಿರಿ. ನಮ್ಮೆಲ್ಲರಿಗೂ ಆತ್ಮನಾಗಿರುವ ಅಜರಾಮರನಾದ ಪರಮಾತ್ಮನ ಸ್ಮರಣೆಯನ್ನೇ ಮಾಡುತ್ತಿರಿ. **ಪರಮಾತ್ಮಜ್ಞಾನ**ದಿಂದ ಸಂಸಾರದ ಭಯವೆಲ್ಲವೂ ಅತ್ಯಂತವಾಗಿ ತೊಲಗಿ ಹೋಗುವದು.

**೧೨೯.** ಇರುವದೆಲ್ಲ ಒಂದೇ ತತ್ತ್ವವು. ಇಂದ್ರಿಯಗೋಚರವಾಗಿರುವದು, ಮನಸ್ಸಿಗೆ ತೋರಿಬರುವದು ಇದೆಲ್ಲವೂ ಅದೇ ತತ್ತ್ವವು. ನಮ್ಮ ಹೊರಗೆ, ನಮ್ಮ ಒಳಗೆ ಏನೇನು ಕಾಣುತ್ತಿರುವದೋ ಅದೆಲ್ಲವೂ ಆ ಪರಮಾರ್ಥತತ್ತ್ವವೇ. ಆ ತತ್ತ್ವವೇ ನಮ್ಮಗಳೆಲ್ಲರ ಆತ್ಮನಾಗಿರುವದು. ಅಜ್ಞರು ಅದನ್ನು ಪ್ರಪಂಚವೆಂದು ಭಾವಿಸಿ ಸಂಸಾರದಲ್ಲಿ ತೊಳಲುತ್ತಾರೆ. ಜ್ಞಾನಿಗಳು ಅದೆಲ್ಲವೂ ಪರಮಾತ್ಮನೇ ಎಂಬುದನ್ನು ಕಂಡುಕೊಂಡು **ನಲಿದಾಡು**ತ್ತಿರುತ್ತಾರೆ.

**೧೩೦.** ಇಂದ್ರಿಯಗಳಿಂದಲಾಗಲಿ, ಮನಸ್ಸಿನಿಂದಲಾಗಲಿ, ನಮ್ಮ ಆತ್ಮನ ಪರಮಾರ್ಥಸ್ವರೂಪವನ್ನು ಕಂಡುಕೊಳ್ಳುವದಕ್ಕೆ ಆಗುವದಿಲ್ಲ. ಸಾಧನಗಳಿಂದ ಮನಸ್ಸಿಗೆ ಸರಿಯಾದ ಸಂಸ್ಕಾರವನ್ನು ಮಾಡಿಕೊಂಡು ತತ್ತ್ವದಲ್ಲಿಯೇ ನೆಲೆನಿಂತಿರುವವರ ಉಪದೇಶ ಕ್ರಮವನ್ನು **ಅನುಸರಿಸಿ** ನಮ್ಮೊಳಗೆ ನಾವು ನೋಡಿಕೊಳ್ಳುವದರಿಂದ ಆತ್ಮಾನುಭವ ವುಂಟಾಗುವದು.

**೧೩೧.** ನಿಮ್ಮ ಮನಸ್ಸಿನಲ್ಲಿ ಬಗೆಬಗೆಯ ಅಲೆಗಳು ಎದ್ದುಕೊಳ್ಳುತ್ತಿರುವವು. ಅವುಗಳಿಗೆ ವೃತ್ತಿಗಳೆಂದು ಹೆಸರು. ಸಮುದ್ರದ ಒಂದೊಂದು ಅಲೆಯಲ್ಲಿಯೂ ಒಬ್ಬೊಬ್ಬ ಚಂದ್ರನಿರುವಂತೆ ತೋರುತ್ತಿರುವ ಬೆಳದಿಂಗಳಿನಲ್ಲಿ ನಿಜವಾಗಿ ಆಕಾಶದಲ್ಲಿ ಹೊಳೆಯುತ್ತಿರುವ ಒಬ್ಬ ಚಂದ್ರನೇ ಇದ್ದುಕೊಂಡಿರುತ್ತಾನೆ. ಇದರಂತೆ ನಿಮ್ಮ ಅರಿವು, ಮರೆವು, ನೆನಹು, ವಿಚಾರ, ಸಂಶಯ, ಭ್ರಾಂತಿ, ತತ್ತ್ವಜ್ಞಾನ-ಮುಂತಾದ ಈ ಎಲ್ಲಾ ವೃತ್ತಿಗಳಲ್ಲಿಯೂ ಒಬ್ಬ ಚಂದ್ರನ ಪ್ರತಿಬಿಂಬಗಳೇ ಥಳಗುಟ್ಟುತ್ತಿವೆ. ಆತ್ಮನೇ ನಿಮ್ಮ **ಚಿತ್ತಾಕಾಶ**ದ ಆಚೆ ಇರುವ ಆತ್ಮಚಂದ್ರನು.

**೧೩೨.** ಯಾರು ಸರ್ವಕರ್ಮಾತೀತವಾದ, ನಿರ್ವಿಕಾರವಾದ ಪರಮಾತ್ಮ ತತ್ತ್ವವನ್ನು ಕಂಡುಕೊಂಡು ಅದರಲ್ಲಿಯೇ ನಿಷ್ಠರಾಗಿರುವರೋ ಅವರು **ಸ್ಥಿತಪ್ರಜ್ಞ**ರೆನಿಸುವರು. ಅವರೇ ಬ್ರಹ್ಮನಿಷ್ಠರು. ಆದರೆ ಯಾರು ಆ ತತ್ತ್ವಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿಲ್ಲವೋ ಅಂಥವರು ಸಂಗಫಲತ್ಯಾಗಪೂರ್ವಕವಾಗಿ ಸ್ವಕರ್ಮವನ್ನು ಮಾಡುವ ಕರ್ಮಯೋಗವನ್ನು ಮಾಡಿ ಆ ಬಳಿಕ ಧ್ಯಾನದಿಂದ ಅದೇ ತತ್ತ್ವವನ್ನು ಕಂಡುಕೊಳ್ಳುವರು.

**೧೩೩.** ಅಧ್ಯಾತ್ಮಜ್ಞಾನವನ್ನು ಯೋಗವೆಂದೂ ಕರೆಯುತ್ತಾರೆ. ಏಕೆಂದರೆ ಆ ಜ್ಞಾನದಿಂದ ಸಾಧಕರು ಪರಮಾತ್ಮನ ಯೋಗವನ್ನೂ ಸಾಯುಜ್ಯವನ್ನೂ ಪಡೆದುಕೊಳ್ಳುತ್ತಾರೆ.

ಈ ಜ್ಞಾನಕ್ಕೆ ಸಾಧನವಾದ ಕರ್ಮಯೋಗ, ಭಕ್ತಿಯೋಗ, ಧ್ಯಾನ ಯೋಗ- ಇವುಗಳನ್ನೂ ಯೋಗವೆಂದೇ ಕರೆಯುತ್ತಾರೆ. ಭಗವದ್ಗೀತೆಯು ಯೋಗಶಾಸ್ತ್ರವು - ಎಂದರೆ ಪರಮಾತ್ಮನಲ್ಲಿ ಒಂದಾಗುವದಕ್ಕೆ ಅನುಸರಿಸಬೇಕಾದ ಉಪಾಯಗಳನ್ನೆಲ್ಲ ತಿಳಿಸಿಕೊಡುವ ಶಾಸ್ತ್ರವು. ಯೋಗಗಳಿಗೆಲ್ಲ ಒಂದು ಸಮಾನಧರ್ಮವಿದೆ. **ಸಂಕಲ್ಪ ತ್ಯಾಗ**ವಿಲ್ಲದೆ ಯಾವ ಯೋಗವೂ ಅಳವಡುವದಿಲ್ಲ.

**೧೩೪.** ಪರಮಾತ್ಮನನ್ನು ಕಂಡುಕೊಳ್ಳುವದಕ್ಕೆ ಮುಖ್ಯವಾಗಿ ಎರಡು ಉಪಾಯಗಳಿವೆ. ನೇರಾಗಿ ನಮ್ಮ ಆತ್ಮನನ್ನೇ ನೋಡಿಕೊಳ್ಳುವದೊಂದು, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ- ಇವುಗಳಲ್ಲಿ ಒಂದರಲ್ಲೊಂದನ್ನು ಕರಗಿಸಿಕೊಂಡು ಕೊನೆಗೆ ಅದೇ ಆತ್ಮನನ್ನು ಕಂಡುಕೊಳ್ಳುವದು ಮತ್ತೊಂದು. ಈ ಎರಡು ಮಾರ್ಗಗಳಲ್ಲಿ ಒಂದು ಅಳವಡುವದಕ್ಕಿಂತ ಮೊದಲು ಸರ್ವತ್ರ ಭಗವದ್ಭಾವನೆ ಮಾಡುವದನ್ನು ಕಲಿಯಬೇಕು. ಜಗತ್ತಿನಲ್ಲಿ ಯಾವಯಾವ ದೃಶ್ಯಗಳು ಎಲ್ಲರ ಮೆಚ್ಚುಗೆಗೆ ಕಾರಣವಾಗಿರುವವೋ ಅವೆಲ್ಲವೂ ಭಗವಂತನ ತೇಜಸ್ಸಿನ ಅಂಶವೆಂದು ಭಾವಿಸುವದು ಅದಕ್ಕೂ ಮೊದಲನೆಯ ಸಾಧನ. ಅದನ್ನು **ವಿಭೂತಿಯೋಗ**ವೆಂದು ಕರೆಯುತ್ತಾರೆ.

**೧೩೫.** ಪರಮಾತ್ಮನ ಮಾಯೆಯೇ ಈ ನಾಮರೂಪಗಳ ಜಗತ್ತಿನ ರೂಪದಲ್ಲಿ ಕಾಣುತ್ತಿರುವದು. ಮಾಯೆಯನ್ನು ಮಾಯೆಯಾಗಿ ಕಾಣುವವರೆಗೂ ನಮಗೆ ರಾಗ ದ್ವೇಷಮೋಹಗಳ ಕಾಟವು ತಪ್ಪುವದಿಲ್ಲ. ಆದರೆ ಪರಮಾತ್ಮನಿಗಿಂತ ಬೇರೆಯಾದ ಯಾವ ಮಾಯೆಯೂ ಇಲ್ಲ- ಎಂಬ ತತ್ತ್ವವನ್ನು ಮನಗಂಡಕೂಡಲೆ ಮಾಯೆಯೇ **ಮಾಯ**ವಾಗುವದು. **ಜಗತ್ತೆ**ಲ್ಲವೂ ಪರಮಾತ್ಮನೇ-ಎಂಬ ಹೆಚ್ಚಿನ ಪರಮಾರ್ಥವು ನಮ್ಮ ಮನಸ್ಸಿನಲ್ಲಿ ಹೊಳೆದುಬಿಡುವದು.

**೧೩೬.** ಪರಮಾತ್ಮನನ್ನು ಕಾಣುವದು ಕಷ್ಟಸಾಧ್ಯವೆಂದು ನಮ್ಮಗಳಿಗೆ ತೋರಿದರೂ ಜ್ಞಾನಿಗಳ ದೃಷ್ಟಿಯಿಂದ ಅದು ಬಹಳ ಸುಲಭವಾಗಿರುತ್ತದೆ. ಏಕೆಂದರೆ ಪರಮಾತ್ಮನು ನಮ್ಮಗಳೆಲ್ಲರ ತೀರ ಒಳಗಿನ ಸ್ವರೂಪವೇ ಆಗಿರುತ್ತಾನೆ. ಆತನನ್ನು ಇಂದ್ರಿಯಗಳಿಂದ ಕಾಣುವದಕ್ಕೆ ಆಗಲಾರದು; ಮನಸ್ಸಿನಿಂದ ತರ್ಕಿಸುವದಕ್ಕೂ ಆಗಲಾರದು. ಆದರೆ ಇಂದ್ರಿಯಗಳನ್ನೂ ಮನಸ್ಸನ್ನೂ ಆಚೆಗೆ ಬಿಟ್ಟು ನಮ್ಮೊಳಗೇ ನಾವು ನಿಂತರೆ ಕೂಡಲೆ ಪರಮಾತ್ಮನಿಷ್ಠೆಯು ದೊರಕಿಬಿಡುತ್ತದೆ. ಈ ಜಗತ್ತಿನ ಹುಟ್ಟು, ಇರವು, ಹೊಂದು- ಎಲ್ಲವೂ ಆತನನ್ನೇ **ಅವಲಂಬಿಸಿ**ಕೊಂಡು ಇರುವದೆಂದೂ ಸರಿಯಾಗಿ ನೋಡಿದರೆ ಇದೆಲ್ಲದರ ಪರಮಾರ್ಥವು ಆತನೇ ಎಂದೂ ನಮಗೆ ಆಗ ಅನುಭವಕ್ಕೆ ಬಂದುಬಿಡುವದು.

**೧೩೭.** ವಿವೇಕಿಯಾದ ಮನುಷ್ಯನಿಗೆ ಫಲದಲ್ಲಿ ಗುರಿಯಿರುತ್ತದೆ. ಅದಕ್ಕೆ ಬೇಕಾಗುವ ಸಾಧನಕ್ಕೆ ಆ ಫಲವನ್ನು ತಂದುಕೊಡುವಮಟ್ಟಿಗೇ ಬೆಲೆಯನ್ನು ಅವನು

ಕಟ್ಟುತ್ತಾನೆ. ಅಟ್ಟಕ್ಕೆ ಹತ್ತಿ ತನಗೆ ಬೇಕಾದ ಸಾಮಾನುಗಳನ್ನು ತಂದುಕೊಳ್ಳುವವನು ಏಣಿಯನ್ನೇ ಉಪಯೋಗಿಸಬೇಕೆಂಬುದಿಲ್ಲ; ಮೇಲಕ್ಕೆ ಏರುವದಕ್ಕೆ ತಕ್ಕ ಯಾವ ಸಾಧನವಾದರೂ ಆಗುತ್ತದೆ. ಇದರಂತೆ ನಮ್ಮ ಜೀವನಕ್ಕೆ ಭಗವಂತನ ಪ್ರಾಪ್ತಿಯೇ ಫಲ. ಅದನ್ನು ಕರ್ಮ, ಯೋಗ, ಭಕ್ತಿ, ಜ್ಞಾನ - ಯಾವ **ಉಪಾಯ**ದಿಂದಲಾದರೂ ಸಂಪಾದಿಸಿಕೊಳ್ಳಬೇಕು. ಭಗವಂತನು ಎಲ್ಲೆಲ್ಲಿಯೂ ಇರುತ್ತಾನೆ. ನಮ್ಮೆಲ್ಲರ ಆತ್ಮನಾಗಿಯೂ ಇರುತ್ತಾನೆ. ಇದನ್ನು ತಿಳಿಸಿಕೊಡುವ ಯಾವ ಮಾರ್ಗವನ್ನಾದರೂ ಸಾಧಕನು ಅನುಸರಿಸಬಹುದು. ಆದರೆ ನಾವು ಮಾರ್ಗಕ್ಕಿಂತಲೂ ಭಗವತ್ಪ್ರಾಪ್ತಿಗೇ ಹೆಚ್ಚಿನ ಬೆಲೆಯನ್ನು ಕಟ್ಟಿರಬೇಕು.

**೧೩೮.** ಸಕಲಶಾಸ್ತ್ರಗಳ ಉಪದೇಶವೇನು? ಸರ್ವಮತಗಳ ಸಾರವು ಯಾವದು? ಸಾಧುಗಳೆಲ್ಲರೂ ನಮಗೆ ಉಪದೇಶಿಸುತ್ತಿರುವ ಜೀವನಸೂತ್ರವು ಯಾವದು? ಇಡಿಯ ವಿಶ್ವಕ್ಕೆಲ್ಲ ಆಧಾರವಾಗಿ ಒಂದು ಮಹಾತತ್ತ್ವವಿದೆ. ಸಕಲಜೀವರಿಗೂ ಜೀವನವನ್ನು ಅತ್ಯುನ್ನತದ ಮಟ್ಟಕ್ಕೇರಿಸಬಲ್ಲ ಒಂದಾನೊಂದು **ಜೀವನಕೇಂದ್ರ**ವಿದೆ. ಮನುಷ್ಯನ ಜನ್ಮವು ಸಾರ್ಥಕವಾಗಬೇಕಾದರೆ ಅದನ್ನೇ ಲಕ್ಷ್ಯದಲ್ಲಿಟ್ಟುಕೊಂಡಿರಬೇಕು, ಮಾನವವರ್ಗವೆಲ್ಲ, ಪ್ರಾಣಿವರ್ಗವೆಲ್ಲ, ಹೆಚ್ಚೇಕೆ? ಇಡಿಯ ವಿಶ್ವವೇ ಅದರಲ್ಲಿ ಒಂದಾಗಿದೆ- ಎಂಬ ಘನತತ್ತ್ವವನ್ನು ಅನುಸಂಧಾನಮಾಡುತ್ತಿರಬೇಕು.

**೧೩೯.** ಉಪನಿಷತ್ತು- ಎಂದರೆ ಗ್ರಂಥಮಾತ್ರವಲ್ಲ. ಅದರಲ್ಲಿ ಅಡಗಿರುವ ಬ್ರಹ್ಮವಿದ್ಯೆಯನ್ನೇ ಮುಖ್ಯಾರ್ಥದಲ್ಲಿ ಉಪನಿಷತ್ತು ಎಂದು ಕರೆಯುವರು. ನಮ್ಮ ಅಜ್ಞಾನಾದಿಗಳನ್ನು ನಾಶಮಾಡಿ ನಿಶ್ಚಿತವಾದ ತಿಳಿವಳಿಕೆಯನ್ನು ಕೊಟ್ಟು ನಮ್ಮೆಲ್ಲರಿಗೂ ಆತ್ಮನಾದ ಬ್ರಹ್ಮವನ್ನು ಮುಟ್ಟಿಸುವದರಿಂದ ಬ್ರಹ್ಮವಿದ್ಯೆಗೆ **ಉಪನಿಷತ್ತು**- ಎಂಬ ಹೆಸರು ಬಂದಿರುತ್ತದೆ. ಬ್ರಹ್ಮವಿದ್ಯೆಯನ್ನು ತಿಳಿಸುವ ಉಪನಿಷತ್ತುಗಳ ಅಭಿಪ್ರಾಯವನ್ನು ನೇರಾಗಿ ಅಥವಾ ಬಲ್ಲವರ ಉಪದೇಶದಿಂದ ಎಲ್ಲರೂ ಅವಶ್ಯವಾಗಿ ತಿಳಿದುಕೊಂಡು ಕೃತಾರ್ಥರಾಗಬೇಕು.

**೧೪೦.** ಕರ್ಮಾನುಷ್ಠಾನಕ್ಕೆ ಶ್ರದ್ಧಾಶಕ್ತಿಗಳೂ ಮನಃಶುದ್ಧಿಯೂ ಅತ್ಯವಶ್ಯ. ಈಗ ಇಂಥ ಕರ್ಮವನ್ನು ಮಾಡುತ್ತಿದೇನೆ, ಇದರಿಂದ ಭಗವಂತನು ತುಷ್ಟನಾಗಲಿ- ಎಂಬ **ಬುದ್ಧಿ**ಯಿಂದ ಮಾಡಿದ ಕರ್ಮವು ಅಲ್ಪವಾಗಿದ್ದರೂ ವೀರ್ಯವತ್ತರವಾಗುವದು. ಶ್ರದ್ಧಾರಹಿತವಾದ, ಹೆಸರಿಗೆ ಮಾತ್ರ ಕರ್ಮವಾಗಿರುವ ಯಜ್ಞಾದಿಗಳು ಕೂಡ ನಿಷ್ಫಲವಾಗುವವು.

**೧೪೧.** ಸತ್ಯವನ್ನು ನುಡಿಯುವದು, ಧರ್ಮವನ್ನು ಆಚರಿಸುವದು- ಇವೆರಡೂ ಪರಮಾತ್ಮಜ್ಞಾನಕ್ಕೆ ಉತ್ತಮಸಾಧನಗಳು. ತಂದೆತಾಯಿಗಳನ್ನೂ ಗುರುವನ್ನೂ **ದೇವರಂತೆ** ಕಾಣುವದು, ಅತಿಥಿಗಳನ್ನು **ದೇವರಂತೆ** ಕಾಣುವದು- ಇವುಗಳೂ ಧರ್ಮದ ರೂಪಗಳೇ.

ಇಂಥ ಸದಾಚಾರಗಳಿಂದ ಚಿತ್ತಶುದ್ಧಿಯಾಗುವದು, ಜ್ಞಾನವನ್ನು ಸಂಪಾದಿಸಿಕೊಳ್ಳುವ ಯೋಗ್ಯತೆಯುಂಟಾಗುವದು- ಎಂದು ಶ್ರುತಿಸ್ಮೃತಿಗಳು ಸಾರುತ್ತಿವೆ.

**೧೪೨.** ಮನುಷ್ಯಶರೀರವೇ ತನ್ನ ಆತ್ಮನೆಂದು ನೆಚ್ಚಿಕೊಂಡು ಕುಳಿತಿದ್ದರೆ ಒಂದಲ್ಲ ಒಂದು ದಿನ ಈ ಲೋಕದ ಸುಖವನ್ನೇ ಬಿಟ್ಟು ತೆರಳಬೇಕಾಗುವದು. ಶಾಸ್ತ್ರೀಯ ಕರ್ಮಗಳಿಂದ ಪಡೆಯುವ ಸ್ವರ್ಗಾದಿಗಳು ಅದಕ್ಕಿಂತ ಹೆಚ್ಚಿನವುಗಳೇ ಸರಿ. ಆದರೆ ಮನಸ್ಸನ್ನು **ತಿಳಿಮಾಡಿಕೊಂಡು** ಪರಮಾತ್ಮನಲ್ಲಿಯೇ ನಿಲ್ಲಿಸಿಕೊಳ್ಳುವ ಉಪಾಸನೆಯಿಂದಾಗುವ ಆನಂದಕ್ಕೆ ಹೋಲಿಸಿದರೆ ಮಿಕ್ಕದ್ದೆಲ್ಲವೂ ಸಪ್ಪೆಯೇ. ಮಾನವಜನ್ಮವನ್ನು ಪಡೆದುಕೊಂಡದ್ದಕ್ಕೆ ಭಗವಂತನ ಧ್ಯಾನವನ್ನು ಮಾಡಿ ಹೆಚ್ಚಿನ ಆನಂದವನ್ನು ಸಂಪಾದಿಸಿಕೊಂಡು ನಲಿಯುವದೇ ಸಾರ್ಥಕ್ಯ.

**೧೪೩.** ಶಾಸ್ತ್ರೋಕ್ತವಾದ ಕರ್ಮೋಪಾಸನೆಗಳನ್ನು ಮಾಡುವದರಿಂದ ಬ್ರಹ್ಮಲೋಕಾಂತವಾದ ಫಲವು ದೊರಕುತ್ತದೆ. ಇದು ಶ್ರದ್ಧೆಯಿಂದ ನಂಬಬೇಕಾದ ವಿಷಯ. ಆದರೆ ಇದೇ ಕರ್ಮೋಪಾಸನೆಗಳನ್ನು **ಸಂಗತ್ಯಾಗಫಲತ್ಯಾಗ**ಪೂರ್ವಕವಾಗಿ ಅನುಷ್ಠಾನ ಮಾಡುವವರಿಗೆ ಇಲ್ಲಿಯೇ ಚಿತ್ತಶುದ್ಧಿಯೂ ಜ್ಞಾನಪ್ರಾಪ್ತಿಗೆ ಯೋಗ್ಯತೆಯೂ ದೊರೆಯುತ್ತವೆ. ಇದು ಅನುಭವಗಮ್ಯವಾದದ್ದು. ಯಾರುಬೇಕಾದರೂ ಮಾಡಿನೋಡಬಹುದಾಗಿದೆ.

**೧೪೪.** ಶಾಸ್ತ್ರದಲ್ಲಿ ಹೇಳಿರುವ ಜ್ಞಾನವಾಗಲಿ, ಉಪಾಸನೆಯಾಗಲಿ ಎಲ್ಲರಿಗೂ ದಕ್ಕುವದೆಂದು ಹೇಳುವದಕ್ಕೆ ಬರುವದಿಲ್ಲ. ಆದರೆ ಭಗವಂತನ ಗುಣಕರ್ಮ ಲೀಲೆಗಳನ್ನು ಪುರಾಣಾದಿಗಳಲ್ಲಿ ವರ್ಣಿಸಿರುವದನ್ನು ಕೇಳಿರುವವರೂ ಅವನ್ನು **ನೆನಪಿನಲ್ಲಿಟ್ಟು**ಕೊಂಡವರೂ ಭಗವಂತನ ಕರುಣೆಗೆ ಪಾತ್ರರಾಗುವರು. ತ್ರಿಣಾಚಿಕೇತಾಗ್ನಿಯೇ ಮುಂತಾದವನ್ನು ಉಪಾಸನೆಮಾಡಿರುವವರು ಪಂಕ್ತಿಪಾವನರಾಗುವರೆಂದು ಶಾಸ್ತ್ರದಲ್ಲಿ ಹೇಳಿದೆ. ಭಗವಂತನನ್ನು ಭಕ್ತಿಯಿಂದ ಅವಲಂಬಿಸಿ ಅವನ ನಾಮವನ್ನು ಎಡೆಬಿಡದೆ ಚಿಂತಿಸುವವರು ಪಂಕ್ತಿಪಾವನಪಾವನರೂ ಆಗುವದಕ್ಕೆ ಶಕ್ಯವಿದೆ- ಎಂದು ಬಲ್ಲವರು ಹೇಳುತ್ತಾರೆ.

**೧೪೫.** ಕರ್ಮಗಳಿಂದ ನಮಗೆ ಆಯಾ ಫಲಗಳು ಸಿಕ್ಕುವವು; ಉಪಾಸನೆಗಳಿಂದ ಬ್ರಹ್ಮಲೋಕಾಂತವಾದ ಫಲವೂ ದೊರೆಯುವದು. ಆದರೆ ಇವನ್ನು ಫಲಾಸಕ್ತಿಯಿಲ್ಲದೆ ಈಶ್ವರಾರಾಧನೆಯಾಗಿ ಮಾಡುವ ಮುಮುಕ್ಷುಗಳಿಗೆ ಪರಮಾತ್ಮ ಜ್ಞಾನವು ದೊರಕುವದು. ಜ್ಞಾನದಿಂದ ದೊರಕುವ ಪರಮಪುರುಷಾರ್ಥಕ್ಕೆ ಹೋಲಿಸಿದರೆ ಮಿಕ್ಕ ಐಹಿಕಾಮುಷ್ಮಿಕ ಫಲಗಳು **ನಿಸ್ಸಾರ**ವಾಗಿರುವವು- ಎಂದು ಜ್ಞಾನಿಗಳು ಹೇಳುತ್ತಾರೆ.

೧೪೬. ಯಾರಿಗೆ ಈ ಲೋಕದಲ್ಲಿ ತಮಗೆ ದೀರ್ಘಾಯುಸ್ಸು, ಹೆಚ್ಚಿನ ಧನ, ವಿದ್ಯೆ, ಅಧಿಕಾರ, ಕೀರ್ತಿ- ಮುಂತಾದವುಗಳು ಲಭಿಸಬೇಕೆಂಬ ಆಶೆಯು ಬಲವಾಗಿರುವದೋ ಯಾರಿಗೆ ಪರಲೋಕದಲ್ಲಿ ತಮಗೆ ದಿವ್ಯಭೋಗಗಳು ದೊರಕಬೇಕೆಂಬ ಹಿಡಿಯದಾಶೆಯು ಬಲವಾಗಿರುವದೋ ಅವರಿಗೆ ಅಧ್ಯಾತ್ಮವಿದ್ಯೆಯು ಬಲು **ದೂರ**ವಾಗಿರುತ್ತದೆ. ನಮಗೆ ಜರಾಮರಣರಹಿತವಾಗಿರುವ ಪರಮಾತ್ಮನ ಅರಿವೇ ಬೇಕೆಂಬ ಹಂಬಲು ಯಾರಿಗೆ ಇರುವದೋ ಅವರೇ ಅಧ್ಯಾತ್ಮವಿದ್ಯೆಗೆ ಅಧಿಕಾರಿಗಳು.

೧೪೭. ಜನರು ಮಾಡುವದಕ್ಕೆ ತೊಡಗುವ ಕರ್ಮಗಳು ಎರಡು ಬಗೆ. ಮೊದಲನೆಯ ಬಗೆಯ ಕರ್ಮವನ್ನು ಮಾಡಿದರೆ ಕರ್ತೃವಿಗೆ ಪ್ರಿಯವಾದ ಫಲವು ದೊರಕುತ್ತದೆ. ಎರಡನೆಯ ಬಗೆಯದನ್ನು ಮಾಡಿದರೆ ಅವನಿಗೆ ನಿಜವಾಗಿ ಹಿತವಾದ ಫಲವು ದೊರಕುತ್ತದೆ. ಪ್ರಿಯವಾದ ಫಲವನ್ನು ಕೊಡುವ ಕರ್ಮದಲ್ಲಿ ತೊಡಗುವವನು ಅಜ್ಞನು. ಹಿತವನ್ನುಂಟುಮಾಡುವ ಕರ್ಮದಲ್ಲಿ ತೊಡಗುವವನು **ಜಾಣನು.**

೧೪೮. ಪರಮಾತ್ಮಜ್ಞಾನವೆಂಬುದು ಹೊರಗಿನ ವಿಷಯಗಳ ಜ್ಞಾನದಂತೆ ಇಂದ್ರಿಯಾದಿಗಳಿಂದಲೂ ತರ್ಕದಿಂದಲೂ ಸಂಪಾದಿಸಿಕೊಳ್ಳುವ ತಿಳಿವಳಿಕೆಯಲ್ಲ. ಪರಮಾತ್ಮನು ನಮ್ಮೆಲ್ಲರ ಆತ್ಮನೇ ಎಂಬ ಅನನ್ಯಾನುಭವವೇ ಪರಮಾತ್ಮಜ್ಞಾನವು. ಈ ಅನುಭವವುಳ್ಳವರ ಉಪದೇಶದಿಂದಲೇ ನಮಗೆ **ಆತ್ಮಜ್ಞಾನ**ವಾಗಬೇಕಾಗಿರುತ್ತದೆ.

೧೪೯. ಧರ್ಮದಿಂದ ಉತ್ತಮಗತಿಯೂ ಸುಖವೂ ದೊರಕುತ್ತವೆ, ಅಧರ್ಮದಿಂದ ದುರ್ಗತಿಯೂ ದುಃಖವೂ ಉಂಟಾಗುತ್ತವೆ. ಧರ್ಮಾಧರ್ಮಫಲಗಳು ನಾವು ಮಾಡಿರಬಹುದಾದ ಧರ್ಮಾಧರ್ಮಗಳಿಗೆ ಅನುಗುಣವಾದಷ್ಟು ಕಾಲದವರೆಗೆ ಮಾತ್ರ ಇರುತ್ತವೆ. ಹೀಗೆ ಧರ್ಮಾಧರ್ಮಗಳ ಫಲಗಳು ಕಾರ್ಯಕಾರಣಭಾವಕ್ಕೆ ಹೊಂದುಗೆಯಾಗಿರುವದರಿಂದ ಇಂತಿಷ್ಟು ಕಾಲದವರೆಗೆ ಮಾತ್ರ ಇರುವವು - ಎಂಬ ನಿಯಮವಿದೆ. ಆದರೆ ತತ್ತ್ವಜ್ಞಾನದಿಂದುಟಾಗುವ ಪುರುಷಾರ್ಥವು ಕಾಲಕ್ಕಾಗಲಿ, ಕಾರ್ಯಕಾರಣಗಳಿಗಾಗಲಿ, ಕಟ್ಟುಬಿದ್ದಿರುವದಿಲ್ಲ. ಅದು ಧರ್ಮಾಧರ್ಮಗಳ ಫಲದ ಕ್ಷೇತ್ರವನ್ನೆಲ್ಲ ಮೀರಿರುವ ಸ್ವಭಾವದ **ನಿತ್ಯಾನಂದ**ರೂಪವಾಗಿರುತ್ತದೆ.

೧೫೦. ವೇದಸಾರವನ್ನು ಬಲ್ಲ **ಯತಿ**ಗಳು ಸರ್ವಸಾಧನಗಳಿಂದಲೂ ಪಡೆದುಕೊಳ್ಳಬೇಕಾಗಿರುವ ಬ್ರಹ್ಮವನ್ನು ಓಂಕಾರದ ಮೂಲಕವಾಗಿ ಉಪಾಸನೆಮಾಡುವರು, ಅಥವಾ ಅರಿತುಕೊಳ್ಳುವರು. ಆದರೆ ಪರಮಾತ್ಮನು ನಿಜವಾಗಿ ಅಭಿಧಾನಾಭಿಧೇಯಗಳನ್ನು ಮೀರಿರುವ ಸ್ವರೂಪದವನು.

೧೫೧. ಈ **ಕಲಿಯುಗ**ದಲ್ಲಿ ಭಗವನ್ನಾಮಸ್ಮರಣೆಯಷ್ಟು ಸುಲಭವಾದ ಅಧ್ಯಾತ್ಮಸಾಧನೆಯು ಮತ್ತೊಂದಿಲ್ಲ. ಭಗವನ್ನಾಮವು ಸಗುಣಸಾಕಾರಬ್ರಹ್ಮವನ್ನೂ ನಿರ್ಗುಣ

ನಿರಾಕಾರಬ್ರಹ್ಮವನ್ನೂ ಅಧಿಕಾರಿಗಳಿಗೆ ಮನಸ್ಸಿಗೆ ತಂದುಕೊಡಬಲ್ಲದು. ನಾಮವು ಭಗವಂತನ ಗುಣಕರ್ಮಾದಿಗಳನ್ನೂ ಪರಮಾರ್ಥಸ್ವರೂಪವನ್ನೂ ತಿಳಿಸುವ ಸಾಧನವೆಂಬುದಿಷ್ಟೇ ಅಲ್ಲ. ನಾಮವೇ ಭಗವಂತನ ಒಂದು ವಿಭೂತಿವಿಶೇಷವೆಂದರಿಯಬೇಕು.

**೧೫೨.** ನಮ್ಮ ಆತ್ಮನು ಶರೀರೇಂದ್ರಿಯಗಳ ಗುಂಪಿಗೆ ಕಟ್ಟುಬಿದ್ದವನಂತೆ ತೋರುತ್ತಿದ್ದರೂ ನಿಜವಾಗಿ ಇವನು ಜನನಮರಣಗಳಿಲ್ಲದ **ನಿರ್ವಿಕಾರ**ಸ್ವರೂಪನು. ಇವನು ಯಾವ ಕ್ರಿಯೆಗಾಗಲಿ ಕರ್ತೃವೆಂದು ಅಥವಾ ವಿಷಯನೆಂದು ಬಗೆಯುವದು ಅಜ್ಞಾನವೇ. ನಿಜವಾಗಿ ನೋಡಿದರೆ ಒಬ್ಬೊಬ್ಬರ ಹೃದಯದಲ್ಲಿಯೂ ಬೇರೆಬೇರೆ ಯಾಗಿರುವಂತೆ ತೋರುತ್ತಿರುವ ಈತನು ಎಲ್ಲರಿಗೂ ಒಬ್ಬನೇ ಆಗಿ ಸರ್ವವ್ಯಾಪಕ ನಾಗಿರುವ ಪರಿಶುದ್ಧಾತ್ಮನೇ- ಎಂಬುದು ಕಾಮಸಂಕಲ್ಪಗಳಿಗೆ ವಶರಾಗದವರಿಗೆ ತಿಳಿಯಬರುವದು. ಆತ್ಮನನ್ನು ಕಂಡುಕೊಂಡವರು ಸರ್ವಶೋಕರಹಿತರಾಗುವರು.

**೧೫೩.** ಭಗವಂತನು ಎಲ್ಲರಿಗೂ ಎಲ್ಲಕ್ಕೂ ಆತ್ಮನಾಗಿರುವದರಿಂದ ಅವನು ಒಂದೇಕಡೆಯಲ್ಲಿದ್ದು ಎಲ್ಲಾ ಕಡೆಯಲ್ಲಿರುವಂತೆಯೂ ಒಂದೇ ಕಾಲಕ್ಕೆ ಅನೇಕ ವಿರುದ್ಧ ಕ್ರಿಯೆಗಳನ್ನು ಮಾಡುವಂತೆಯೂ ಸಕಲಭಾವಗಳಿಗೂ ಆಶ್ರಯನಾಗಿರುವಂತೆಯೂ ತೋರಬಹುದು. ಆದರೆ ಆತನು ತನ್ನ ನಿಜಸ್ವರೂಪದಿಂದ ಯಾವನೊಬ್ಬ ಜೀವನ ಅಥವಾ ಯಾವದೊಂದು ವಸ್ತುವಿನ ಕ್ರಿಯೆಗಳ ಅಥವಾ ಗುಣದೋಷಗಳ **ಲೇಪವಿಲ್ಲದವನಾ**ಗಿಯೇ ಇರುತ್ತಾನೆ. ಆತನ ಆ ನಿತ್ಯಶುದ್ಧಬುದ್ಧಮುಕ್ತಸ್ವರೂಪವನ್ನು ಕಂಡುಕೊಂಡವರಿಗೆ ಸಂಸಾರದ ಶೋಕಮೋಹಗಳು ಇರುವದೇ ಇಲ್ಲ.

**೧೫೪.** ಜಗತ್ತೆಲ್ಲವನ್ನೂ ಲೀಲಾಮಾತ್ರದಿಂದ ಸೃಷ್ಟಿಸಿ ನಿರಾಯಾಸದಿಂದ ತನ್ನಲ್ಲಿ ಅಡಗಿಸಿಕೊಳ್ಳಬಲ್ಲ ಪರಮಾತ್ಮನು ನಮ್ಮೆಲ್ಲರ ಆತ್ಮನೇ ಆಗಿರುತ್ತಾನೆ. ಆತನನ್ನು ಅರಿತು ಕೊಂಡು ಅವನಲ್ಲಿ ನಿಷ್ಠೆಯನ್ನು ಪಡೆಯಬೇಕೆನ್ನುವವರು ಮೊದಲು ದುರಾಚಾರವನ್ನು ಬಿಡಬೇಕು. **ಶಮದಮಾದಿ**ಗಳನ್ನು ಸಂಪಾದಿಸಿಕೊಳ್ಳಬೇಕು. ಮನಸ್ಸನ್ನು ಆತನಲ್ಲಿಯೇ ನೆಲೆನಿಲ್ಲಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು.

**೧೫೫.** ನಮ್ಮ ಅಂತಃಕರಣದಲ್ಲಿ ತೋರುತ್ತಿರುವ ಆತ್ಮರೂಪವು ಎರಡು ಬಗೆಯಾಗಿರುವದು. ಅಂತಃಕರಣದ ಮತ್ತು ಇಂದ್ರಿಯವೃತ್ತಿಗಳ ಕಲೆಬೆರಕೆಯಿಂದ ನಾನು ಕರ್ತೃ; ಭೋಕ್ತೃ, ನೋಡುವವನು, ಕೇಳುವವನು, ಆಲೋಚಿಸುತ್ತಿರುವವನು- ಎಂದು ಮುಂತಾಗಿ ತೋರುತ್ತಿರುವ ಸಂಸಾರಿಸ್ವರೂಪವೊಂದು; ಅವುಗಳಿಂದ **ವಿಂಗಡ**ವಾಗಿಯೇ ಎಲ್ಲವನ್ನೂ ತನ್ನ ನಿತ್ಯಚೈತನ್ಯಸ್ವರೂಪವಾದ ಅರಿವಿನಿಂದ ಬೆಳಗುವ ಸಾಕ್ಷಿರೂಪವು ಇನ್ನೊಂದು. ಆ ಸಾಕ್ಷಿಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳುವದರಿಂದ ಪರಮಾತ್ಮನ ಸಾಕ್ಷಾತ್ಕಾರವಾಗುವದು, ಸಂಸಾರದ ಕೋಟಲೆಯೆಲ್ಲವೂ ಮಾಯವಾಗುವದು.

**೧೫೬.** ಮಾನವನ ಜೀವನವೆಂಬುದೊಂದು **ಪ್ರಯಾಣ**ವಿದ್ದಂತೆ. ಪ್ರಯಾಣಿಕನಾದವನು ತನ್ನ ಗಾಡಿ, ಗಾಡಿಯನ್ನು ನಡೆಯಿಸುವವನು, ಕುದುರೆಗಳು, ಕುದುರೆಗಳಿಗೆ ಕಟ್ಟಿರುವ ಕಡಿವಾಣ, ಎಲ್ಲವೂ ಸರಿಯಾಗಿರುವಂತೆ ನೋಡಿಕೊಂಡರೇ ಪಯಣವು ಸಲೀಸಾಗುವಂತೆ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ-ಇವೆಲ್ಲವನ್ನೂ ಹಿಡಿತದಲ್ಲಿಟ್ಟುಕೊಂಡಿದ್ದರೇ ಪರಮಪುರುಷಾರ್ಥದ ಪ್ರಾಪ್ತಿಯಾಗುವದು.

**೧೫೭.** ಸ್ಥೂಲವಾಗಿರುವ ವಿಷಯಗಳನ್ನು ಇಂದ್ರಿಯಗಳಿಂದ ಗ್ರಹಿಸುವದು ಎಲ್ಲರಿಗೂ ಸಾಧ್ಯ. ಆದರೆ ಪರಮಸೂಕ್ಷ್ಮವಾಗಿ ಎಲ್ಲಕ್ಕೂ ಸಾರವಾಗಿರುವ ಆತ್ಮ ವಸ್ತುವನ್ನು ತಿಳಿಯುವದಕ್ಕೆ ಹೆಚ್ಚಿನ ಸಂಸ್ಕಾರವು ಬೇಕಾಗುತ್ತದೆ. ಆದ್ದರಿಂದ ತತ್ತ್ವಜಿಜ್ಞಾಸುಗಳು ಸ್ಥೂಲವಾದ ಹೊರಗಿನ ತೋರಿಕೆಗಳನ್ನು ಅವುಗಳನ್ನು ವ್ಯಾಪಿಸಿಕೊಂಡಿರುವ ಸೂಕ್ಷ್ಮತತ್ತ್ವಗಳಲ್ಲಿ **ಲಯ**ಗೊಳಿಸುವದನ್ನು ಅಭ್ಯಾಸಮಾಡಬೇಕು. ಇಂದ್ರಿಯಗಳು, ಮನಸ್ಸು, ಬುದ್ಧಿ, ಜೀವ, ಇಡಿಯ ಜಗತ್ತಿನ ಮೂಲಕಾರಣ-ಇವುಗಳನ್ನೂ ಒಂದೊಂದಾಗಿ ಕಂಡುಕೊಳ್ಳುತ್ತಾ ಹೋಗಬೇಕು. ಅಂಥವರಿಗೆ ಕೊನೆಯಲ್ಲಿ ಸರ್ವವ್ಯಾಪಕವಾದ ಪರಮಾತ್ಮತತ್ತ್ವದ ಅನುಭವವಾಗುವದು.

**೧೫೮.** ಪರಮೇಶ್ವರನು ಅತ್ಯಂತ **ಉತ್ಕೃಷ್ಟ**ರಾದ ಬ್ರಹ್ಮಾದಿಗಳಿಗೆ ಹೇಗೋ ಹಾಗೆ ಜ್ಞಾನವೈರಾಗ್ಯಾದಿಗಳಿಂದ **ನಿಕೃಷ್ಟ**ರಾಗಿರುವ ಸ್ತಂಬಪರ್ಯಂತವಾದ ಪ್ರಾಣಿಗಳಿಗೂ ಆತ್ಮನೇ ಆಗಿರುತ್ತಾನೆ. ಆದರೂ ಉಪಾಧಿಗಳ ನಿಮಿತ್ತದಿಂದ ಬಗೆಬಗೆಯ ವಿಶೇಷಜ್ಞಾನಗಳಿಂದೊಡಗೂಡಿರುವಂತೆ ಸ್ಥೂಲಬುದ್ಧಿಯುಳ್ಳವರಿಗೆ ಕಾಣಬರುತ್ತಿರುವನು. ಯಾರು ಅಧ್ಯಾತ್ಮಯೋಗದಿಂದ ಬುದ್ಧಿಯನ್ನು ಏಕಾಗ್ರವಾಗಿ ಮಾಡಿಕೊಳ್ಳುವರೋ ಅವರಿಗೆ ಪರಮಸೂಕ್ಷ್ಮವಾದ ಆತನ ತತ್ತ್ವವು ಗೋಚರವಾಗುವದು. ಆ ಪರಮಾತ್ಮನನ್ನು ಕಂಡುಕೊಳ್ಳಬೇಕೆನ್ನುವವರು ಇಂದ್ರಿಯಗಳು, ಮನಸ್ಸು, ಬುದ್ಧಿ- ಇವುಗಳ ವ್ಯಾಪಾರವನ್ನು ಕ್ರಮಕ್ರಮವಾಗಿ ನಿಲ್ಲಿಸಿಕೊಂಡು ಸರ್ವಬುದ್ಧಿಪ್ರತ್ಯಯಗಳಿಗೂ ಸಾಕ್ಷಿಯಾಗಿರುವ ಆತನ ನಿರ್ವಿಶೇಷರೂಪದಲ್ಲಿ ನೆಲೆನಿಲ್ಲುವದಕ್ಕೆ ಪ್ರಯತ್ನಿಸಬೇಕು.

**೧೫೯.** ಮಾನವನು ಶರೀರೇಂದ್ರಿಯಗಳ ಅಭಿಮಾನದಿಂದ ಮರ್ತ್ಯನಾಗಿರುತ್ತಾನೆ. ಶರೀರವೂ ಇಂದ್ರಿಯಗಳೂ ದಿನದಿನವೂ ಮಾರ್ಪಡುತ್ತಲೇ ಇರುವದರಿಂದ ಶರೀರೇಂದ್ರಿಯಗಳ ಗುಂಪೇ ತಾನೆಂದು ತಿಳಿದಿರುವವನು ತಾನೂ ಮಾರ್ಪಡುತ್ತಿರುವೆನೆಂದು ಭಾವಿಸಿಕೊಂಡಿರುತ್ತಾನೆ. ಆದ್ದರಿಂದ ಶರೀರೇಂದ್ರಿಯಸಂಘಾತದ ಅಭಿಮಾನದ ಬಿಡುಗಡೆಯನ್ನು ಮಾಡಿಕೊಂಡರೆ ಮೃತ್ಯುವಿನ **ದವಡೆ**ಯಿಂದ ಪಾರಾದಂತೆ.

**೧೬೦.** ಇಂದ್ರಿಯಗಳು ಹೊರಗಿರುವ ವಿಷಯಗಳನ್ನು ಮಾತ್ರ ಗ್ರಹಿಸುವದಕ್ಕೆ ತಕ್ಕಂತೆ ಸೃಷ್ಟವಾಗಿರುತ್ತವೆ. ಆದ್ದರಿಂದ ಇಂದ್ರಿಯಪ್ರಧಾನರಾದ ಜನರು ಬಹಿರ್ಮುಖ

ರಾಗಿಯೇ ಇರುತ್ತಾರೆ. ಮನಸ್ಸೂ ಇಂದ್ರಿಯಗಳಿಗೆ ಸಹಾಯಕವಾಗಿದ್ದುಕೊಂಡು ಹೊರಗಿನ ವಿಷಯಗಳನ್ನು ಅನುಭವಿಸುವದು, ಸುಖದುಃಖಗಳನ್ನು ಪಡೆಯುವದು ಎಂಬ ಸ್ವಭಾವದ್ದೇ ಆಗಿರುತ್ತದೆಯಾದ್ದರಿಂದ ಸಾಧಾರಣವಾದ ಮನಸ್ಸಿನಿಂದಲೂ ಪರಮಾತ್ಮತತ್ತ್ವವನ್ನು ಅರಿಯುವದಕ್ಕೆ ಆಗುವಂತೆಯೇ ಇಲ್ಲ. ಆದ್ದರಿಂದ ಯಾರು ಇಂದ್ರಿಯಗಳನ್ನೂ ಮನಸ್ಸನ್ನೂ **ಹಿಂದಕ್ಕೆ** ಸರಿಯಿಸಿಕೊಂಡು ತಮ್ಮೊಳಗೇ ನೋಡಿಕೊಳ್ಳುವರೋ ಅವರಿಗೇ ಆತ್ಮಾನುಭವವಾಗುತ್ತದೆ. ಅಂಥ ಆತ್ಮಾನುಭವದಿಂದಲೇ ಅಮೃತತ್ವವು ದೊರಕುತ್ತದೆ.

**೧೬೧.** ಶಬ್ದಸ್ಪರ್ಶಾದಿವಿಷಯಗಳನ್ನು ಅರಿಯುವ ಚೈತನ್ಯಪ್ರಕಾಶವು ಯಾವದರಿಂದ ನಮಗೆ ದೊರೆಯುತ್ತಿರುವದೋ ಎಚ್ಚರಕನಸುತನಿನಿದ್ರೆಗಳೆಂಬ ಅವಸ್ಥೆಗಳೆಲ್ಲವನ್ನೂ ನೋಡುತ್ತಾ ಯಾವ ತತ್ತ್ವವು ಆ ಅವಸ್ಥೆಗಳ ಬರವುಹೋಗುಗಳಿಂದ ವಿಕಾರವನ್ನು ಪಡೆಯದೆ ಸಾಕ್ಷಿಯಾಗಿರುವದೋ ಯಾವದು ಕರ್ಮಗಳನ್ನು ಮಾಡಿ ಫಲವನ್ನನುಭವಿಸುತ್ತಿರುವ ಸಂಸಾರಿಯಾಗಿ ತೋರುತ್ತಿರುವ ಜೀವನ **ತಿರುಳಾ**ಗಿರುವದೋ ಅದೇ ಪರಮಾರ್ಥವಾದ ಪರಮಾತ್ಮ**ತತ್ತ್ವ**ವು. ಅದನ್ನು ತಿಳಿದವನಿಗೇ ಸಂಸಾರದುಃಖವು ತೊಲಗುವದು.

**೧೬೨.** ನಮಗೆ ಪ್ರಪಂಚವೆಂದು ಕಾಣಿಸುತ್ತಿರುವದರಲ್ಲಿ ಧರ್ಮಾಧರ್ಮಗಳನ್ನು ಮಾಡಿ ಅವುಗಳ ಫಲವಾಗಿ ಆಯಾ ದೇಶಕಾಲನಿಮಿತ್ತಗಳಿಂದ ಬಗೆಬಗೆಯ ಶರೀರಗಳನ್ನು ಅನುಭವಿಸುತ್ತಿರುವ ಹಲವರು ಜೀವರುಗಳು ಇರುತ್ತಾರೆ. ಆದರೆ ಆ ಜೀವರುಗಳಿಗೆಲ್ಲ ತಿರುಳಾಗಿರುವ ಪರಮಾತ್ಮನು ಧರ್ಮಾಧರ್ಮಗಳನ್ನು ಮೀರಿರುತ್ತಾನೆ. ದೇಶಕಾಲನಿಮಿತ್ತಗಳನ್ನು ದಾಟಿರುತ್ತಾನೆ- ಎಂದು ಬಲ್ಲವರು ಹೇಳುತ್ತಾರೆ. ಅಜ್ಞರಿಗೆ ಕಾಣಿಸುತ್ತಿರುವ ಪ್ರಪಂಚದ ತಿರುಳೇ **ಸುಜ್ಞ**ರಿಗೆ ಪರಮಾತ್ಮತತ್ತ್ವವಾಗಿರುತ್ತಾನಂತೆ.

**೧೬೩.** ನಾವು 'ನಾನು' ಎಂದುಕೊಳ್ಳುತ್ತಿರುವ ಜೀವಾತ್ಮಸ್ವರೂಪವು ಪರಿಚ್ಛಿನ್ನವಾಗಿರುತ್ತದೆ. ಸಂಸಾರಿಯಾಗಿರುತ್ತದೆ. ನಮ್ಮಂತೆಯೇ ಅಲ್ಪಜ್ಞರೂ ಅಲ್ಪಶಕ್ತಿಯುಳ್ಳವರೂ ಆದ ಜೀವರುಗಳು ಅನೇಕರಿರುವರೆಂದು ನಮ್ಮ ಭಾವನೆ. ಆದರೆ **ಬಲ್ಲವರ** ದೃಷ್ಟಿಯಿಂದ ನೋಡಿದರೆ ನಮ್ಮ ಆತ್ಮನು ದೇಶಕಾಲಪರಿಚ್ಛೇದವಿಲ್ಲದ ಪರಮಾತ್ಮನೇ ಆಗಿರುತ್ತಾನೆ. ಎಲ್ಲರಿಗೂ ಆತನೊಬ್ಬನೇ ಆತ್ಮನು. ಇವನನ್ನು ಅರಿತುಕೊಂಡರೆ ನಾವು ಮುಕ್ತರಾಗುವೆವು.

**೧೬೪.** ಈ ನಮ್ಮ ಶರೀರದಲ್ಲಿರುವ ಜೀವನ ಪರಮಾರ್ಥರೂಪವೇ ಪರಮಾತ್ಮನು. ಈ ಶರೀರದಲ್ಲಿ ನಡೆಯುವ ಪ್ರಾಣಾಪಾನಾದಿವ್ಯಾಪಾರಗಳೆಲ್ಲವೂ ಆತನ **ಸಾಂನಿಧ್ಯ**ದಿಂದಲೇ ನಡೆಯುತ್ತಿರುವವು.

**೧೬೫.** ಬ್ರಹ್ಮವು ಯಾರಿಗೂ ಅರಿಯುವದಕ್ಕಾಗದ ರಹಸ್ಯವಾಗಿರುತ್ತದೆ. ಏಕೆಂದರೆ ಅದು ನಮ್ಮ ಆತ್ಮನೇ ಆಗಿದ್ದರೂ ಅದನ್ನು ಅರಿತುಕೊಳ್ಳದೆ ನಾವು ಶರೀರಾಭಿಮಾನದಿಂದ ಬಗೆಬಗೆಯ ಶರೀರಗಳನ್ನು ಧರಿಸುತ್ತಾ ಜನನಮರಣಗಳನ್ನು ಅನುಭವಿಸುತ್ತಿರುವೆವು. ಈ ನಮ್ಮ ಶರೀರೇಂದ್ರಿಯಗಳು ಯಾವ ವ್ಯಾಪಾರವನ್ನೂ ಮಾಡದಿರುವಾಗಲೂ **ವಿಚಿತ್ರ**ವಾದ ಪ್ರಪಂಚವೊಂದನ್ನು ಕನಸಿನಲ್ಲಿ ಸೃಷ್ಟಿಸಿಕೊಂಡು ಅದನ್ನೆಲ್ಲ ಸಾಕ್ಷಿಯಾಗಿ ಅರಿಯುತ್ತಿರುವ ಆತ್ಮನ ಪರಮಾರ್ಥವೇ ನಿತ್ಯಶುದ್ಧವಾದ ಅಮೃತವಾದ ಬ್ರಹ್ಮವು. ಅದನ್ನೇ ಎಲ್ಲಾ ಲೋಕಗಳೂ ಆಶ್ರಯಿಸಿಕೊಂಡಿರುವವು. ಆ ಬ್ರಹ್ಮವನ್ನು ಬಿಟ್ಟು ಅತ್ತ ಕದಲುವದು ಯಾರಿಂದಲೂ ಆಗಲಾರದು.

**೧೬೬.** ಬೆಂಕಿಯು ಒಂದೇ ಪದಾರ್ಥ. ಆದರೂ ಅದು ಯಾವ ದ್ರವ್ಯವನ್ನು ಆಶ್ರಯಿಸಿಕೊಂಡು ತೋರಿಕೊಳ್ಳುವದೋ ಅದರ ಆಕಾರವೇ ಮುಂತಾದ ಗುಣಗಳನ್ನು ಅನುಸರಿಸಿರುತ್ತದೆ. ವಾಯುವು ಒಂದೇ ಪದಾರ್ಥ. ಆದರೂ ಅದು ತಾನು ಪ್ರವೇಶಿಸಿದ ಕೊಳಲಿನ ರಂಧ್ರಗಳನ್ನು ಅನುಸರಿಸಿ ಬಗೆಬಗೆಯ ಮಟ್ಟದ ಧ್ವನಿಗಳನ್ನು ಹೊರ ಹೊಮ್ಮಿಸುತ್ತದೆ. ಸೂರ್ಯನ ಬಿಸಿಲು ಒಂದೇ ಬಣ್ಣವಾಗಿರುತ್ತದೆ. ಆದರೂ ಅದು ಬೆಳಗುವ ವಸ್ತುಗಳ ಬಣ್ಣಕ್ಕನುಗುಣವಾಗಿ ಬೇರೆಬೇರೆಯ ಬಣ್ಣದ್ದಾಗಿರುವಂತೆ ತೋರುತ್ತದೆ. ಹೀಗೆಯೇ ಸರ್ವಪ್ರಾಣಿಗಳಿಗೂ ಒಬ್ಬನೇ ಆತ್ಮನಾದರೂ ಅವರವರ ಶರೀರ, ಇಂದ್ರಿಯ, ಮನಸ್ಸು-ಮುಂತಾದ ಉಪಾಧಿಗಳನ್ನು ಅನುಸರಿಸಿ ಬೇರೆಬೇರೆಯ **ಸ್ವಭಾವ**ದವನಾಗಿರುವಂತೆ ತೋರುತ್ತಿರುತ್ತಾನೆ. ಬೆಂಕಿ, ವಾಯು, ಸೂರ್ಯನ ಬಿಸಿಲು-ಇವುಗಳ ಸ್ವರೂಪಕ್ಕೆ ನಿಜವಾಗಿ ಯಾವ ಉಪಾಧಿಯ ಗುಣದೋಷಗಳೂ ಅಂಟಿಕೊಂಡಿರುವದಿಲ್ಲ. ಇದರಂತೆ ಪ್ರಾಣಿಗಳ ಒಳಹೊಕ್ಕು ಬಗೆಬಗೆಯ ಜೀವರಾಗಿ ಕಾಣಿಸಿಕೊಳ್ಳುತ್ತಿರುವ ಆತ್ಮನಿಗೂ ಯಾವ ಶರೀರೇಂದ್ರಿಯಗಳ ದೋಷವೂ ಅಂಟಿ ಕೊಂಡಿರುವದಿಲ್ಲ. ಅವನು ನಿತ್ಯಶುದ್ಧಬುದ್ಧಮುಕ್ತಸ್ವಭಾವನು.

**೧೬೭.** ಪರಮಾತ್ಮನು ಸರ್ವಭೂತಗಳಿಗೂ ಅಂತರಾತ್ಮನು. ತಾನು ನಿಜವಾಗಿ ಒಬ್ಬನೇ ಆಗಿದ್ದರೂ **ಅನೇಕ**ರಾಗಿ ತೋರುತ್ತಿರುವನು. ಚೇತನರಾದ ಜೀವರುಗಳಿಗೆ ಚೈತನ್ಯವನ್ನೂ ಕಾಮಿಗಳಿಗೆಲ್ಲ ಕಾಮಗಳನ್ನೂ ಅನುಗ್ರಹಿಸುವವನು ಆತನೇ. ಸ್ವಯಂ ಪ್ರಕಾಶನಾಗಿರುವದರಿಂದ ಆತನನ್ನು ಸುಲಭವಾಗಿ ಕಂಡುಕೊಳ್ಳಬಹುದು.

**೧೬೮.** ದೊಡ್ಡದಾಗಿ ಬೆಳೆದಿರುವ ಅರಳಿಮರಕ್ಕೆ ಬುಡದಲ್ಲಿ ಬೇರಿರುವಂತೆ ಬಗೆಬಗೆಯಾಗಿ ತೋರುತ್ತಿರುವ ಈ ಸಂಸಾರಪ್ರಪಂಚಕ್ಕೆಲ್ಲ ಆಧಾರವಾಗಿ **ಬ್ರಹ್ಮತತ್ತ್ವವು** ಇದ್ದುಕೊಂಡಿರುವದು. ಈ ಜಗತ್ತಿನ ಚಲನವಲನಗಳಿಗೆಲ್ಲ ಕಾರಣನಾಗಿರುವ ಪ್ರಾಣನಿಗೂ ಆಧಾರವಾಗಿರುವದು ಈ ಬ್ರಹ್ಮವು. ಅಗ್ನ್ಯಾದಿದೇವತೆಗಳೆಲ್ಲರೂ ಆ ಬ್ರಹ್ಮದ ಅಂಜಿಕೆಯಿಂದಲೋ ಎಂಬಂತೆ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿರುವರು.

**೧೬೯.** ಮನುಷ್ಯನು ಇನ್ನೂ ಬದುಕಿರುವಾಗಲೇ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಏಕೆಂದರೆ ಆತ್ಮಜ್ಞಾನಕ್ಕೆ ಮನುಷ್ಯಲೋಕದಲ್ಲಿರುವಷ್ಟು ಸೌಕರ್ಯವು ಮತ್ತೆ ಯಾವ ಲೋಕದಲ್ಲಿಯೂ ಇರುವದಿಲ್ಲ. ಆತ್ಮಜ್ಞಾನವನ್ನು ಸಂಪಾದಿಸಿಕೊಂಡು ನಿತ್ಯಾನಂದವನ್ನು ಸಂಪಾದಿಸಿಕೊಳ್ಳುವದು ಒಂದು, ಜ್ಞಾನಹೀನರಾಗಿ ಮತ್ತೆಮತ್ತೆ ಜನನಮರಣಗಳನ್ನು ಹೊಂದುತ್ತಾ ದುಃಖಪಡುವದು ಒಂದು- ಹೀಗೆ ಎರಡೇ ಹಾದಿಗಳು ಮನುಷ್ಯನ ಮುಂದೆ ಕಾಣುತ್ತಿವೆ. **ವಿವೇಕಿ**ಯಾದವನು ಜ್ಞಾನದ ಮಾರ್ಗವನ್ನೇ ಆರಿಸಿಕೊಳ್ಳುತ್ತಾನೆ.

**೧೭೦.** ಪರಮಾತ್ಮನನ್ನು ಕಣ್ಣು, ಕಿವಿ - ಮುಂತಾದ ಇಂದ್ರಿಯಗಳಿಂದ ಅರಿಯುವದು ಯಾರಿಂದಲೂ ಆಗಲಾರದು. ಏಕೆಂದರೆ ಅವನಿಗೆ ರೂಪ, ಶಬ್ದ ಮುಂತಾದ ಗುಣಗಳು ಯಾವದೂ ಇರುವದಿಲ್ಲ. ವಿಕಲ್ಪಮಾಡುವ ಮನಸ್ಸನ್ನು ಶುದ್ಧಿಯಿಂದ ಅಳವಡಿಸಿಕೊಂಡು ತಮ್ಮೊಳಗೇ ಯಾರು ನೋಡಿಕೊಳ್ಳುವರೋ ಅವರಿಗೆ ಆತ್ಮಾನುಭವವಾಗುವದು. ಇಂದ್ರಿಯಗಳು ಚಲಿಸದಂತೆ ಹಿಡಿದಿಟ್ಟುಕೊಳ್ಳುವದೇ ಯೋಗವು. ಅದರ ವಿಷಯಕ್ಕೆ ಎಚ್ಚರಿಕೆಯಿಂದಿರಬೇಕು. ಎಲ್ಲಾ ಇಂದ್ರಿಯವ್ಯಾಪಾರಗಳೂ ನಿಂತು ಹೋದರೂ 'ಇದೆ' ಎಂಬ ಭಾವವು ಮಾತ್ರ ಉಳಿದುಕೊಂಡಿರುತ್ತದೆ. **ಹೀಗೆ ಇದೆ**- ಎಂದು ತಿಳಿದುಕೊಂಡವರಿಗೆ ನಿರ್ವಿಶೇಷಾತ್ಮನ ತತ್ತ್ವವು ಅನುಭವಕ್ಕೆ ಬರುವದು.

**೧೭೧.** ಅವಿದ್ಯಾಕಾಮಕರ್ಮಗಳಿಂದಲೇ ಮನುಷ್ಯನು **ಮರ್ತ್ಯ**ನೆನಿಸಿಕೊಂಡು ಮತ್ತೆಮತ್ತೆ ಹುಟ್ಟಿ ಸಾಯುತ್ತಿರುತ್ತಾನೆ. ಅವಿದ್ಯೆಯಿಂದ ಕಾಮ, ಕಾಮದಿಂದ ಕರ್ಮ, ಕರ್ಮದಿಂದಾಗಿ ಜನ್ಮ - ಹೀಗೆ ಆಗುತ್ತಿರುವವು. ಹುಟ್ಟಿದವನು ಸಾಯಲೇಬೇಕಾಗುವದರಿಂದ ಹುಟ್ಟಿದ ಪ್ರತಿಯೊಬ್ಬ ಜೀವನೂ ಮರ್ತ್ಯನೇ. ಆದರೆ ಅವಿದ್ಯಾಕಾಮರೂಪವಾದ ಮೃತ್ಯುವು ಹೃದಯಕ್ಕೆ ಗಂಟುಬಿದ್ದಿರುತ್ತದೆ. ಆ ಹೃದಯವನ್ನು ನೋಡುತ್ತಿರುವವನ ಸಾಕ್ಷಿಗೆ ಅದು ಸೇರಿರುವದಿಲ್ಲ. ಆ ಸಾಕ್ಷಿಯೇ ನಾನು ಎಂದು ಅನುಭವದಲ್ಲಿ ಕಂಡುಕೊಂಡಾತನು ಎಂದೆಂದಿಗೂ ಅಮೃತಸ್ವರೂಪನಾದ ಬ್ರಹ್ಮವೇ ಆಗಿರುತ್ತಾನೆ.

**೧೭೨.** ಬ್ರಹ್ಮಚಾರಿಯಾದ ನಚಿಕೇತ, ಬ್ರಹ್ಮವಿದ್ಯಾಚಾರ್ಯನಾದ ಯಮ - ಇವರಿಬ್ಬರ ಸಂವಾದವು ಕಠೋಪನಿಷತ್ತಿನಲ್ಲಿದೆ. ಅಧ್ಯಾತ್ಮವಿದ್ಯೆ, ಅಧ್ಯಾತ್ಮಯೋಗ- ಇವೆರಡರ ಸಾರವೂ ಅದರಲ್ಲಿ ಅಡಕವಾಗಿರುತ್ತದೆ. ಅಧ್ಯಾತ್ಮಯೋಗವೆಂದರೆ ಇಂದ್ರಿಯಗಳು, ಮನಸ್ಸು, ಬುದ್ಧಿ, ಜೀವತ್ವ - ಇವುಗಳನ್ನು ಕ್ರಮಕ್ರಮವಾಗಿ ಸೂಕ್ಷ್ಮವಾದ ಬಗೆಗಣ್ಣಿಂದ ನೋಡಿ ಇವೆಲ್ಲದರ ತತ್ತ್ವವು ಆತ್ಮನೇ - ಎಂದು ತಿಳಿದುಕೊಳ್ಳುವದು. ಈ ಉಪಾಯದಿಂದ ಆತ್ಮನನ್ನು ವಿಂಗಡಿಸಿಕೊಂಡು ನೋಡಿದರೆ ಆ ಆತ್ಮಸ್ವರೂಪವು ನಿತ್ಯಶುದ್ಧಬುದ್ಧಮುಕ್ತವಾದ ಬ್ರಹ್ಮವೇ ಎಂದು ಅನುಭವದಲ್ಲಿ ಮಿಂಚುವದು. **ಸಚ್ಛಿಷ್ಯ**ರಾದವರು ಈಗಲೂ ಸದ್ಗುರುಗಳ ಬೋಧೆಯಿಂದ ಈ ತತ್ತ್ವವನ್ನು ಮನಗಾಣಬಹುದಾಗಿದೆ.

**೧೭೩.** ನಮ್ಮಲ್ಲಿ ಪ್ರತಿಯೊಬ್ಬನ ಪರಮಾರ್ಥಸ್ವರೂಪವೂ ಯಾವದೊಂದು ದ್ವೈತವೂ ಇಲ್ಲದ ಸಚ್ಚಿದಾನಂದಪರಮಾತ್ಮನೇ ಆಗಿರುತ್ತದೆ. ಆದರೂ ನಿದ್ರೆಯಲ್ಲಿ ತಾನೊಬ್ಬನೇ ಇದ್ದು ಬಗೆಬಗೆಯ ದ್ವೈತಪ್ರಪಂಚದ ಕನಸನ್ನು ಕಾಣುವಂತೆ - ಈಗ ನಾವು ಪರಮಾರ್ಥದ ಅರಿವಿಲ್ಲದ ನಿದ್ರೆಯಿಂದ ಸಂಸಾರದ ವಿಚಿತ್ರಸ್ವಪ್ನಪ್ರಪಂಚವನ್ನು ಕಾಣುತ್ತಿರುವೆವು. ಪರಮೇಶ್ವರನ ಅನುಗ್ರಹದಿಂದ ಸದ್ಗುರುಗಳ ಉಪದೇಶವು ದೊರಕಿದಾಗ ಈ ವಿಶ್ವವೂ ನಾನೂ **ಅದ್ವಿತೀಯ**ಪರಮಾತ್ಮನಿಗಿಂತ ಬೇರೆಯಿಲ್ಲ - ಎಂಬ ನಿಜವನ್ನು ಕಂಡುಕೊಂಡು ಆನಂದಿಸುವೆವು.

**೧೭೪.** ಈ ಜಗತ್ತು ಬೀಜದಲ್ಲಿ ಹುದುಗಿರುವ ಮೊಳಕೆಯಂತೆ ಪರಮಾತ್ಮನಲ್ಲಿಯೇ ಶಕ್ತಿರೂಪದಿಂದ ಇದ್ದುಕೊಂಡಿದ್ದು ಆತನಿಂದಲೇ ಹೊರಕ್ಕೆ ಬಂದಿರುವದು. ಈಗಲೂ ಬಟ್ಟೆಯ ಮೇಲೆ ಬರೆದಿರುವ ವಿಚಿತ್ರಚಿತ್ರದಂತೆ ಆತನ **ಆಸರೆ**ಯಲ್ಲಿಯೇ ಇರುತ್ತಿರುವದು. ಇದರ ತತ್ತ್ವವನ್ನು ಪರೀಕ್ಷಿಸಿನೋಡಿದರೆ ಆ ಪರಮಾತ್ಮನಿಗಿಂತ ಇದು ಬೇರೆಯಾಗಿಲ್ಲವೇ ಇಲ್ಲ.

**೧೭೫.** ನಮಗಿಂತ ಹೊರಗಿರುವ ವಸ್ತುಗಳನ್ನು 'ಇದೇ ಅದು' ಎಂದು ಕಂಡುಕೊಳ್ಳಬೇಕಾದರೆ ನಮಗೂ ಅದಕ್ಕೂ ನಡುವೆ ಇರುವ ದೇಶಕಾಲವಸ್ತುಗಳ ವ್ಯವಧಾನವನ್ನು ತೊಲಗಿಸಿಕೊಳ್ಳುವದು ಅವಶ್ಯಕವು. ನಮ್ಮಗಳೆಲ್ಲರ ಆತ್ಮನೇ ಆಗಿರುವ ಪರಮಾತ್ಮನು ಹೀಗೆ ಯಾವ ವ್ಯವಧಾನವೂ ಇಲ್ಲದೆ ಇರುವದರಿಂದ ನಮ್ಮ ಸ್ವರೂಪವಲ್ಲದ ದೇಹಾದಿಗಳನ್ನು ಅಲ್ಲಗಳೆದು ನಮ್ಮ ಆತ್ಮನಲ್ಲಿಯೇ ನೆಲೆನಿಲ್ಲಿಸಬಲ್ಲ ಅನುಭವಿಯಾದ ಸದ್ಗುರುವಿನ **ಆಗಮೋಕ್ತಿ**ಯೊಂದೇ ಆತ್ಮಜ್ಞಾನಕ್ಕೆ ಸಾಕಾಗಿರುತ್ತದೆ. ಆತನ ಉಪದೇಶದಿಂದಲೇ ನೇರಾಗಿ 'ಆ ಬ್ರಹ್ಮವೇ ನಾನು' ಎಂಬ ಅನುಭವವು ಆಗಿಬಿಡುತ್ತದೆ.

**೧೭೬.** ಪರಮಾತ್ಮನು ನಮ್ಮೆಲ್ಲರ ಆತ್ಮನು. ಅವನು ಸ್ವರೂಪದಿಂದಲೇ ಚೈತನ್ಯಮಾತ್ರನಾಗಿರುವದರಿಂದ ತಾನೂ ತೋರಿಕೊಳ್ಳುತ್ತಾ ತನಗೆ ವಿಷಯವಾದದ್ದೆಲ್ಲವನ್ನೂ ತೋರಿಸಿಕೊಡುತ್ತಾನೆ. ಮನಸ್ಸೂ ಇಂದ್ರಿಯಗಳೂ ತಮ್ಮ ತಮ್ಮ ವಿಷಯಗಳನ್ನು ತೋರಿಸಿಕೊಡುವದು ಆತನ ಚೈತನ್ಯದ ಬೆಳಕಿನಿಂದಲೇ. ಹೊರಗಿನ ಜಗತ್ತಿನಲ್ಲಿ ಸೂರ್ಯ, ಚಂದ್ರ, ಅಗ್ನಿ, ಮಿಂಚು ...... ಮುಂತಾದ ಬೆಳಕುಗಳ ನೆರವಿನಿಂದ ನಾವು ಮಿಕ್ಕ ವಸ್ತುಗಳನ್ನು ನೋಡಿ ತನ್ನವೆಂದು ವ್ಯವಹರಿಸುವದುಂಟು. ಆದರೆ ನಿಜವೇನೆಂದರೆ : ಬಾಹ್ಯಪ್ರಪಂಚದಲ್ಲಿ ತಾವೇ ಬೆಳಗುವವೆಂದು ತೋರುವ ಸೂರ್ಯಾದಿವಸ್ತುಗಳು ತೋರುವದಕ್ಕೂ ನಮಗೆ ಪರಮಾತ್ಮಚೈತನ್ಯವೇ ಬೇಕಾಗಿದೆ. ಆ ಬೆಳಕಿನಿಂದಲೇ ನಮ್ಮ **ವ್ಯವಹಾರಗಳೆ**ಲ್ಲವೂ ಸಾಗುತ್ತಿದೆ.

**೧೭೭.** ಮನುಷ್ಯನ ಮನಸ್ಸು ವಿಚಿತ್ರವಾದದ್ದು. ಅದು ಏತರಮೇಲೆ ಕೂರುತ್ತದೆಯೋ ಅದನ್ನು 'ನಾನು' ಅಥವಾ 'ನನ್ನದು' ಎಂದುಕೊಳ್ಳುವದು ಅದರ ಹವ್ಯಾಸ.

ಹೊರಗಿನ ಯಾವ ಪದಾರ್ಥಗಳನ್ನಾದರೂ ಅದು ಒಂದುವೇಳೆ ಬಿಟ್ಟು ಹಿಂದಕ್ಕೆ ಸರಿದೀತು. ಆದರೆ ಶರೀರ, ಪ್ರಾಣ, ಇಂದ್ರಿಯಗಳು - ಇವುಗಳಲ್ಲಿ 'ನಾನು' ಎಂದು ಕೊಳ್ಳದಿದ್ದರೆ ಅದಕ್ಕೆ ತೃಪ್ತಿಯಿಲ್ಲ. ಮನಸ್ಸು, ಬುದ್ಧಿ - ಇವುಗಳಂತೂ ಪರಮಸತ್ಯವೆಂದೇ ಅದರ ಭಾವನೆ ; ಅದು ಸ್ವಾಭಾವಿಕವೇ ಆಗಿದೆ. ಯಾವಾಗಲಾದರೂ ಶರೀರಾದಿಗಳೆಲ್ಲ **ಅನಿತ್ಯ**ವೆಂಬ ಯೋಚನೆಯು ಅದಕ್ಕೆ ತಟ್ಟಿದರೆ ಆಗ ಶೂನ್ಯವೇ ಅದಕ್ಕೆ ತತ್ತ್ವವೆನಿಸುವದು. ಆದರೆ ಈ ಎಲ್ಲಕ್ಕೂ ಸಾಕ್ಷಿಯಾದ ಪರಮಾತ್ಮನೇ ನಿತ್ಯಸತ್ಯವು - ಎಂಬುದು ಮಾತ್ರ ಸದ್ಗುರುವಿನ ಅನುಗ್ರಹದಿಂದಲೇ ಅದಕ್ಕೆ ಹೊಳೆಯಬೇಕಾಗಿರುತ್ತದೆ.

**೧೭೮.** ಗಾಢನಿದ್ರೆಯ **ಗುಟ್ಟು** ಅನೇಕರಿಗೆ ತಿಳಿಯದು, ಅಲ್ಲಿ ನಾವು ನಮ್ಮ ಸ್ವರೂಪವಾದ ಶುದ್ಧಚೈತನ್ಯದಲ್ಲಿಯೇ ಬೆರೆತುಹೋಗುತ್ತೇವೆ. ಬರಿಯರಿವಿನ ದೃಷ್ಟಿಯಿಂದ ನೋಡಿದಾಗ ಈ ಅವಸ್ಥೆಯು ನಿದ್ರೆಯಲ್ಲ ; ಪೂರ್ಣವಾದ ಎಚ್ಚರ. ಈ ಅರಿವಿನ ಸ್ವರೂಪವು ನಮ್ಮನ್ನು ಬಿಟ್ಟುಹೋಗುವದೇ ಇಲ್ಲ. ಇದನ್ನು ಮನದಟ್ಟು ಮಾಡಿಕೊಳ್ಳ ಬೇಕು.

**೧೭೯.** ನಮ್ಮೆಲ್ಲರ ಆತ್ಮನು ಭಗವಂತನೇ. ಬಾಲ್ಯ, ಯೌವ್ವನ, ಕೌಮಾರ, ವಾರ್ಧಕ - ಎಂಬ ನಾಲ್ಕು ಅವಸ್ಥೆಗಳು ನಮ್ಮ ದೇಹಕ್ಕೆ ಮಾತ್ರ ಬರುತ್ತಿರುವವು ; ಆದರೆ ನಮ್ಮ ಆತ್ಮನಿಗೆ ಈ **ಅವಸ್ಥೆಗಳು** ಸೇರಿಲ್ಲ. ಅವನು ಎಂದೆಂದಿಗೂ ಸದ್ಯೋಜಾತನಾಗಿರುವನು. ಎಚ್ಚರ, ಕನಸು, ಗಾಢನಿದ್ರೆ - ಎಂಬ ಮೂರವಸ್ಥೆಗಳಲ್ಲಿ ಆಗುವ ಜ್ಞಾನದ ಮಾರ್ಪಾಡು ನಮ್ಮ ಅಂತಃಕರಣಕ್ಕೆ ಸೇರಿದ್ದು. ನಮ್ಮ ಆತ್ಮನು ಎಂದೆಂದಿಗೂ ಜ್ಞಾನದ ಗಟ್ಟಿಯೇ ಆಗಿರುತ್ತಾನೆ. ಇದನ್ನು ಸದ್ಗುರುವಿನ ಬೋಧೆಯಿಂದ ಮನಗಂಡು ಸುಖಶಾಂತಿಗಳನ್ನು ಸಂಪಾದಿಸಿಕೊಳ್ಳಿರಿ.

**೧೮೦.** ಎಚ್ಚರದಲ್ಲಿ ಕಾಣುವ ಪ್ರಪಂಚದಲ್ಲಿಯೂ ಸ್ವಪ್ನದಲ್ಲಿ ಕಾಣುವ ಪ್ರಪಂಚದಲ್ಲಿಯೂ ಬಗೆಬಗೆಯ ಸಂಬಂಧದ ದೃಶ್ಯಗಳು ನಮಗೆ ಕಾಣಿಸುತ್ತಿರುವವು. ಇಷ್ಟು ಬಿಕ್ಕಟ್ಟಿನ ಸಂಬಂಧವಿರುವದರಿಂದ ಆ ದೃಶ್ಯಗಳೆಲ್ಲ ಸತ್ಯವೇ ಎಂಬ **ಭ್ರಾಂತಿ**ಯು ನಮಗೆ ಆಯಾ ಅವಸ್ಥೆಯಲ್ಲಿ ಉಂಟಾಗುವದು. ಆದರೆ ಸುಷುಪ್ತಿಯಲ್ಲಿ ಆ ಪ್ರಪಂಚಗಳಾಗಲಿ, ಅವುಗಳಲ್ಲಿ ತೋರುವ ಸಂಬಂಧಗಳಾಗಲಿ ಸ್ವಲ್ಪವೂ ಕಾಣದಂತೆ ಅಳಿಸಿಹೋಗಿರುತ್ತದೆ. ಆದ್ದರಿಂದ ನಮ್ಮ ಆತ್ಮನ ಪರಮಾರ್ಥಸ್ವರೂಪದಲ್ಲಿ ಯಾವ ಪ್ರಪಂಚದ ಸೋಂಕೂ ಇಲ್ಲವೆಂಬುದೇ ಸತ್ಯವೆಂದಂತಾಯಿತು. ಈ ನಿಜವು ಸದ್ಗುರುವಿನ ಬೋಧೆಯಿಂದ ಮನದಟ್ಟಾಗುವದು.

**೧೮೧.** ಪರಮೇಶ್ವರನು **ಅಷ್ಟಮೂರ್ತಿ** - ಎಂಬ ಹೆಸರಿನಿಂದ ಪ್ರಖ್ಯಾತನಾಗಿರುತ್ತಾನೆ. ಪಂಚಭೂತಗಳು, ಸೂರ್ಯ, ಚಂದ್ರ, ಪುರುಷ - ಎಂಬ ಎಂಟು ಮೂರ್ತಿಗಳನ್ನು ಪುರಾಣದಲ್ಲಿ ಹೇಳಿರುತ್ತದೆ. ಆದರೆ ಅದು ಉಪಲಕ್ಷಣಕ್ಕಾಗಿ.

ಸ್ಥಾವರಜಂಗಮಾತ್ಮಕವಾಗಿರುವ ಜಗತ್ತೇ ಆತನ ಮೂರ್ತಿಯು. ಆತನಿಗಿಂತ ಬೇರೆಯಾದ ಜಗತ್ತೇ ಇರುವದಿಲ್ಲವೆಂದು ತಿಳಿಯಬೇಕು. ಪರಮೇಶ್ವರನು ಸರ್ವವ್ಯಾಪಕನೂ ಸರ್ವವೂ ಆಗಿರುತ್ತಾನೆ.

**೧೮೨. ಸರ್ವಾತ್ಮಭಾವ**ವೆಂದರೆ ಎಲ್ಲವೂ ತಾನೇ ಎಂಬ ಭಾವವು ಬರುವದು. ಎಲ್ಲರಿಗೂ ತಾನೇ ಆತ್ಮನೆಂಬ ಅರಿವು ಬ್ರಹ್ಮಜ್ಞಾನಿಗಳಿಗೆ ಬರುವದರಿಂದಲೂ ಎಲ್ಲವೂ ಅದ್ವಿತೀಯಬ್ರಹ್ಮಾತ್ಮನಾದ ನನ್ನ ವಿಭೂತಿಯೇ - ಎಂಬ ತಿಳಿವಳಿಕೆಯೂ ಅವರಿಗೆ ಇರುವದರಿಂದಲೂ ಜ್ಞಾನಿಗಳಿಗೆ ಸರ್ವಾತ್ಮಭಾವವೆಂಬ ಸಿದ್ಧಿಯು ಪ್ರಾಪ್ತವಾಗಿರುತ್ತದೆ ಎನ್ನಬಹುದು.

**೧೮೩.** ಸದ್ಗುರುವನ್ನು ಪರಮಾತ್ಮನೆಂದೇ ಭಾವಿಸಬೇಕು. ಸದ್ಗುರುವೆಂದರೆ **ಸನ್ಮಾತ್ರ**ವಾದ ಪರಬ್ರಹ್ಮದಲ್ಲಿ ನೆಲೆನಿಂತಿರುವವನು, ಮತ್ತು ತತ್ತ್ವವನ್ನು ಉಪದೇಶಿಸುವ ಗುರುವು. ಆತನನ್ನು ವ್ಯವಹಾರದೃಷ್ಟಿಯಿಂದ ಕಾಣದೆ ಪರಭಕ್ತಿಯಿಂದ ಸೇವಿಸುವವರಿಗೆ ಪರಮಾರ್ಥವು ಬೇಗನೆ ಕೈವಶವಾಗುವದು. ಮೋಹಬಂಧವು ಕಳಚಿಕೊಳ್ಳುವದು.

**೧೮೪.** ಸಾಮೂಹಿಕಸಾಧನವೆಂದರೇನು ? ಲೆಕ್ಕವಿಲ್ಲದಷ್ಟು ಜನರು ಒಂದು ಕಡೆ ಸೇರಿ ಗದ್ದಲದಿಂದ ಯಾವದಾದರೊಂದು ದಾಂಭಿಕವಾದ ಅನುಷ್ಠಾನವನ್ನು ಮಾಡುವದಲ್ಲ. ಒಂದೇ ಮನಸ್ಸಿರುವ ಭಕ್ತರು **ತನ್ಮಯಾಸಕ್ತಿ**ಯಿಂದ ಮಾಡುವ ದಾನ, ಜಪ, ಹೋಮ, ಅರ್ಚನೆ, ಭಜನೆ- ಮುಂತಾದದ್ದು ಯಾವದಾದರೂ ಸಾಮೂಹಿಕಸಾಧನವೇ.

**೧೮೫.** ಇಂದ್ರಿಯಗಳೂ ಮನಸ್ಸೂ ನಮ್ಮನ್ನು ಹಿಡಿದು ಕಟ್ಟಿರುವವು. ಅವುಗಳ ಹಿಡಿತದಿಂದ ಬಿಡಿಸಿಕೊಳ್ಳುವವರೆಗೂ ನಮಗೆ ಮರ್ತ್ಯತ್ವವು ತಪ್ಪಲಾರದು. ಹೊರಕ್ಕೆ ಹರಿಯುವ ಇಂದ್ರಿಯಗಳನ್ನು ಸಾತ್ತ್ವಿಕವಿಷಯಸೇವನೆಯಿಂದಲೂ ಇಂದ್ರಿಯಗಳ ಬೆನ್ನಟ್ಟಿಕೊಂಡೇ ಹರಿದಾಡುವ ಮನಸ್ಸನ್ನು ಪರಮಾತ್ಮಚಿಂತನೆಯಿಂದಲೂ **ಹಿಡಿತಕ್ಕೆ** ತಂದುಕೊಳ್ಳಬೇಕು. ಹಾಗಾದರೆ ಪರಮಾತ್ಮನಲ್ಲಿ ನಮ್ಮ ಮನಸ್ಸು ಲೀನವಾಗುವದು. ಆಗ ನಾವು ಅಮೃತರಾಗುವೆವು.

**೧೮೬.** ಅಣ್ವಸ್ತ್ರಗಳೇ ಮುಂತಾದ ಪ್ರಲಯಕಾರಕಾಸ್ತ್ರಗಳು ತಯಾರಾಗುತ್ತಿವೆಯಲ್ಲ, ಏನು ಗತಿ ? ಎಂದು ವ್ಯರ್ಥವಾಗಿ ಮನಸ್ಸಿಗೆ ವ್ಯಥೆಯನ್ನು ತಂದುಕೊಳ್ಳಬೇಡಿರಿ. ನಿಮ್ಮೊಳಗೆ ಅಣುರೂಪದಲ್ಲಿರುವ ಎಷ್ಟೋ **ದಿವ್ಯಶಕ್ತಿಗಳು** ಹುದುಗಿಕೊಂಡಿವೆ. ಭಗವಂತನ ಸತತಚಿಂತನೆಯಿಂದ ಆ ಶಕ್ತಿಗಳು ಎದ್ದುಕೊಳ್ಳುವವು. ಆಗ ಅಣ್ವಸ್ತ್ರಗಳು ನಿಮ್ಮನ್ನು ಏನೂ ಮಾಡಲಾರದೆಹೋಗುವವು. ಜಗತ್ತಿನ ವಿನಾಶವನ್ನೇ ಗುರಿಯಾಗಿಟ್ಟುಕೊಂಡಿರುವ ಆಸುರೀಸಂಪತ್ತಿನವರು ತಮ್ಮ ಅಸ್ತ್ರಗಳಿಗೆ ತಾವೇ ಬಲಿಯಾಗುವ ಸಂಭವವಿದೆ.

೧೮೭. ಶರೀರದಲ್ಲಿ ಹುಟ್ಟುವ ರೋಗಗಳಂತೆ ಮನಸ್ಸಿನಲ್ಲಿಯೂ ಕೆಲವು ರೋಗಗಳು ಹುಟ್ಟುವವು. ಮನೋರೋಗಕ್ಕೆ ವಿಜ್ಞಾನಶಾಸ್ತ್ರದ ಚಿಕಿತ್ಸೆಗಳು ಸಾಕಾಗಲಾರವು. ಕಾಮಕ್ರೋಧಾದಿಗಳನ್ನು ಪ್ರತಿಪಕ್ಷಭಾವನೆಯಿಂದ ಎದುರಿಸುವದು, ಸದ್ಗ್ರಂಥಾವಲೋಕನ, ಮನಸ್ಸು ಯಾವ ಯೋಚನೆಯಲ್ಲಿಯೂ ಅಂಟಿಕೊಳ್ಳದಂತೆ ಎಚ್ಚರಿಕೆಯನ್ನು ವಹಿಸುವದು, ಇವು ಮನೋರೋಗಕ್ಕೆ ಸಾಮಾನ್ಯಚಿಕಿತ್ಸೆಗಳು. ಅಧ್ಯಾತ್ಮ ಮಾರ್ಗದಲ್ಲಿಯೇ ನಡೆಯುವ ಪ್ರಯತ್ನವು ಎಲ್ಲಕ್ಕಿಂತಲೂ ಹೆಚ್ಚಿನ **ಚಿಕಿತ್ಸೆ.**

೧೮೮. ಮನಸ್ಸಿನಲ್ಲಿ ಹುಟ್ಟಿಕೊಂಡಿರುವ ರೋಗಗಳಿಗೆ ಅನೇಕ ಮಾನಸಿಕ ಚಿಕಿತ್ಸೆಗಳಿವೆ. ಅವುಗಳಲ್ಲಿ ನಮಗೆ ಹೊಂದುವ ಚಿಕಿತ್ಸೆಗಳನ್ನು ಅವಶ್ಯವಾಗಿ ಉಪಯೋಗಿಸಿಕೊಂಡು ನೋಡಬೇಕು. ಆದರೆ ಅವುಗಳೆಲ್ಲಕ್ಕಿಂತಲೂ **ಭಗವದ್ಭಕ್ತಿ** ಎಂಬುದು ಅತ್ಯುತ್ತಮಚಿಕಿತ್ಸೆ. ಭಗವಂತನ ಮಹಿಮೆಯನ್ನು ಶ್ರವಣಮಾಡುವದು, ಅವನ ಗುಣಕರ್ಮಲೀಲೆಗಳನ್ನು ಸ್ಮರಿಸುತ್ತಿರುವದು, ತನ್ನ ಮನೋವಾಕ್ಕರ್ಮಗಳನ್ನು ಭಗವಂತನಿಗೆ ಅರ್ಪಿಸಿಬಿಡುವದು - ಈ ಅಧ್ಯಾತ್ಮಮಾರ್ಗಕ್ಕಿಂತ ಹೆಚ್ಚಿನ ಮನೋರೋಗಚಿಕಿತ್ಸೆಯು ಸಿಗಲಾರದು. ಭಕ್ತಿಮಾರ್ಗಕ್ಕೆ ಭಗವನ್ನಾಮಸ್ಮರಣೆಯೇ ಆದಿ. ಅದೇ ಅಂತ.

೧೮೯. ಸತ್ಸಂಗವೆಂದರೆ ಎಂದೆಂದಿಗೂ ಇದ್ದುಕೊಂಡಿರುವ, ಎಂದೆಂದಿಗೂ ನಮಗೆ ಒಳ್ಳೆಯದನ್ನುಂಟುಮಾಡುವ ಪರಮಾತ್ಮನ ಸಂಬಂಧವು. ಯಾರು ಸದ್ರೂಪನಾದ ಪರಮಾತ್ಮನನ್ನು ಹೃದಯದಲ್ಲಿಟ್ಟುಕೊಂಡಿರುವರೋ ಅವರಿಗೂ ಆ ಪರಮಾತ್ಮನಿಗೂ ಭೇದವಿರುವದಿಲ್ಲ. ಅವರ **ಸಂಗ**ವನ್ನು ಸಂಪಾದಿಸಿಕೊಂಡರೆ ಸತ್ಸಂಗವು ದಕ್ಕಿದಂತೆ. ಸಾಧುಗಳ ಸಂಗದಿಂದ ದುಷ್ಟವಿಷಯಗಳ ಸಂಗವು ಪರಿಹೃತವಾಗುತ್ತದೆ.

೧೯೦. **'ಸದ್-ಗೃಣಾತೀತಿ ಸದ್ಗುರುಃ'** ಇರುವದನ್ನು ಇದ್ದಂತೆ ತಿಳಿಸಿಕೊಡುವಾತನೇ ಸದ್ಗುರುವು. ಸದ್ಗುರುವನ್ನು ಮನೋವಾಕ್ಕಾಯಗಳಿಂದ ಶ್ರದ್ಧಾಪೂರ್ವಕವಾಗಿ ಸೇವಿಸಬೇಕು. ಧನ, ಗೆಳೆಯರು, ಬಂಧುಜನ- ಮುಂತಾದದ್ದೆಲ್ಲಕ್ಕಿಂತಲೂ ಸದ್ಗುರುವೇ ನಮಗೆ ಎಂದೆಂದಿಗೂ ಶರಣು - ಎಂದು ನಂಬಿರುವ ಸಾಧಕರಿಗೆ ಸಕಲಪುರುಷಾರ್ಥಗಳೂ **ಕೈವಶ**ವಾಗುವವು.

೧೯೧. ವಸ್ತುಗಳಲ್ಲಿ ಅಥವಾ ಮನುಷ್ಯರಲ್ಲಿ ದೋಷವಿರುವಂತೆ ನಮಗೆ ಕಂಡ ಮಾತ್ರದಿಂದ ನಿಜವಾಗಿ ಅವುಗಳಲ್ಲಿ ಆ ದೋಷವು ಇದೆ - ಎಂದು ನಿಶ್ಚಯಿಸಬಾರದು. ನಮಗೆ ಯಾರಿಂದಲಾದರೂ ತೊಂದರೆಯುಂಟಾಗುತ್ತಿದ್ದರೆ ಅದಕ್ಕೆ ನಮ್ಮ ಕರ್ಮವಾಸನೆಯೇ ಕಾರಣವಾಗಿರಬಹುದು. ಆದ್ದರಿಂದ ಎಲ್ಲದರಲ್ಲಿಯೂ ನಮಗೆ **ಸಮೃದ್ಧಿಯೇ** ಉಂಟಾಗುವಂತೆ ಅನುಗ್ರಹಿಸೆಂದು ಭಗವಂತನನ್ನು ಬೇಡಿಕೊಳ್ಳುತ್ತಿರಬೇಕು. ನಮ್ಮನ್ನು ನಾವು ತಿದ್ದಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದರೆ ಭಗವಂತನ ಅನುಗ್ರಹದಿಂದ ಎಲ್ಲವೂ ನಮಗೆ ಅನುಕೂಲವಾಗಿಯೇ ಪರಿಣಮಿಸುವದು.

**೧೯೨.** ನಮಗೆ ಶರೀರ, ಇಂದ್ರಿಯಗಳು, ಮನಸ್ಸು - ಇವೆಲ್ಲವನ್ನೂ ಅನುಗ್ರಹಿಸಿ ನಮ್ಮ ಹೃದಯದಲ್ಲಿಯೇ ಭಗವಂತನು ನೆಲಸಿರುತ್ತಾನೆ. ಭಗವಂತನು ಅನುಗ್ರಹಿಸಿರುವ ಈ **ವರ**ವನ್ನು ಸದುಪಯೋಗಮಾಡಿಕೊಂಡು ಆತನ ನಿರಂತರಸ್ಮರಣೆಯಿಂದ ಜೀವನವನ್ನು ಸಾಗಿಸುತ್ತಿದ್ದರೆ ಚಿಂತೆಗಳ ಕಾಟವು ತಪ್ಪುವದು. ಎಲ್ಲವೂ ಆನಂದಮಯವಾಗಿ ತೋರುವದು.

**೧೯೩.** ಮತ್ತೊಬ್ಬರು ನಮಗೆ ಅಪಕಾರವನ್ನು ಮಾಡಿದಾಗ ಮನಸ್ಸಿನಲ್ಲಿ ವಿಕಾರವಾಗುವದು ಸ್ವಾಭಾವಿಕ. ಅವರಿಗೆ ಏನಾದರೂ ಕೇಡನ್ನು ಮಾಡಬೇಕೆಂಬ ಬುದ್ಧಿಯು ತನಗೆತಾನೇ ಉಂಟಾಗುವದು. ಆದರೆ ಹಾಗೆ ಸೇಡುತೀರಿಸಿಕೊಳ್ಳಬೇಕೆಂಬ ಬುದ್ಧಿಯನ್ನು ತಡೆದುಕೊಂಡು ಮತ್ತೊಬ್ಬರು ಮಾಡಿದ ಅಪಕಾರವನ್ನು ಸಹಿಸಿಕೊಳ್ಳುವದು ನಮ್ಮ ಮೇಲ್ಮೆಗೆ ಕಾರಣವಾಗುವದು. ಮಾಡಿದ ಅಪರಾಧವನ್ನು ಕ್ಷಮಿಸುವದು ಅಷ್ಟು ಸುಲಭವಲ್ಲ. ಅವರನ್ನು ಪ್ರೇಮದಿಂದ ಕಾಣುವದನ್ನು ಅಭ್ಯಾಸಮಾಡಿದರೆ **ಕ್ಷಮಾಗುಣವು** ಕ್ರಮಕ್ರಮವಾಗಿ ಕೈವಶವಾಗುವದು. ಈ ವಿಷಯದಲ್ಲಿ ಭಗವಂತನ ಸಹಾಯವನ್ನು ಕೋರುತ್ತಿದ್ದರೆ ಇದು ಸುಲಭಸಾಧ್ಯವಾಗುವದು.

**೧೯೪.** ನಮ್ಮೆಲ್ಲರ **ತೀರ ಒಳಗೆ** ಒಬ್ಬ ಸರ್ವಾತ್ಮನು ಇರುತ್ತಾನೆ. ಒಳಹೊಕ್ಕು ಇವನನ್ನು ಹುಡುಕಿ ಗುರುತಿಸಿಕೊಂಡರೆ ನಮಗೆ ಸರ್ವಕಾಮಗಳೂ ಪ್ರಾಪ್ತವಾಗುವವು. ನಿತ್ಯಸುಖಶಾಂತಿಗಳು ದೊರಕುವವು.

**೧೯೫.** ತಾನು ಹಿಂದೆ ಎಷ್ಟು ತಪ್ಪುಗಳನ್ನು ಮಾಡಿದ್ದರೂ ಅದಕ್ಕಾಗಿ **ಪಶ್ಚಾತ್ತಾಪ**ಪಡುತ್ತಾ ಕುಳಿತುಕೊಳ್ಳದೆ ಸ್ಥಿರಪ್ರಯತ್ನದಿಂದ ಸನ್ಮಾರ್ಗವನ್ನು ಅವಲಂಬಿಸುವದಕ್ಕೆ ಪ್ರಯತ್ನಿಸುವವನೇ ಉತ್ತಮಸಾಧಕನು. ಸಾಧನವನ್ನು ನಮ್ಮ ಸ್ವಪ್ರಯತ್ನವೊಂದರಿಂದಲೇ ನೆರವೇರಿಸಿಕೊಳ್ಳುವದು ಶಕ್ಯವಲ್ಲ. ಅದಕ್ಕೆ ಭಗವಂತನನ್ನೇ ಆಶ್ರಯಿಸಬೇಕು. ಭಗವಂತನ ಪ್ರಾಪ್ತಿಗೆ ಭಗವಂತನನ್ನೇ ಉಪಾಯವಾಗಿ ಮಾಡಿಕೊಳ್ಳುವವನು ಅವಶ್ಯವಾಗಿ ತನ್ನ ಪ್ರಯತ್ನದಲ್ಲಿ ಜಯಶೀಲನಾಗುವನು.

**೧೯೬.** ನಮಗೆ ತಿಳಿಯದೆ ಇದ್ದದ್ದನ್ನು ತಿಳಿಯಿಸಿಕೊಡುವವರೆಲ್ಲ ಒಂದರ್ಥದಲ್ಲಿ ಗುರುಗಳೇ. ಆದರೆ ಪರಮಾರ್ಥವನ್ನು ಇದ್ದದ್ದು ಇದ್ದಂತೆ ಅನುಭವಕ್ಕೆ ತಂದು ಕೊಡುವವನು ಸದ್ಗುರು. ಸದ್ಗುರುವನ್ನು ಅಮಾಯೆಯಿಂದ ಸೇವಿಸಿ ಆತನ ಉಪದೇಶಾನುಗ್ರಹಕ್ಕೆ ಪಾತ್ರನಾಗುವ ಶಿಷ್ಯನಿಗೆ ಅಜ್ಞಾನವೆಲ್ಲ ತೊಲಗಿ ಅವಶ್ಯವಾಗಿ **ಬ್ರಹ್ಮಜ್ಞಾನ**ವು ದೊರಕುವದು.

**೧೯೭.** **ಮಹಾಪುರುಷ**ರೆಂದರೆ ಅನಂತವಾಗಿರುವ ಪರಮಾತ್ಮತತ್ತ್ವದಲ್ಲಿ ಒಂದಾಗಿರುವವರು. ಅವರಿಗೆ ದೇಶ, ಕಾಲ, ಜಾತಿ, ಕುಲ- ಮುಂತಾದ ಯಾವ ಕಟ್ಟೂ ಇರುವದಿಲ್ಲ. ಮಹಾಪುರುಷರನ್ನು ನಿಜವಾಗಿ ಅವರಿರುವ ಸ್ಥಿತಿಯಲ್ಲಿ ಅರಿತು

ಗೌರವಿಸುವದಕ್ಕೆ ಹೆಚ್ಚಿನ ತಿಳಿವಳಿಕೆ ಬೇಕು. ಅವರನ್ನು ಸೇವಿಸುವವರಿಗೆ ಪುಣ್ಯವೂ, ಚಿತ್ತಶುದ್ಧಿಯೂ ಜ್ಞಾನವೂ ಒಂದರ ಹಿಂದೊಂದು ಅವಶ್ಯವಾಗಿ ಲಭಿಸುವದು.

೧೯೮. ಈ **ಕಲಿಯುಗಕ್ಕೆ** ಆದರ್ಶಪುರುಷರಾಗತಕ್ಕವರು ಭೀಷ್ಮಾಚಾರ್ಯರಂಥವರಾಗಬೇಕು. ಪಿತೃಭಕ್ತಿ, ಬ್ರಹ್ಮಚರ್ಯ, ಶಾಸ್ತ್ರಜ್ಞಾನ, ಲೌಕಿಕವಿದ್ಯೆಗಳಲ್ಲಿ ತಿಳಿವಳಿಕೆ, ವ್ಯವಹಾರದಲ್ಲಿ ದಕ್ಷತೆ, ಶರೀರದಾರ್ಢ್ಯ, ಧರ್ಮಪ್ರೇಮ - ಇಷ್ಟನ್ನೂ ಪಡೆದುಕೊಂಡು ಬ್ರಾಹ್ಮಕ್ಷಾತ್ರತೇಜಸ್ಸುಗಳ ಸಾಮರಸ್ಯವನ್ನು ಸಂಪಾದಿಸಿಕೊಂಡವರೇ **ಆದರ್ಶಪುರುಷರು.**

೧೯೯. ಅಧ್ಯಾತ್ಮವಿದ್ಯೆ- ಎಂಬುದು ಅಂತಃಕರಣಕ್ಕೆ ಸೇರಿದ್ದು. ಆದ್ದರಿಂದ ಬಾಹ್ಯಸಾಧನಗಳಾದ ನಿಯಮಗಳಿಗಿಂತಲೂ ಮನಸ್ಸಿಗೆ ಸಂಬಂಧಿಸಿದ ಅಂತರಂಗ ಸಾಧನಗಳಿಗೇ ಹೆಚ್ಚಿನ ಬೆಲೆಯನ್ನು ಕೊಡಬೇಕು. ಮೊಟ್ಟಮೊದಲು ಕರ್ಮವನ್ನು ಮಾಡುವಾಗ ಇದು ಪರಮೇಶ್ವರನ **ಆರಾಧನೆ** - ಎಂಬ ದೃಢಭಾವನೆಯಿರಬೇಕು. ಮನಸ್ಸು ಪರಮಾತ್ಮನಲ್ಲಿ ನಿಲ್ಲಬೇಕೆಂಬುದೇ ಮುಖ್ಯವಾದ ಗುರಿ. ಹೊರಕ್ಕೆ ತೋರುಗಾಣಿಕೆಗೆ ಮಾಡುವ ಸಾಧನವಾಗಲಿ, ಕರ್ಮಪ್ರಧಾನವಾದ ವಿಚಾರವಾಗಲಿ, ಇಲ್ಲಿ ಯಾವ ಪ್ರಯೋಜನಕ್ಕೂ ಬರುವದಿಲ್ಲ.

೨೦೦. ಮನುಷ್ಯನ ಸಾಧಾರಣದೃಷ್ಟಿಯು ಅಳತೆಯದಾಗಿದೆ. ಈ ಜನ್ಮದಲ್ಲಿ ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳುಕೂಡ ಇಂತಿಷ್ಟು ದೂರದಲ್ಲಿದ್ದರೆ, ನಡುವೆ ಯಾವ ಮರೆಯೂ ಇಲ್ಲದಿದ್ದರೆ ಈಗಿನ ಮಟ್ಟಿಗೆ ಕಾಣಬರುತ್ತವೆ. ಆದರೆ ಮನಸ್ಸು ಹೊರಗಿನ ಇಂದ್ರಿಯಗಳಿಗಿಂತ ಕಾಲದಲ್ಲಿಯೂ ದೇಶದಲ್ಲಿಯೂ ದೂರವಾಗಿರುವ ವಸ್ತುಗಳನ್ನು ಕೂಡ ಕಲ್ಪಿಸಿಕೊಳ್ಳಬಲ್ಲದು. ಆದರೆ **ಶಾಸ್ತ್ರದೃಷ್ಟಿ** ಎಂಬುದು ಶಾಸ್ತ್ರದ ಅವಲೋಕನದಿಂದ ಬರುವ ದೃಷ್ಟಿ. ಅದು ಲೋಕಾಂತರದ ಮತ್ತು ಜನ್ಮಾಂತರದ ಸಂಬಂಧವಾದ ವಿಷಯಗಳನ್ನೂ ಜನ್ಮಾಂತರಗಳಲ್ಲಿ ಆಗುವ ಕರ್ಮಫಲಗಳನ್ನೂ ನೆನಪಿಗೆ ಕೊಡುತ್ತದೆ. ಶಾಸ್ತ್ರದ ದೃಷ್ಟಿಯುಳ್ಳವರು ಮಾತ್ರ ರಾಗದ್ವೇಷಾದಿಗಳನ್ನು ಹಿಡಿತದಲ್ಲಿಟ್ಟುಕೊಂಡು ಕರ್ತವ್ಯಕರ್ಮಗಳನ್ನು ಮಾಡುವದಕ್ಕೆ ಶಕ್ತರಾಗಿರುತ್ತಾರೆ.

೨೦೧. ಲೋಕದೃಷ್ಟಿಯಿಂದ ನಾವು ಒಬ್ಬೊಬ್ಬರೂ ಒಂದೊಂದು ಶರೀರ, ಇಂದ್ರಿಯಗಳು, ಮನಸ್ಸು - ಇವುಗಳಿಂದಾದ ಗುಂಪನ್ನುಪಯೋಗಿಸಿಕೊಂಡಿರುವ ಜೀವರು. ಮನುಷ್ಯರು, ದೇವತೆಗಳು, ಗಂಧರ್ವರು - ಮುಂತಾಗಿ ಜೀವರುಗಳಲ್ಲಿ ಆಗಿರಬಹುದಾದ ಭೇದವೆಲ್ಲ ಈ ಕಾರ್ಯಕರಣಸಂಘಾತದ ಅಭಿಮಾನದಿಂದಲೇ ಆಗಿರುತ್ತದೆ. ಆದರೆ ಶಾಸ್ತ್ರದ ದೃಷ್ಟಿಯಿಂದ ನೋಡಿದಾಗ ನಾವು ಒಬ್ಬೊಬ್ಬರೂ ಸರ್ವಾತ್ಮನಾದ ಅದ್ವಿತೀಯಾತ್ಮನೇ ಆಗಿರುವೆವು ; ಈ ದೃಷ್ಟಿಯನ್ನು ಸಂಪಾದಿಸಿಕೊಂಡಿರುವವರು ನಿಜವಾದ ಅರ್ಥದಲ್ಲಿ ಋಷಿಗಳು. ಆದ್ದರಿಂದ 'ನಾನು ಪರಮಾತ್ಮನು'

-ಎಂಬುದನ್ನು ಅನುಭವದಿಂದ ಕಂಡುಕೊಂಡಿರುವ ದೃಷ್ಟಿಗೆ **ಆರ್ಷದೃಷ್ಟಿ** ಎಂಬ ಹೆಸರು ಬಂದಿರುತ್ತದೆ.

**೨೦೨.** ಬ್ರಹ್ಮವಿದ್ಯೆಯನ್ನು ಉಪದೇಶಿಸಿರುವ ಗುರುವನ್ನು ಸಾಮಾನ್ಯಮನುಷ್ಯನೆಂದು ಎಂದಿಗೂ ತಿಳಿಯಬಾರದು. ಏಕೆಂದರೆ ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗಿರುತ್ತಾನೆಂದು **ಶ್ರುತಿ**ಯು ಹೇಳುತ್ತಿದೆ. ಶ್ರದ್ಧಾಭಕ್ತಿಯಿಂದ ಸದ್ಗುರುವನ್ನು ಸೇವಿಸಿ ತತ್ತ್ವದ ವಿಷಯಕ್ಕೆ ಸಂಶಯಗಳನ್ನು ಪರಿಹರಿಸಿಕೊಂಡವನ ಅವಿದ್ಯೆಯು ಸಂಪೂರ್ಣವಾಗಿ ಹೋಗುವದು. ಆಗ ಪರಮೇಶ್ವರ, ಸದ್ಗುರು, ತನ್ನ ಆತ್ಮ- ಎಲ್ಲವೂ ಆ ಪರಬ್ರಹ್ಮವೇ ಎಂಬ ನಿಜವು ಮನದಟ್ಟಾಗುವದು.

**೨೦೩.** ನಾನು, ನನ್ನದು- ಎಂಬ ಅಭಿಮಾನವು ಸಾತ್ತ್ವಿಕವಾಗಿದ್ದರೆ ಅದು ಬಂಧಕವಾಗುವದಿಲ್ಲ. ತನಗೂ ತನ್ನವರಿಗೂ ಹಿತವನ್ನು ಮಾಡುವಮಟ್ಟಿಗೆ ಈ ಅಭಿಮಾನ ವಿದ್ದರೆ ಒಳ್ಳೆಯದೇ ಆಗುವದು, ನಾನುನನ್ನದೆಂಬ ಅಭಿಮಾನವನ್ನು ಅವಲಂಬಿಸಿ ಪರರಿಗೆ ಕೇಡನ್ನು ಮಾಡುವವರು ಆಸುರಸಂಪತ್ತಿನವರೆಂದು ತಿಳಿಯಬೇಕು. ಅಂಥವರಿಗೆ ತೋರಿಕೆಯ ಅಭ್ಯುದಯವಾದರೂ ಕೊನೆಯಲ್ಲಿ ದುರ್ಗತಿಯೇ ಆಗುವದು. ಪರಮಾತ್ಮ ನಲ್ಲಿ ಆತ್ಮಸಮರ್ಪಣೆಯನ್ನು ಮಾಡಿಕೊಂಡಿರುವ ಮಹಾತ್ಮರಿಗೆ 'ನಾನು', 'ನನ್ನದು' ಎಂಬ ಮಾತುಗಳು **ಅರ್ಥಹೀನ**ವಾಗಿರುತ್ತವೆ.

**೨೦೪.** ಜೇನುಗೂಡಿಗೆ ಬೇರೆಬೇರೆಯ ನೊಣಗಳು ಬೇರೆಬೇರೆಯ ಹೂಗಳಿಂದ ತರುವ ಹೂವಿನ ರಸವೇ ಕೊನೆಗೆ ಜೇನುತುಪ್ಪವಾಗುವದು. ನಾವುಗಳೆಲ್ಲರೂ ಈ ವಿಶ್ವವೆಂಬ ಜೇನುಗೂಡಿಗೆ ಸೇರಿದ ಜೇನುನೊಣಗಳು. ನಮ್ಮನಮ್ಮ ಕರ್ತವ್ಯವನ್ನೂ ಬೇರೆಬೇರೆಯ ಕರ್ತವ್ಯವನ್ನೂ ಸರಿಯಾಗಿ ಮಾಡುವದರಿಂದಲೇ ಇಲ್ಲಿ ಮಧುರವಾದ **ಜೇನುತುಪ್ಪವು** ಏರ್ಪಡಬೇಕಾಗಿದೆ. ನಮ್ಮ ನಮ್ಮ ಕರ್ತವ್ಯವನ್ನು, ಸಂಗವನ್ನೂ ಫಲಾ ಸಕ್ತಿಯನ್ನೂ ಬಿಟ್ಟು ಮಾಡುವದಾದರೆ ಲೋಕಕ್ಕೂ ಕಲ್ಯಾಣವಾಗುವದು. ಹಾಗೆ ಮಾಡುವವರಿಗೆ ಪರಮಪುರುಷಾರ್ಥವಂತೂ ಕಟ್ಟಿಟ್ಟ ಬುತ್ತಿಯಾಗುವದು.

**೨೦೫. ಈಶ್ವರನು** ಯಾವಾಗಲೂ ಎಲ್ಲೆಲ್ಲಿಯೂ ಈಶ್ವರನೇ. ಆತನು ಸರ್ವಜ್ಞನು, ಸರ್ವಶಕ್ತನು, ಆನಂದಸ್ವರೂಪನು; ಎಲ್ಲರ ಆತ್ಮನು. ಆಸ್ತಿಕರಿಗೂ ನಾಸ್ತಿಕರಿಗೂ ಈಶ್ವರನು ಆತ್ಮನೇ ಆಗಿ ಈಗಲೂ ಅವರ ಹತ್ತಿರವೇ ಇರುತ್ತಾನೆ. 'ಭಗವಂತನು ಈಗಲೂ ಇಲ್ಲಿಯೇ ಇರುತ್ತಾನೆ ಎಂಬ ನಂಬಿಕೆಯನ್ನು ಗಟ್ಟಿಮಾಡಿ ಕೊಳ್ಳುವದಕ್ಕೆ ಪ್ರಯತ್ನಿಸಿದರೆ ಸಾಕು, ಈಶ್ವರನ ಅನುಗ್ರಹದ ಮಹಿಮೆಯು ಮನದಟ್ಟಾಗು ವದಕ್ಕೆ ಮೊದಲಾಗುವದು. ಈ ನಂಬಿಕೆಯಿಂದ ಮನಸ್ಸಿನಲ್ಲಿ ಉತ್ತಮವಾದ ಪರಿಣಾಮವಾಗಿ ಒಂದು ವಿಲಕ್ಷಣವಾದ ಆನಂದವು ತೋರಿಕೊಳ್ಳುವದಕ್ಕೆ ಮೊದಲಾಗುವದು.

೨೦೬. ಭಗವಂತನು ಚೈತನ್ಯದ ಸಾಗರವಿದ್ದಂತೆ ; ನಾವುಗಳೆಲ್ಲರೂ ಆ ಸಾಗರದಲ್ಲಿ ಸಂಚರಿಸುತ್ತಿರುವ ಮೀನುಗಳಿದ್ದಂತೆ . ಭಗವಂತನ ಇರವೇ ನಮ್ಮ ಇರವು, ಆತನ ಅರಿವೇ ನಮ್ಮಗಳ ಅರಿವು . ಮೀನುಗಳು ತಮ್ಮ ಎಡಕ್ಕೆ , ಬಲಕ್ಕೆ , ಹಿಂದೆ, ಮುಂದೆ, ಮೇಲೆ, ಕೆಳಗೆ- ಎಲ್ಲೆಲ್ಲಿಯೂ ಇರುವ ನೀರನ್ನು 'ಎಲ್ಲಿದೆ ' ಎನ್ನುವದು ಎಷ್ಟು ಹಾಸ್ಯಾಸ್ಪದವೋ, ಭಗವಂತನಲ್ಲಿಯೇ ನಮ್ಮ ಜೀವನದ ಉಸಿರನ್ನು ಪಡೆದುಕೊಂಡಿರುವ ನಾವೂ 'ಭಗವಂತನು ಎಲ್ಲಿದ್ದಾನೆ ?' ಎಂದು ಕೇಳುವದೂ ಅಷ್ಟೇ ಹಾಸ್ಯಾಸ್ಪದವಾಗಿರುತ್ತದೆ. ಆದ್ದರಿಂದ ಸಾಧಕನು 'ನಾನು ಭಗವಂತನಲ್ಲಿಯೇ ಇದೇನೆ ' ಎಂಬ ನಂಬಿಕೆಯನ್ನು ಗಟ್ಟಿಗೊಳಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಹಾಗಾದರೆ ಆವನಿಗೆ ತನ್ನ ಜೀವನದ **ಮಹಿಮೆ**ಯು ಎಷ್ಟೆಂಬುದು ಮನವರಿಕೆಯಾಗುವದು.

೨೦೭. ಈಶ್ವರನ ಚೈತನ್ಯಶಕ್ತಿಯಿಂದಲೇ ನಮ್ಮ ದೇಹವೂ ಒಳಗಿನ ಮತ್ತು ಹೊರಗಿನ ಕರಣಗಳೂ ವ್ಯಾಪ್ತವಾಗಿ ವ್ಯಾಪಾರಮಾಡುತ್ತಿರುವವು. ಈ ಶಕ್ತಿಯನ್ನು ಸಾಕ್ಷಿಚೈತನ್ಯ-ಎಂದೂ ಕರೆಯುವರು. ಭಗವಂತನೆಂಬ ಈ ಬೆಳಕು ಎಂದಿಗೂ **ನಂದದ ನಂದಾದೀಪ**. ಈ ಚೈತನ್ಯಜ್ಯೋತಿಯ ವ್ಯಾಪ್ತಿಯಿಂದಲೇ ನಮ್ಮಲ್ಲಿ ಜ್ಞಾನವು ತೋರಿಕೊಳ್ಳುತ್ತಿದೆ. ಇದನ್ನು ಮತ್ತೆಮತ್ತೆ ನೆನಪಿಸಿಕೊಳ್ಳುವವರಿಗೆ ಆ ಪರಮೇಶ್ವರನ ಪ್ರಸಾದದಿಂದ ಶ್ರೇಯಸ್ಸಾಗುವದು.

೨೦೮. ಮನುಷ್ಯನಿಗೆ ಸುಖದುಃಖಗಳು ಆಗಾಗ್ಗೆ ಬಂದುಹೋಗುತ್ತಿರುವವು. ಆದರೂ ಮನುಷ್ಯನಿಗೆ ಶಾಶ್ವತವಾದ ಸುಖವು ಬೇಕೆಂಬ ಹಂಬಲಿಕೆಯು ಇದ್ದೇ ಇರುತ್ತದೆ. ತಿಳಿದೋ ತಿಳಿಯದೆಯೋ ಜನರೆಲ್ಲರೂ ಎಡೆಬಿಡದೆ ದುಡಿಯುತ್ತಿರುವದು ಶಾಶ್ವತವಾದ ಸುಖಕ್ಕಾಗಿಯೇ. ಪರಮಾತ್ಮನು ನಿತ್ಯಾನಂದಸ್ವರೂಪವೇ ಆಗಿರುತ್ತಾನೆ. ನಮ್ಮಗಳ ಮನಸ್ಸು ಅವನ ಕಡೆಗೆ ತಿರುಗದೇ ಇರುವದರಿಂದ ವಿಷಯಗಳಿಂದಾಗುವ ಸುಖವೇ ಸುಖವೆಂದು ನಾವು ಭಾವಿಸುತ್ತಿರುವೆವು. ಒಳಹೊಕ್ಕು ನೋಡಿದರೆ ವಿಷಯಸುಖವೆಂಬುದೂ ಆತ್ಮಾನಂದದ **ತುಂತುರೇ** ಆಗಿರುತ್ತದೆ. ನಿತ್ಯಾನಂದವೇ ತಮಗೆ ಬೇಕೆನ್ನುವವರು ತಮ್ಮ ಆತ್ಮನಾದ ಭಗವಂತನ ಕಡೆಗೆ ತಿರುಗಬೇಕು.

೨೦೯. ದೇಶಕಾಲನಿಮಿತ್ತಗಳ ಕಟ್ಟಿಗೆ ಸಿಕ್ಕಿಕೊಂಡಿರುವ ಈ ಪ್ರಪಂಚದಲ್ಲಿ ಕರ್ಮದ ನಿಯಮವು ಸ್ವಲ್ಪವೂ ಸಡಿಲವಾಗದೆ ನಡೆಯುತ್ತಿರುವದು. ನಾವು ಮಾಡುವ ಒಳ್ಳೆಯ ಅಥವಾ ಕೆಟ್ಟಕರ್ಮಗಳಿಗೆ ಫಲವು ತಕ್ಕ ದೇಶದಲ್ಲಿ ಅಥವಾ ಕಾಲದಲ್ಲಿ ನಮಗೆ ಅವಶ್ಯವಾಗಿ ಆಗಿಯೇತೀರುವದು. ಈ ಲೋಕದಲ್ಲಿ ಕರ್ಮದ ಫಲವನ್ನುಣ್ಣದೆ ಇರುವದಕ್ಕೆ ಆಗುವದೇ ಇಲ್ಲ. ಆದರೆ ನಮ್ಮಗಳ ಪರಮಾರ್ಥಸ್ವರೂಪನಾಗಿರುವ ಆತ್ಮನು ಈ ದೇಶಕಾಲಾದಿಗಳ ಕಟ್ಟಿಗೆ ಹೊರಚ್ಚಾಗಿರುತ್ತಾನೆ. ಆ ಆತ್ಮನನ್ನು ಕಂಡುಕೊಂಡವರು **ನಿಷ್ಕರ್ಮರು.**

**೨೧೦.** ಪರಮಾತ್ಮನು ನಿರ್ಗುಣನೇ ಆಗಿದ್ದರೂ ಉಪಾಸಕರ ಸೌಕರ್ಯಕ್ಕಾಗಿ ಅನೇಕಗುಣಗಳಿಂದಲೂ ಕೂಡಿರುತ್ತಾನೆಂದೂ ಹಾಗೆಂತ ಉಪಾಸನೆಮಾಡಬೇಕೆಂದೂ ಶ್ರುತಿಯಲ್ಲಿ ವಿಧಿಸಿರುತ್ತದೆ. ನಿರ್ಗುಣರೂಪವೇ ಪರಮಾರ್ಥವಾದರೂ ವ್ಯವಹಾರ ದೃಷ್ಟಿಯಿಂದ ಸಗುಣರೂಪವೂ ಸತ್ಯವೇ ಆಗಿರುತ್ತದೆ. ಪರಮಾರ್ಥವಾದ ನಿರ್ಗುಣ ರೂಪವನ್ನು ಕಂಡುಕೊಂಡು **ಆತ್ಮರತಿ**ಗಳಾಗಿರುವ ಮಹಾತ್ಮರು ಕೂಡ ಸಗುಣರೂಪ ದಲ್ಲಿಯೂ ನಿಷ್ಕಾಮಭಕ್ತಿಯನ್ನು ಮಾಡುತ್ತಾರೆ : ಏಕೆಂದರೆ ಭಗವಂತನ ಕಲ್ಯಾಣ ಗುಣಗಳು ಅಂಥವರ ಚಿತ್ತವನ್ನು ಕೂಡ ಆಕರ್ಷಿಸುತ್ತಿರುವವು.

**೨೧೧.** ದೇವರು ಎಲ್ಲಿದ್ದಾನೆ? ಎಂದು ಕೇಳುತ್ತಾ ಕಾಲಹರಣವನ್ನು ಮಾಡದಿರಿ. ಅವನು ಎಲ್ಲಾ ಜೀವರ ಹೃದಯದಲ್ಲಿಯೂ ಇರುವಂತೆ ನಿಮ್ಮ ಹೃದಯದಲ್ಲಿಯೂ ಇರುತ್ತಾನೆ. ನಿಮ್ಮ ಇಂದ್ರಿಯಗಳ ಮತ್ತು ಮನಸ್ಸಿನ **ಹರಿದಾಟ**ವನ್ನು ನಿಲ್ಲಿಸಿಕೊಂಡು ನಿಮ್ಮೊಳಗೇ ನೀವು ನೋಡಿಕೊಂಡರೆ ಆತನು ನಿಮ್ಮ ಆತ್ಮನಾಗಿಯೂ ಕಾಣಿಸುತ್ತಾನೆ. ಹಾಗೆ ಕಂಡಬಳಿಕ ಇಡಿಯ ಪ್ರಪಂಚರೂಪದಿಂದ ಕಾಣಿಸುತ್ತಿರುವವನೂ ಆತನೇ ಎಂಬ ಸತ್ಯವೂ ನಿಮಗೆ ಮನದಟ್ಟಾಗುವದು. ಅಂದಿನಿಂದ ನಿತ್ಯಸುಖವು ನಿಮ್ಮದಾಗುವದು.

**೨೧೨.** ಪರಮಾತ್ಮನು ಸಗುಣನೊ, ನಿರ್ಗುಣನೊ - ಎಂದು ವಾದಿಸುತ್ತಾ ಕಾಲ ಹರಣಮಾಡುವದರಿಂದ ಯಾವ ಫಲವೂ ಆಗಲಾರದು. ಭಾವಪ್ರಧಾನರಾದ ಅಧಿಕಾರಿಗಳು ಉಪಾಸನೆಯಿಂದ ಸಗುಣಬ್ರಹ್ಮವನ್ನು ಈ ಜನ್ಮದಲ್ಲಿಯೇ ಸಾಕ್ಷಾತ್ಕರಿಸಿ ಕೊಂಡು ದೇಹವನ್ನು ಬಿಟ್ಟ ಬಳಿಕ ಆತನ ಸಾಯುಜ್ಯವನ್ನು ಪಡೆಯಬಹುದು. ವಿಚಾರ ಶಕ್ತಿಯಿಂದಲೂ ಶಮದಮಾದಿಸಾಧನಸಂಪತ್ತಿನಿಂದಲೂ ಕೂಡಿದವರು ಶಾಸ್ತ್ರಾಚಾರ್ಯರ ಉಪದೇಶದಿಂದ ಈ ಜನ್ಮದಲ್ಲಿಯೇ ಪರಮಾತ್ಮನು ನಮ್ಮೆಲ್ಲರ ಆತ್ಮನೆಂಬುದನ್ನು ಅನುಭವಕ್ಕೆ ತಂದುಕೊಳ್ಳಬಹುದು. ಬರಿಯ **ವಾದ**ಕ್ಕಿಂತ ಸಾಧನಕ್ಕೆ ಇಲ್ಲಿ ಬೆಲೆ ಹೆಚ್ಚು.

**೨೧೩.** ಧರ್ಮರಕ್ಷಣೆಗಾಗಿ ತೆಗೆದುಕೊಳ್ಳುವ ರೂಪ, ಮತ್ತು ಭಕ್ತರನ್ನು ಉದ್ಧರಿಸುವದಕ್ಕಾಗಿ ಆಯಾ ಕಾಲಕ್ಕೆ ತೆಗೆದುಕೊಳ್ಳುವ ರೂಪ- ಎಂಬ ಎರಡು ತಾತ್ಕಾಲಿಕರೂಪಗಳೇ ಅಲ್ಲದೆ ಪರಮಾತ್ಮನಿಗೆ ಸ್ವಭಾವವಾಗಿಯೇ ಎಂದೆಂದಿಗೂ ಇದ್ದು ಕೊಂಡಿರುವ ನಿರ್ವಿಶೇಷ, ನಿರಾಕಾರ, **ನಿರ್ಗುಣ**ರೂಪವೂ ಇದೆ. ಆತನ ನಿರಾಕಾರ **ನಿರ್ಗುಣ**ರೂಪವನ್ನು ಇಂದ್ರಿಯಾದಿಗಳಿಂದ ಕಾಣುವದಾಗಲಾರದು. ಆತನೇ ನಮ-ಗೆಲ್ಲರಿಗೂ ಪರಮಾರ್ಥಾತ್ಮನು ಎಂದು ಅನುಭವದಿಂದ ಕಂಡುಕೊಳ್ಳುವದೇ ಜ್ಞಾನಿಗಳಿಗೆ ಆಗುವ ಆತ್ಮದರ್ಶನ.

**೨೧೪.** ಚಿತ್ತಶುದ್ಧಿಯು ಎರಡು ಬಗೆ. ನಮ್ಮ ಅಂತಃಕರಣದಲ್ಲಿ ರಾಗದ್ವೇಷಾದಿ ಕಲ್ಮಷಗಳಿಲ್ಲದೆ ಇರುವದು ಒಂದು ಬಗೆ. ಅದು ಒಳಮುಖವಾಗಿ ಏಕಾಗ್ರತೆಯಿಂದ ನಿಲ್ಲುವಂತಾಗುವದು ಎರಡನೆಯ ಬಗೆ. ಆತ್ಮಜ್ಞಾನವೆಂದರೆ ವಿಷಯಗಳನ್ನು ಅರಿಯು

ವಂತೆ ಬುದ್ಧಿಯಿಂದ ಆತ್ಮಸ್ವರೂಪವನ್ನು ನಿಶ್ಚಯಿಸುವದಲ್ಲ. ಏಕೆಂದರೆ ಆತ್ಮನು ಬುದ್ಧಿಗೂ ಸಾಕ್ಷಿಯಾಗಿರುತ್ತಾನೆ. ಆದ್ದರಿಂದಲೇ ಮನೋಬುದ್ಧಿಗಳು ಅವನನ್ನು ವಿಷಯಿಕರಿಸಲಾರವು. ಹಾಗಾದರೆ ಬುದ್ಧಿಯಿಂದ ಆತ್ಮನನ್ನು ಅರಿತುಕೊಳ್ಳುವದು ಹೇಗೆ? ಎಂದರೆ ಯಮನಿಯಮಾದಿಗಳಿಂದ ಚಿತ್ತವನ್ನು ಶುದ್ಧಿಮಾಡಿಕೊಂಡು ತನ್ನಲ್ಲಿ ತಾನು ನೋಡಿಕೊಂಡಾಗ ಆತ್ಮನಲ್ಲಿಯೇ ಅಂತಃಕರಣವು ಕರಗಿ ಜ್ಞಾತೃಜ್ಞಾನಜ್ಞೇಯ ವಿಭಾಗವಿಲ್ಲದೆ ಆಗುವ **ವಿಲಕ್ಷಣವಾದ** ಅನುಭವವದು.

**೨೧೫.** ಪರಮಾತ್ಮನ ತತ್ತ್ವವನ್ನು ಸರಿಯಾಗಿ ಅರಿತುಕೊಳ್ಳದೆ ನಮ್ಮ ಆತ್ಮನಲ್ಲಿ ಸಂಸಾರದ ಧರ್ಮಗಳನ್ನು ಹುಟ್ಟಿಹಾಕಿಕೊಂಡಿರುವದೇ **ಅವಿದ್ಯೆ.** ಅವಿದ್ಯೆಯಿಂದಲೇ ನಮ್ಮ ಹೊರಗಿನ ವಿಷಯಗಳ ಕಡೆಗೆ ಧಾವಿಸುವಂತೆ ಮಾಡುವ **ಕಾಮವು** ಮೂಡಿಕೊಂಡಿರುತ್ತದೆ. ಆ ಕಾಮದಿಂದ ಬಗೆಬಗೆಯ **ಕರ್ಮ**ಗಳನ್ನು ಮಾಡಿ ನಾವು ವಿಧವಿಧವಾದ ಶರೀರಗಳನ್ನು **ಧರಿಸಿ ಮರ್ತ್ಯ**ರಾಗಿರುವೆವು. ನಿಜವಾದ ನಮ್ಮ ಆತ್ಮನ ಸ್ವರೂಪವನ್ನು ಅರಿತುಕೊಳ್ಳುವ ವಿದ್ಯೆಯು ಬಂದೊಡನೆ ನಮ್ಮ ಸ್ವರೂಪದಲ್ಲಿ ಮುಪ್ಪು, ಕುಂದು, ಅಂಜಿಕೆ- ಇವು ಯಾವವೂ ಇಲ್ಲವೆಂದೂ ನಾವು ಎಂದೆಂದಿಗೂ **ಅಮೃತ** ಸ್ವರೂಪರಾದ ಬ್ರಹ್ಮವೇ ಎಂದೂ ಮನಗಾಣುವೆವು.

**೨೧೬.** ಮಹರ್ಷಿಗಳಿಗೂ ದೇವತೆಗಳಿಗೂ ಜ್ಞಾನವನ್ನು ಅನುಗ್ರಹಿಸುವಾತನೂ ಪರಮಾತ್ಮನೇ. ಆತನೇ ನಮಗೂ ಆತ್ಮನಾಗಿರುತ್ತಾನೆ. ಆತನನ್ನು ನಿರಂತರವೂ ಪ್ರೀತಿ ಪೂರ್ವಕವಾಗಿ ಭಜಿಸುವವರಿಗೆ **ಶುಭಮತಿ**ಯು ಬರುವದು.

**೨೧೭.** 'ಇಡಿಯ ವಿಶ್ವವೂ ನಾನೂ ಪರಮಾತ್ಮನ ವಿಭೂತಿಯಾಗಿರುತ್ತೇವೆ. ನಮ್ಮ ಬುದ್ಧಿವೃತ್ತಿಗಳೆಲ್ಲವೂ ಆತನ ಅನುಗ್ರಹದಿಂದಲೇ **ಚಿಮ್ಮುತ್ತಿರುವವು**'- ಹೀಗೆಂಬ ಮಂಗಲಭಾವನೆಯು ಮನದಲ್ಲಿ ನೆಲಸಿರುವಂತೆ ಆ ಭಗವಂತನು ಕರುಣಿಸಲಿ! ಎಂದು ದಿನದಿನವೂ ಪ್ರಾರ್ಥಿಸಿಕೊಳ್ಳಿರಿ.

**೨೧೮.** ಜನರ ಹಸಿವುನೀರಡಿಕೆಗಳನ್ನು ಕಳೆಯುವದು ಒಂದು ಮಹಾಪುಣ್ಯದ ಕೆಲಸವು. ಜೀವನಕ್ಕೆ ಅವಶ್ಯಕವಾದ ಮಿಕ್ಕ ಪದಾರ್ಥಗಳನ್ನು ಒದಗಿಸಿಕೊಡುವದೂ ಪುಣ್ಯದ ಕೆಲಸವೇ ಸರಿ. ಆದರೆ ಎಲ್ಲಾ ಅವಶ್ಯಕತೆಗಳೂ ಪೂರೈಸಿರುವವರೂ ಕೂಡ ಅವಿದ್ಯೆ ಎಂಬ ಹಸಿವಿನಿಂದಲೂ ತೃಷ್ಣೆ- ಎಂಬ ನೀರಡಿಕೆಯಿಂದಲೂ ಬಳಲುತ್ತಿರುತ್ತಾರೆ. ಈ ಹಸಿವುನೀರಡಿಕೆಗಳನ್ನು ನೀಗಿಸಿ **ನಿತ್ಯತೃಪ್ತಿ**ಯನ್ನು ಕೊಡುವ ಜ್ಞಾನಾಮೃತವು ಅವರವರ ಪ್ರಯತ್ನದಿಂದಲೇ ಲಭಿಸುವದೆಂಬ ತಿಳಿವಳಿಕೆಯನ್ನು ಕೊಡುವ ಸತ್ಪುರುಷರ ಸಂಗವನ್ನು ಏರ್ಪಡಿಸಿಕೊಡುವದು ಸಮಾಜದ ಪರಮಕರ್ತವ್ಯವಾಗಿರುತ್ತದೆ.

**೨೧೯.** ಲೌಕಿಕಸ್ವಾತಂತ್ರ್ಯಕ್ಕೂ ಆಧ್ಯಾತ್ಮಿಕಸ್ವಾತಂತ್ರ್ಯಕ್ಕೂ ಬಹಳ ವೈಲಕ್ಷಣ್ಯವಿದೆ. ಲೌಕಿಕದೃಷ್ಟಿಯಿಂದ ಸ್ವತಂತ್ರರಾಗಿರುವೆವೆನ್ನುವವರೂ ತಮ್ಮ ಸ್ವಾತಂತ್ರ್ಯವನ್ನು ದುರುಪ-

ಯೋಗಪಡಿಸಿಕೊಳ್ಳುವಂತೆ ಪ್ರೇರೇಪಿಸುವ ರಾಗದ್ವೇಷಾದಿಗಳಿಂದ ಬದ್ಧರಾಗಿರುತ್ತಾರೆ. **ಆಧ್ಯಾತ್ಮಿಕಸ್ವಾತಂತ್ರ್ಯ**ವುಳ್ಳವರು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಪರಮಾತ್ಮನೇ ತಾವೆಂಬ ಅನುಭವವನ್ನು ಪಡೆದುಕೊಂಡು ಆನಂದದಿಂದಿರುತ್ತಾರೆ.

**೨೨೦.** ಯಜ್ಞ, ದಾನ, ತಪಸ್ಸು- ಎಂಬಿವೇ ಮುಂತಾದ ಸಾಧನಗಳು ಸಾಧಕರಿಗೆ ಫಲವನ್ನು ಕೊಡುವವೆಂಬುದು ವ್ಯವಹಾರದೃಷ್ಟಿಮಾತ್ರ. ನಿಜವಾಗಿ ಪರಮಾತ್ಮನೇ ಸರ್ವ ಸಾಧನಗಳಿಗೂ ಫಲವನ್ನು ಕೊಡುವಾತನು. ಕರ್ಮಿಗಳು, ಅವರಿಗೆ ಫಲವನ್ನು ಕೊಡುವ ದೇವತೆಗಳು- ಇಬ್ಬರಿಗೂ ಆತ್ಮನಾಗಿರುವ ಸರ್ವಸಾಕ್ಷಿಯಾದ ಭಗವಂತನೇ ಸರ್ವಸಾಧನಗಳ **ಹೆಗ್ಗುರಿ**- ಎಂಬುದನ್ನು ಮರೆಯದೆ ಇರಬೇಕು.

**೨೨೧.** ಅವಿದ್ಯೆ, ಕಾಮ, ಕರ್ಮ, ಜನ್ಮ- ಎಂಬ ನಾಲ್ಕು ಬಗೆಯ ಬಂಧಗಳಿಂದ ಬಿಡುಗಡೆಯಾಗಬೇಕೆಂದು ಹಂಬಲಿಸುವವರು **ಮುಮುಕ್ಷು**ಗಳೆನಿಸುವರು. ಮುಮುಕ್ಷುಗಳು ಮಾಡುವ ಸಾಧನವು ಸಫಲವಾಗುವದಕ್ಕೂ ಜ್ಞಾನವು ಉದಯವಾಗಿ ಪರಮ ಪುರುಷಾರ್ಥವು ಲಭಿಸುವದಕ್ಕೂ ಭಗವದ್ಭಕ್ತಿಯೇ ಕಾರಣವಾಗಿರುತ್ತದೆ.

**೨೨೨.** ಏಕಾಂತವಾಸವೆಂದರೆ 'ಪರಮಾತ್ಮನೊಬ್ಬನೇ ಇರುವಾತನು, ಆತನೊಬ್ಬನೇ ನಮ್ಮೆಲ್ಲರ ಆತ್ಮನು; ಈ ಜಗತ್ತೆಲ್ಲವೂ ಆತ್ಮನೇ' ಎಂಬ ಭಾವವು ಹೃದಯದಲ್ಲಿ **ಉಕ್ಕೇರು**ವದಕ್ಕೆ ಅನುಕೂಲವಾಗಿರುವ ಸ್ಥಲವು. ಕುಟುಂಬದ ಹೊಣೆಗಾರಿಕೆಯಿಲ್ಲದ ಸಾಧು, ಸಂನ್ಯಾಸಿಗಳು, ಬೆಟ್ಟ, ಗವಿ- ಮುಂತಾದ ವಿಜನಪ್ರದೇಶಗಳಲ್ಲಿದ್ದು ಪರಮಾತ್ಮನ ಚಿಂತೆಮಾಡುತ್ತಿರಬಹುದು. ಗೃಹಸ್ಥರಾದವರು ತಮ್ಮತಮ್ಮ ಕರ್ತವ್ಯವನ್ನು ನೆರವೇರಿಸುವದೇ ಭಗವಂತನ ಸೇವೆಯೆಂಬ ಭಾವನೆಯಿಂದ ಏಕಾಂತವಾಸದ ಸುಖವನ್ನು ಪಡೆದುಕೊಳ್ಳಬಹುದು. ಮುಮುಕ್ಷುಗಳಾದ ಜಿಜ್ಞಾಸುಗಳು ಸತ್ಪುರುಷರ ಆಶ್ರಯದಿಂದಲೂ ಅದೇ ಫಲವನ್ನು ಪಡೆದುಕೊಳ್ಳಬಹುದು.

**೨೨೩.** ಭಗವಂತನೇ ನಮ್ಮೆಲ್ಲರ ಆತ್ಮನು. **ಆತ್ಮಲಾಭ**ಕ್ಕಾಗಿಯೇ ಜೀವಿಸಿರಬೇಕು. ಭಗವಂತನ ಪ್ರೀತಿಗೆಂದೇ ಕರ್ಮವನ್ನು ಮಾಡಿರಿ. ಭಗವಂತನಲ್ಲಿಯೇ ಪ್ರೇಮವನ್ನಿಟ್ಟಿರಿ. ಭಗವಂತನೇ ಸರ್ವಭೂತಗಳಲ್ಲಿಯೂ ನೆಲಸಿರುವನೆಂದು ನಂಬಿರಿ. ಆಗ ನಿಮಗೆ ಭಗವತ್ಪ್ರಾಪ್ತಿಯು ಆಗಬೇಕಾದದ್ದಿರುವದಿಲ್ಲ; ಅವನಲ್ಲಿಯೇ ನೀವು ನೆಲೆನಿಂತಿರುವಿರಿ.

**೨೨೪.** ನಮ್ಮ ನಮ್ಮ ಕರ್ತವ್ಯಕರ್ಮಗಳನ್ನು ಪರಮೇಶ್ವರನ ಅರ್ಚನೆಯೆಂದು ಭಾವಿಸುತ್ತಾ ಮಾಡಿದರೆ ನಮಗೆ ಆ ಕರ್ಮಗಳ ಅಲ್ಪಫಲಕ್ಕೆ ಬದಲಾಗಿ **ಚಿತ್ತಶುದ್ಧಿ** ಎಂಬ ಮಹಾಫಲವು ಲಭಿಸಿ ಜ್ಞಾನಪ್ರಾಪ್ತಿಗೆ ಯೋಗ್ಯತೆಯು ಲಭಿಸುವದು. ನಾವು ಮಾಡುವ ಕರ್ಮಕ್ಕೆ ಈ ಮಹಾಫಲವು ಸಿಕ್ಕೀತೋ ಇಲ್ಲವೋ- ಎಂದು ಶಂಕಿಸುವದಕ್ಕೆ ಕಾರಣವಿಲ್ಲ. ಏಕೆಂದರೆ ಪರಮಾತ್ಮನು ಸರ್ವವ್ಯಾಪಿಯೂ ಸಕಲಕ್ರಿಯಾಕಾರಕಪಲಗಳನ್ನೂ ಸಂವಿಧಾನ ಮಾಡಬಲ್ಲ ಸರ್ವಜ್ಞನೂ ಸರ್ವಶಕ್ತನೂ ದಯಾಳುವೂ ಆಗಿರುತ್ತಾನೆ.

**೨೨೫.** ನಮ್ಮ ಪರಮಾರ್ಥಸ್ವರೂಪದ ಲಕ್ಷಣವೇನು?- ಎಂಬುದನ್ನು ಬಾಹ್ಯಪ್ರಪಂಚದ ತತ್ತ್ವವನ್ನು ಹುಡುಕುವಂತೆ ನಿರೀಕ್ಷಣಪರೀಕ್ಷಣಸಂವಾದೀಕರಣಗಳಿಂದ ಹುಡುಕಿ ಅರಿಯುವದಕ್ಕೆ ಆಗುವದಿಲ್ಲ. ಏಕೆಂದರೆ ಆತ್ಮತತ್ತ್ವವು ಎಲ್ಲಕ್ಕೂ ಒಳಗಿರುವ ಅತೀಂದ್ರಿಯವಸ್ತು. ಯಾವ ಪ್ರಮಾಣಕ್ಕೂ ವಿಷಯವಲ್ಲದ್ದು. ಇದನ್ನು ಅರಿಯುವದಕ್ಕೆ ನಮಗೆ ಅಮಾನಿತ್ವವೇ ಮುಂತಾದ ಜ್ಞಾನಸಾಧನಗಳು ಬೇಕು. ಬಾಹ್ಯವಿಷಯಗಳ ಭೋಗಕ್ಕೆ ಹರಿದಾಡುವ ಮನಸ್ಸನ್ನು ಜಗ್ಗಿ ಈ ನಿವೃತ್ತಿಧರ್ಮವನ್ನೇ ಅನುಸರಿಸುವ ಹವಣಿಕೆ ಬೇಕು. ಎಲ್ಲಕ್ಕೂ ಮೇಲಾಗಿ ನಮಗೆ ಇಂದ್ರಿಯಗೋಚರವಾಗಿರುವ ಸರ್ವಪ್ರಪಂಚವೂ ಭಗವಂತನೇ ಎಂಬ **ಶುಭಭಾವನೆ**ಯು ಅಳವಟ್ಟಿರಬೇಕು.

**೨೨೬.** ಅಂತಃಕರಣವು ತನ್ನ ಹೆಸರಿಗೆ ತಕ್ಕಂತೆ ಇರಬೇಕಾದರೆ ಹೊರಗಿನ ವಿಷಯಗಳು ಚಿತ್ತದಲ್ಲಿ ಹರಿದಾಡಬಾರದು. ತನ್ನ ಒಳಗೇ ಇದ್ದುಕೊಂಡು ತನ್ನನ್ನು ಬೆಳಗುತ್ತಿರುವ ಆತ್ಮಸ್ವರೂಪವನ್ನು ಅರಿತುಕೊಳ್ಳುವದಕ್ಕೇ ಅದು **ಹವಣಿಸ**ಬೇಕು. ಉತ್ತಮಸಂಸ್ಕಾರಗಳಿಂದ ಕೂಡಿರುವ ಅಂತಃಕರಣವು ಆತ್ಮನನ್ನು ಅರಿಯುವದಕ್ಕೆ ಪ್ರಯತ್ನಮಾಡುವಾಗ ಆತ್ಮನಲ್ಲಿಯೇ ಕರಗಿ ಮೈಗರೆಯುತ್ತದೆ. ಆಗ ಅದು ತಾನೂ ಆತ್ಮನಾಗಿಬಿಡುತ್ತದೆ. ಈ ರೀತಿಯಾಗಿ ಆತ್ಮನಲ್ಲಿ ಮುಳುಗಿ ಮತ್ತೆ ಎದ್ದುಕೊಳ್ಳುವ ಮನಸ್ಸು ನೋಡುವದಕ್ಕೆ ಮೊದಲಿನಂತೆಯೇ ಇದ್ದರೂ 'ಎಲ್ಲವೂ ಆತ್ಮನೇ, ನಾನೂ ಆತ್ಮನೇ'- ಎಂಬ ಉತ್ತಮತತ್ತ್ವವನ್ನು ಅರಿತುಕೊಂಡಿರುತ್ತದೆ.

**೨೨೭.** ಸಾಮಾನ್ಯಜನರಿಗೆ ತಮ್ಮ ನಿಜವಾದ ಸ್ವರೂಪವು ಯಾವದೆಂಬುದು ತಿಳಿಯದು. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳಲ್ಲಿ ಒಂದೊಂದನ್ನು ಒಬ್ಬೊಬ್ಬರೂ ತಮ್ಮ ಆತ್ಮನೆಂದು ಭಾವಿಸಿಕೊಂಡಿರುವಂತೆ ಅವರವರ ವ್ಯವಹಾರದಿಂದ ತಿಳಿದುಬರುತ್ತದೆ. ವೇದೋಕ್ತಕರ್ಮಗಳನ್ನು ಮಾಡಿ ಜನ್ಮಾಂತರಗಳಲ್ಲಿ ಅಥವಾ ಲೋಕಾಂತರಗಳಲ್ಲಿ ಅವುಗಳ ಫಲವನ್ನು ಪಡೆಯುವೆವೆಂದು ಶಾಸ್ತ್ರಾಧಾರದಿಂದ ಜನರು ನಂಬಿಕೊಂಡಿರುವ ಜೀವಾತ್ಮನೂ ನಿಜವಾದ ಆತ್ಮನಲ್ಲ. ಎಲ್ಲ ಪ್ರಾಣಿಗಳಿಗೂ ಇಡಿಯ ಜಗತ್ತಿಗೂ ಆತ್ಮನೆನಿಸಿರುವವನೇ ಪರಮಾತ್ಮನು. ಆತನ ಸ್ವರೂಪವನ್ನು ತಿಳಿದುಕೊಂಡದ್ದರಿಂದಲೇ ವೇದಾಂತದಲ್ಲಿ ಹೇಳಿರುವ **ಪರಮಪುರುಷಾರ್ಥವು** ಲಭಿಸೀತು.

**೨೨೮. ಉಪಾಸನೆ** ಎಂದರೆ ಉಪಾಸ್ಯವಾಗಿರುವ ದೇವತೆಗೇ ಮನಸ್ಸನ್ನು ಸಂಬಂಧಿಸಿಕೊಂಡು ಎಡೆಬಿಡದೆ ಭಾವನಾಸಂತಾನವನ್ನು ಹರಿಯಿಸುವದು. ಭಗವಂತನ ಮಹಿಮೆಯನ್ನು ಅರಿತುಕೊಂಡು ಪ್ರೇಮಪರವಶನಾಗಿ ಆತನ ಚಿಂತನೆಯಲ್ಲಿಯೇ ಇದ್ದರೆ ಭಗವದುಪಾಸನೆ-ಎನಿಸುವದು. ಉಪಾಸನೆಯು ಕರ್ಮಕ್ಕಿತಲೂ ಹೆಚ್ಚು ಅಂತರಂಗವಾದ ಸಾಧನವಾಗಿರುತ್ತದೆ. ಮಿಕ್ಕ ದೇವತೆಗಳನ್ನು ಉಪಾಸನೆಮಾಡುವವರು ಆಯಾ ಉಪಾಸನೆಗೆ

ತಕ್ಕಂತೆ ಅಲ್ಪಫಲವನ್ನು ಪಡೆಯುವರು. ಆದರೆ ಭಗವಂತನನ್ನೇ ಉಪಾಸನೆಮಾಡುವವರು ಪರಮಪುರುಷಾರ್ಥಕ್ಕೇ ಅರ್ಹರಾಗುವರು.

**೨೨೯.** ಪರಮಾತ್ಮನು ಸ್ವತಃ ನಿರ್ಗುಣನೂ ನಿರಾಕಾರನೂ ಆಗಿದ್ದರೂ ಸಾಧಕರನ್ನು ಅನುಗ್ರಹಿಸುವದಕ್ಕಾಗಿ ತನ್ನ ಮಾಯಾಶಕ್ತಿಯಿಂದ ಸಗುಣರೂಪನೂ ಸಾಕಾರನೂ ಆಗಿ ತೋರಿಕೊಳ್ಳಬಲ್ಲನು. ಆತನು ಯಾವಯಾವ ಗುಣಗಳಿಂದ ಕೂಡಿದವನೆಂದು ಉಪಾಸನೆಮಾಡಬೇಕೆಂದು ಶಾಸ್ತ್ರದಲ್ಲಿ **ವಿಧಿ**ಸಿರುತ್ತದೆಯೋ ಅದರಂತೆ ಉಪಾಸನೆಮಾಡುವವರಿಗೆ ಅವರವರ ಉಪಾಸನೆಗೆ ಅನುಗುಣವಾದ ಫಲವನ್ನು ಆತನು ಅನುಗ್ರಹಿಸುವನು.

**೨೩೦.** ಭಗವಂತನು ಧರ್ಮದ ಉದ್ಧಾರಕ್ಕಾಗಿಯೂ ಅಧರ್ಮದ ನಾಶಕ್ಕಾಗಿಯೂ ಭೂಮಿಯ ಮೇಲೆ ಮಾನುಷಶರೀರವನ್ನು ಧರಿಸಿದಂತೆ ತೋರಿಕೊಳ್ಳುತ್ತಾನೆ. ಲೋಕಾನುಗ್ರಹಕ್ಕಾಗಿ ಮಾಡಿರುವ ಅವತಾರಗಳಲ್ಲಿ ಶ್ರೀರಾಮ, ಶ್ರೀಕೃಷ್ಣ- ಇವೆರಡೂ ಬಹುಮುಖ್ಯವಾದವುಗಳು. ಶ್ರೀರಾಮನ ಚರಿತ್ರೆಯು ಶ್ರೀಮದ್ರಾಮಾಯಣದಲ್ಲಿಯೂ ಶ್ರೀಕೃಷ್ಣಭಗವಂತನ ಚರಿತ್ರೆಯು ಭಾರತ-ಭಾಗವತಗಳಲ್ಲಿಯೂ ಅಡಕವಾಗಿವೆ. ಆ ಗ್ರಂಥಗಳನ್ನು ಓದಿ ಭಗವಂತನಲ್ಲಿ ಅಚಲವಾದ ನಂಬಿಕೆಯನ್ನೂ ಭಕ್ತಿಯನ್ನೂ ಸಂಪಾದಿಸಿಕೊಳ್ಳುವದು ಸನಾತನಧರ್ಮದ ಅನುಯಾಯಿಗಳೆಲ್ಲರಿಗೂ **ಶ್ರೇಯಃಪ್ರದ**ವಾಗಿರುತ್ತದೆ. ಭಗವಂತನನ್ನು ಉಪಾಸನೆಮಾಡುವ ಪ್ರಕಾರವನ್ನು ಸತ್ಸಂಗದಿಂದ ತಿಳಿದುಕೊಳ್ಳಿರಿ.

**೨೩೧.** ಪರಮೇಶ್ವರನು ಸ್ವರೂಪದಿಂದ ನಿರ್ಗುಣನೂ ನಿರಾಕಾರನೂ ಆಗಿರುತ್ತಾನಾದರೂ ಸಾಧಕರ ಮೇಲಿನ ಕರುಣೆಯಿಂದ ರಾಮಕೃಷ್ಣಾದ್ಯವತಾರಗಳ ಮೂಲಕ ಸಾಕಾರನಾಗಿ ಅವರನ್ನು ಅನುಗ್ರಹಿಸುತ್ತಾನೆ. ಸಾಕಾರಭಗವಂತನ ಅರ್ಚನೆ, ಆತನ ಗುಣಕರ್ಮಲೀಲೆಗಳನ್ನು ಸೂಚಿಸುವ ಆತನ ನಾಮದ ಜಪ, ಎಲ್ಲರ ಹೃದಯದಲ್ಲಿಯೂ ಇರುವ ಭಗವಂತನು ಸುಪ್ರೀತನಾಗುವಂತೆ ದಾನಧರ್ಮಪರೋಪಕಾರಗಳಲ್ಲಿ ನಿರತನಾಗಿರುವದು- ಈ ಉಪಾಯಗಳಿಂದ ನಾವು ಭಗವಂತನನ್ನು ಉಪಾಸನೆಮಾಡಿ **ಕೃತಾರ್ಥ**ರಾಗಬೇಕು.

**೨೩೨.** ಭಗವಂತನು ತನ್ನ ಮೂಲರೂಪದಲ್ಲಿ ನಾಮರೂಪರಹಿತನಾಗಿರುತ್ತಾನೆ. ಅವನನ್ನು ಯಾವ ಹೆಸರಿನಿಂದಲೂ ಕರೆಯುವದಕ್ಕೆ ಬರುವಂತಿಲ್ಲ. ಆದರೂ ಅಪಾರ ಕರುಣೆಯಿಂದ ಆತನು ಅನಂತನಾಮರೂಪಗಳನ್ನು ಧರಿಸಿ ತೋರಿಕೊಂಡಿರುತ್ತಾನೆ. ಆದ್ದರಿಂದ ನಾವು ಆತನ ದಿವ್ಯನಾಮಗಳ ಸಂಗ್ರಹವಾದ **ಸ್ತೋತ್ರ**ಗಳನ್ನು ಪಠಿಸಿ ಶ್ರವಣಮಾಡಿ ಮನಸ್ಸಿನಲ್ಲಿ ಅರ್ಥವನ್ನು ಮೆಲುಕಾಡಿ ಧನ್ಯರಾಗಬೇಕು.

**೨೩೩.** ಭಗವಂತನ ಗುಣಕರ್ಮಲೀಲೆಗಳನ್ನು ನೆನಪಿಗೆ ತರುವ ನಾಮಗಳನ್ನು ಅರ್ಥಾನುಸಂಧಾನಸಮೇತವಾಗಿ ಜಪಿಸುವವರ ಮನಸ್ಸಿನಲ್ಲಿ ಅವರವರ ಅಧಿಕಾರಕ್ಕೆ ತಕ್ಕಂತೆ ಸದ್ವಾಸನೆಗಳು ಬೇರೂರುವವು. ಸದ್ಬುದ್ಧಿ, ಬಲ, ಧನಸಂಪತ್ತು, ಸುಖಸಮೃದ್ಧಿ-ಇವೆಲ್ಲವೂ ಭಗವನ್ನಾಮದ ಸ್ಮರಣೆಯಿಂದ ಅಳವಡುವವು. ನಮ್ಮ ಅಲ್ಪತನದ ದುರ್ಭಾವನೆಯು ತೊಲಗಿ ಭಗವಂತನೇ ನಮ್ಮೆಲ್ಲರ ಆತ್ಮನೆಂಬ **ಶುಭಚಿಂತನೆ**ಯು ಅಂಕುರಿಸುವದು.

**೨೩೪.** ನಾಮರೂಪಗಳ ಆಕಾರದಿಂದ ತೋರಿಕೊಳ್ಳುತ್ತಿರುವ ಇಡಿಯ ಜಗತ್ತೇ ಭಗವಂತನ ವಿಭೂತಿಯು. ಆದರಲ್ಲಿಯೂ ರೂಪಕ್ಕಿಂತಲೂ ನಾಮವು ಹೆಚ್ಚು ವ್ಯಾಪಕವಾಗಿರುತ್ತದೆ. ಏಕೆಂದರೆ ಭಗವಂತನ' ಲೀಲಾವಿಗ್ರಹದ ರೂಪವು ಕಣ್ಮರೆಯಾದ ಮೇಲೂ ನಾಮವು ಜನರಿಗೆ **ಶ್ರವಣಗೋಚರ**ವಾಗಿ ಉಳಿದುಕೊಂಡಿರುತ್ತದೆ. ಕಲಿಯುಗದಲ್ಲಿ ವೇದೋಕ್ತವಾದ ಯಜ್ಞದಾನತಪಸ್ಸುಗಳನ್ನು ವಿಧಿವತ್ತಾಗಿ ಮಾಡುವದು ಎಲ್ಲರಿಗೂ ದಕ್ಕಲಾರದು. ಆದರೆ ಭಗವಂತನ ನಾಮವು ನಿಮಗೆ ಕಿವಿಗೆ ಬಿದ್ದೊಡನೆ ಅದನ್ನು ಹೃದಯದಲ್ಲಿಟ್ಟುಕೊಂಡು ಯಾವಾಗಲೆಂದರೆ ಆಗ ನಾಲಿಗೆಯ ಮೂಲಕ ಹರಿದಾಡಿಸಬಹುದು. ಅದು ಭಗವಂತನ ಗುಣಗಳ ಜ್ಞಾನದ ಮೂಲಕ ನಿಮ್ಮ ಶ್ರೇಯಸ್ಸಿಗೆ ಕಾರಣವಾಗುವದು.

**೨೩೫.** ಮನುಷ್ಯನಿಗೆ ಸ್ವಭಾವದಿಂದ ಇಂದ್ರಿಯಗಳನ್ನು ಅನುಸರಿಸಿ ಹೊರಗಡೆಗೇ ನೋಡುತ್ತಿರುವ ಹವ್ಯಾಸವಿರುತ್ತದೆ. ಇಂದ್ರಿಯಗಳನ್ನೂ ಅವುಗಳಿಗೆ ನೆರವಾಗಿರುವ ಯಂತ್ರಗಳನ್ನೂ ಉಪಯೋಗಿಸಿಕೊಂಡು ಹೊರಗಿನ ಪ್ರಪಂಚದ ಕೆಲಕೆಲವು ಭಾಗಗಳ ರಹಸ್ಯಗಳನ್ನು ಭೇದಿಸಿ ಅವನು ತನ್ನ ಯೋಗಕ್ಷೇಮಗಳಿಗೆ ಅವನ್ನು ಉಪಕರಣವಾಗಿಸಿಕೊಂಡಿರುತ್ತಾನೆ. ಆದರೆ ಮನುಷ್ಯನು ತನ್ನೊಳಕ್ಕೇ ಸರಿಯುತ್ತಾ ಹೋದಂತೆಲ್ಲ ಬಾಹ್ಯ ಪ್ರಪಂಚಕ್ಕಿಂತಲೂ ಹೆಚ್ಚು ಅದ್ಭುತವಾದ ವಿಶಾಲವಾದ ಆಧ್ಯಾತ್ಮಿಕಪ್ರಪಂಚದ ಅನುಭವವಾಗುವ ಅವಕಾಶವಿದೆ. ಆ ಅನುಭವವನ್ನು ಮಾತಿನಿಂದಲಾಗಲಿ, ಮನಸ್ಸಿನಿಂದಲಾಗಲಿ ಹಿಡಿಯುವದಕ್ಕೆ ಆಗುವದಿಲ್ಲವಾದರೂ ಅದರ **ಉತ್ಕರ್ಷ**ವನ್ನು ಮಾತ್ರ ಅಲ್ಲಗಳೆಯುವದಕ್ಕೆ ಆಗುವಂತಿಲ್ಲ.

**೨೩೬.** ನಾವು ಎಂದೆಂದಿಗೂ ನಮ್ಮದೇ ಆಗಿರುವ **ನಿತ್ಯಾನುಭವ**ಸ್ವರೂಪದಲ್ಲಿ ಪರಮಾತ್ಮನೇ ಆಗಿರುತ್ತೇವೆ. ಶಾಸ್ತ್ರದ ಮತ್ತು ಸತ್ಪುರುಷರ ಬೋಧೆಯ ಸಹಾಯದಿಂದ ನಿವೃತ್ತಿಮಾರ್ಗವನ್ನು ಅನುಸರಿಸಿ ಈ ಅನುಭವವನ್ನು ನಮ್ಮೊಳಗೇ ಕಂಡುಕೊಂಡರೆ ಈ ಸ್ವರೂಪಸುಖದಲ್ಲಿಯೇ ಯಾವಾಗಲೂ ನಲಿಯುತ್ತಿರಬಹುದು.

**೨೩೭.** ಮನುಷ್ಯನಿಗೆ ಮೇಧಾದೇವಿಯ ಅನುಗ್ರಹವಿರುವದೆಂಬುದು ಒಂದು ದೊಡ್ಡ ವರ. ನಮಗೆ ಉತ್ತಮವಾದ ವಿಚಾರಗಳು ಮನಸ್ಸಿನಲ್ಲಿ ನೆಲಸಿದ್ದು ಕಾಲಕ್ಕೆ ಸರಿಯಾಗಿ ನೆನಪಿಗೆ ಬರಬೇಕು. ಚಿತ್ತಶುದ್ಧಿಯಾಗಿ ಅತೀಂದ್ರಿಯವಾದ ತತ್ತ್ವಗಳು ಮನಸ್ಸಿಗೆ ಹೊಳೆಯುವದಕ್ಕೂ ಮಾತು ಶುದ್ಧವಾಗಿರುವದಕ್ಕೂ ಭಗವನ್ನಾಮಕೀರ್ತನೆ, ಪ್ರಿಯವಾದ, ಸತ್ಯವಾದ, ಹಿತಕರವಾದ, ಮಾತನ್ನುಚ್ಚರಿಸುವದು-- ಇವುಗಳಿಗೆ ಸಹಾಯವಾಗುವದಕ್ಕೂ ಉತ್ತಮವಾದ ಮೇಧಾಶಕ್ತಿಯು ಬೇಕು. ಅಂಥ **ಮೇಧಾಶಕ್ತಿ**ಯನ್ನು ಕೊಡೆಂದು ಭಗವಂತನನ್ನು ದಿನದಿನವೂ ಪ್ರಾರ್ಥಿಸುತ್ತಿರೋಣ.

**೨೩೮.** ಯಾವ ಉಪಾಧಿಯ ಹಂಗೂ ಇಲ್ಲದ ಅಕ್ಷರಬ್ರಹ್ಮದ ಉಪಾಸನೆಗಿಂತ ಸೋಪಾಧಿಕನಾದ ಪರಮಾತ್ಮನ ಉಪಾಸನೆಯೇ ಹೆಚ್ಚು ಸುಲಭವಾಗಿರುವದರಿಂದ ಸಾಮಾನ್ಯರು ಸಾಕಾರಸಗುಣಬ್ರಹ್ಮದ ಉಪಾಸನೆಯನ್ನೇ ಮೊದಲು ಕೈಗೊಳ್ಳುವದು ಉತ್ತಮ. ಇಡಿಯ ಜಗತ್ತೇ ಪರಮಾತ್ಮನ ವಿಭೂತಿಯೆಂದು ತಿಳಿದು ಮಾಡುವ ಉಪಾಸನೆಯು **ಸೋಪಾಧಿಕ**ವಾದ ಬ್ರಹ್ಮದ ಉಪಾಸನೆಗಳಲ್ಲಿ ಒಂದಾಗಿದೆ. ಇದಕ್ಕೂ ಉತ್ತಮ ಗುಣಗಳುಳ್ಳ- ದೃಶ್ಯಗಳನ್ನೂ ಪ್ರಾಣಿಗಳನ್ನೂ ಮನುಷ್ಯರನ್ನೂ ಭಗವದ್ಬುದ್ಧಿಯಿಂದ ಗೌರವಿಸುವ ಉಪಾಸನೆಯನ್ನು ಮಾಡಿದರೆ ಮನಸ್ಸಿಗೆ ಉತ್ತಮಸಂಸ್ಕಾರವಾಗುವದು.

**೨೩೯.** ಯಾರಿಗೆ 'ಪರಮಾತ್ಮನೇ ಬೇಕು' 'ಆತನೇ ನಮಗೆ ಪರಮಗತಿ' ಎಂದು ನಿಜವಾಗಿಯೂ ಮನದಟ್ಟಾಗಿರುವದೋ ಅವರು ಪರಮಾತ್ಮನ ವಿಚಾರವಲ್ಲದೆ ಮತ್ತೇನನ್ನೂ ತಮ್ಮ ಮನಸ್ಸಿಗೆ ಹತ್ತಿಸಿಕೊಳ್ಳುವದಿಲ್ಲ; ಅವರ ಚಿತ್ತವು ಆತನಲ್ಲಿಯೇ **ಸಮಾಹಿತ**ವಾಗಿಬಿಟ್ಟಿರುತ್ತದೆ. ಅಂಥವರಿಗೆ ಭಗವಂತನು ತನ್ನ ಕಡೆಗೇ ಬರುವಂಥ ಬುದ್ಧಿಯನ್ನು ಕೊಡುತ್ತಾನೆ. ಅವರ ಹೃದಯದಲ್ಲಿಯೇ ಇದ್ದುಕೊಂಡು ಅವರ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುತ್ತಾನೆ.

**೨೪೦.** ಜೀವನವು ಸುಖದುಃಖಗಳ ಮಿಶ್ರಣವಾಗಿರುವಂತೆಯೂ ವ್ಯವಹಾರದಲ್ಲಿ ದುಃಖಗಳನ್ನು ಪರಿಹರಿಸಿಕೊಂಡು ಸುಖಗಳನ್ನು ಹಿಂಡಿಕೊಳ್ಳುವದೇ ಜೀವನದ ಹೆಗ್ಗುರಿಯೆಂದೂ ಅನೇಕರ ಭಾವನೆ. ವ್ಯವಹಾರದೃಷ್ಟಿಯಿಂದ ಇದು ಯುಕ್ತವೂ ಆಗಿದೆ. ಆದರೆ ಪರಮಾರ್ಥದೃಷ್ಟಿಯಿಂದ ನೋಡಿದಾಗ ಈ ಜಗತ್ತೆಲ್ಲವೂ ನಾನೂ ಪರಮಾನಂದಸ್ವರೂಪವಾದ ಬ್ರಹ್ಮವೇ-ಎಂದು ಮನಗಾಣುವ ವಿದ್ಯೆಗೆ **ಬ್ರಹ್ಮಾನಂದವಿದ್ಯೆ**ಯೆಂದು ಹೆಸರು.

**೨೪೧.** ರಾಗದ್ವೇಷಗಳಿಗೆ ಕಟ್ಟುಬಿದ್ದಿರುವ ಇಂದ್ರಿಯಗಳ ದೃಷ್ಟಿಯಿಂದ ಕಾಣುತ್ತಿರುವ ಪ್ರಪಂಚದಲ್ಲಿ ಸುಖದುಃಖಗಳು ಒಂದಾಗುತ್ತಲೊಂದು ಬಂದೊದಗುವದು ತಪ್ಪಿದ್ದಲ್ಲ. ಆದರೆ ಇಂದ್ರಿಯಗಳನ್ನೂ ಮನಸ್ಸನ್ನೂ ಮೀರಿರುವ **ಆತ್ಮನ**

**ದೃಷ್ಟಿ**ಯಿಂದ ಜಗತ್ತೆಲ್ಲವೂ ಆನಂದಮಯವೇ ಆಗಿರುತ್ತದೆ. ಏಕೆಂದರೆ ಜಗತ್ತೆಂಬುದು ಪರಮಾರ್ಥವಾಗಿ ಆನಂದರೂಪನಾದ ಪರಮಾತ್ಮನೇ ಆಗಿರುತ್ತದೆ.

**೨೪೨.** ಅದ್ವೈತಾನುಭವಮಾತ್ರಸ್ವರೂಪರೇ ನಾವೆಂದು ಶ್ರುತಿಗಳು ಘೋಷಿಸುತ್ತಿರುವವು. ಆದರೂ ಮನುಷ್ಯರಿಗೆಲ್ಲ ಸ್ವಾಭಾವಿಕವಾಗಿರುವ ಅವಿದ್ಯೆಯಿಂದ ನಾವು ಪರಿಚ್ಛಿನ್ನಸ್ವರೂಪರೆಂದೂ ಪ್ರಪಂಚದೊಳಗೆ ದೇಶಕಾಲವಸ್ತುಪರಿಚ್ಛಿನ್ನವಾದ ಶರೀರಾದಿ ಸಂಘಾತದಿಂದ ಕೂಡಿ ಹುಟ್ಟಿ ಕೆಲವುಕಾಲ ಬಾಳಿಕೊಂಡಿದ್ದು ಬಳಿಕ ಮೃತ್ಯುವಶರಾಗುವೆವೆಂದೂ ನಂಬಿಕೊಂಡೇ ವ್ಯವಹರಿಸುತ್ತಿರುವೆವು. ನಮ್ಮ ಎಚ್ಚರವೂ ಎಚ್ಚರದ ಪ್ರಪಂಚವೂ ಕನಸಿನಂತೆ, ಮತ್ತು ಕನಸಿನಲ್ಲಿ ತೋರುವ ಪ್ರಪಂಚದಂತೆಯೇ ಅವಸ್ಥೆಯಿರುವಷ್ಟು ಕಾಲಕ್ಕೆ ಸತ್ಯವಾಗಿ ತೋರುವದೆಂದೂ ಗಾಢನಿದ್ರೆಯಲ್ಲಿ ನಮ್ಮ **ಪರಿಚ್ಛಿನ್ನಭಾವವು** ತೀರ ಒರಸಿಹಾಕಿದಂತೆ ಆಗಿ ನಮ್ಮ ನಿತ್ಯಾನಂದಸ್ವರೂಪದಲ್ಲಿ ಮಾತ್ರ ಉಳಿದಿರುವೆವೆಂಬುದನ್ನೂ ಮನಸ್ಸಿಗೆ ತಂದುಕೊಳ್ಳುತ್ತಿದ್ದರೆ ಈ ಅವಿದ್ಯೆಯು ಪೂರ್ಣವಾಗಿ ಮೈಗರೆಯುವದು.

**೨೪೩.** ಭಗವಂತನು ನಮ್ಮ ಇಂದ್ರಿಯಗಳಿಗೂ ಅಂತಃಕರಣಕ್ಕೂ ಗೋಚರವಾಗುತ್ತಿರುವ ಬಾಹ್ಯಪ್ರಪಂಚರೂಪದಿಂದಲೂ ಇಂದ್ರಿಯಗಳು; ಮನಸ್ಸು, ಬುದ್ಧಿ, ಅಹಂಕಾರ-ಮುಂತಾದ ಅಧ್ಯಾತ್ಮಪ್ರಪಂಚರೂಪದಿಂದಲೂ ತನ್ನ ಮಹಿಮೆಯನ್ನು ನಮಗೆ ಪ್ರಕಟಿಸುತ್ತಾ ಇರುತ್ತಾನೆ. ಆದರೆ ಅವನು ಇದೆಲ್ಲವನ್ನೂ ಮೀರಿರುವ ನಿತ್ಯಶುದ್ಧಬುದ್ಧಮುಕ್ತವಾದ **ನಿಷ್ಪ್ರಪಂಚರೂಪ**ದಿಂದಲೂ ಇರುತ್ತಾನೆ. ಒಬ್ಬ ಮನುಷ್ಯನ ನೆರಳನ್ನು ನೆಪವಾಗಿ ಮಾಡಿಕೊಂಡು ಆತನ ನಿಜವಾದ ರೂಪವನ್ನು ಅರಿತುಕೊಳ್ಳಬಹುದಾಗಿರುವಂತೆ ಸಪ್ರಪಂಚರೂಪವನ್ನು ನೆಪವಾಗಿ ಮಾಡಿಕೊಂಡು ಆ ಭಗವಂತನ ನಿಷ್ಪ್ರಪಂಚತತ್ತ್ವವನ್ನು ಜಾಣರು ಅರಿತುಕೊಳ್ಳುವರು.

**೨೪೪.** ಭಗವಂತನು ತಾನಿರುವ ಪರಮಾರ್ಥರೂಪದಿಂದ **ನಿರ್ವಿಶೇಷನೇ** ಆಗಿರುತ್ತಾನೆ. ಅವನನ್ನು ಉಪಾಸನೆಮಾಡುವವರು ಮಾತ್ರ ಶಾಸ್ತ್ರದಲ್ಲಿ ಹೇಳಿದಂತೆ ಸಾಕಾರನೆಂದೂ ಆಯಾ ಗುಣವಿಶೇಷವುಳ್ಳವನೆಂದೂ ಧ್ಯಾನಿಸಬೇಕು. ಪರಮಾತ್ಮನು ಮಾಯೆಯಿಂದ ಸಗುಣನೆಂದೂ ಸಾಕಾರನೆಂದೂ ಹೇಳಿರುವದು ಮಾಯಿಕಸ್ವರೂಪವೆಂದೇ ವೇದಾಂತಿಗಳು ಹೇಳುತ್ತಾರೆ. ಆದರೆ ಅದು ಬರಿಯ ಹುಸಿತೋರಿಕೆ-ಎಂದು ತಿಳಿಯಬಾರದು. ವ್ಯವಹಾರದೃಷ್ಟಿಯಿಂದ ಭಗವಂತನ ಆಕಾರಗಳೂ ಗುಣಗಳೂ ಸತ್ಯವೇ ಆಗಿವೆ.

**೨೪೫.** ವೇದಾಂತದಲ್ಲಿ ಹೇಳಿರುವ ಪರಬ್ರಹ್ಮತತ್ತ್ವವು ನಿರ್ವಿಶೇಷವಾಗಿರುತ್ತದೆ; ಎಂದರೆ ಅದನ್ನು ಇಂಥದ್ದು, ಅಂಥದ್ದು- ಎಂದು ಹೇಳುವದಕ್ಕೆ ಬರುವದಿಲ್ಲ. ಆದರೂ

ಅದು ನಮ್ಮೆಲ್ಲರಿಗೂ ಆತ್ಮನೇ ಆಗಿರುವದರಿಂದ ಅದನ್ನು ಇಲ್ಲವೆನ್ನುವದು ಆಗುವಂತಿಲ್ಲ. ಈ ತತ್ತ್ವವನ್ನು ಶ್ರುತಿಯಲ್ಲಿ **'ನಾರಾಯಣ'**ನೆಂದು ಕರೆದಿರುವದೂ ಉಂಟು. ಆ ನಾರಾಯಣನೆಂಬುದು ನಮಗಿಂತ ಬೇರೆಯಾಗಿರುವ, ಲೋಕಾಂತರದಲ್ಲಿರುವ, ಸಶರೀರಿಯಾಗಿರುವ ಸಗುಣನಾಗಿರುವ ಒಬ್ಬ ದೇವನ ಹೆಸರಲ್ಲ. ನಾವು ಕಂಡು ಕೇಳಿರುವ ಜಗತ್ತೆಲ್ಲವೂ ನಿಜವಾಗಿ **ನಾರಾಯಣನೇ**- ಎಂದು ಶ್ರುತಿಯು ಸಾರುತ್ತಿದೆ.

**೨೪೬.** ಭಗವಂತನು ನಿತ್ಯನಿರ್ಗುಣನೂ ನಿತ್ಯನಿರಾಕಾರನೂ ಆಗಿರುತ್ತಿದ್ದರೂ ತನ್ನ ಇಚ್ಛಾಮಾತ್ರದಿಂದ ಸಾಧಕರಾದ ಭಕ್ತರನ್ನು ಅನುಗ್ರಹಿಸುವದಕ್ಕಾಗಿ ಸಗುಣನೂ ಸಾಕಾರನೂ ಆಗಿ **ಮೈದೋರುವ** ಮಹಿಮೆಯುಳ್ಳಾತನು. ಆದರೆ ಆತನ ಜನ್ಮವಾಗಲಿ, ಕರ್ಮವಾಗಲಿ ಎಳ್ಳಷ್ಟೂ ಅವನಿಗೆ ಬಂಧಕವಾಗುವದಿಲ್ಲ. ಅಂಥ ಮಹಿಮನಾತನು!

**೨೪೭.** ಈ ಜಗತ್ತಿನ ಮತ್ತು ನಮ್ಮಗಳೆಲ್ಲರ ಪರಮಾರ್ಥಸ್ವರೂಪನಾಗಿರುವ ಪರಮಾತ್ಮನಿಗೆ **ಪುರುಷ**ನೆಂದೂ ಹೆಸರಿದೆ. ಜೀವರುಗಳ ಶರೀರದಲ್ಲಿರುವ ಹೃದಯವೆಂಬ ಪುರದೊಳಗೆ ಇದ್ದುಕೊಂಡಿರುವದರಿಂದಲೂ ಈ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುವ ಪೂರ್ಣತತ್ತ್ವವಾಗಿರುವದರಿಂದಲೂ ಪರಮಾತ್ಮನು **ಪುರುಷ** ನೆನಿಸಿರುತ್ತಾನೆ. ಪುರುಷನೆಂಬ **ಹೆಸರು ಈ ಅರ್ಥದಲ್ಲಿ ಮತ್ತೆ ಯಾರಿಗೂ** ಸಲ್ಲುವದಿಲ್ಲವಾದ್ದರಿಂದ ಇವನನ್ನು **ಪರಮಪುರುಷ**ನೆಂದೂ ಶ್ರುತಿ ಸ್ಮೃತಿಗಳಲ್ಲಿ ಕರೆದಿರುತ್ತದೆ.

**೨೪೮.** ಪರಮಾತ್ಮನ ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವದೆಂಬ ಜ್ಞಾನದಿಂದ ಕೂಡಲೆ ಇಲ್ಲಿಯೇ ಪರಮಪುರುಷಾರ್ಥವು ದೊರಕುತ್ತದೆ; ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗಿಬಿಡುವನು- ಎಂಬಿದು ವೇದಾಂತಸಿದ್ಧಾಂತವು. ಜ್ಞಾನವೆಂದರೆ ಬ್ರಹ್ಮವು ಹೇಗಿದೆ ? ಎಂಬುದನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳುವದು. ಇದು ಎಲ್ಲರಿಗೂ ಸಾಧ್ಯವಿಲ್ಲ. ಇದಕ್ಕಿಂತ ಕೆಳಮಟ್ಟದ ಬುದ್ಧಿಯುಳ್ಳವರು ಭಾವನಾತ್ಮಕವಾದ ಉಪಾಸನೆಯನ್ನು ಮಾಡಬೇಕು. ಬಾಹ್ಯಭಾವನೆಯನ್ನೆಲ್ಲ ತೊರೆದು ಪರಮಾತ್ಮನೊಬ್ಬನೇ ನಮ್ಮ ನಿಜವಾದ ಆತ್ಮನು ಎಂಬ ಭಾವನೆಯನ್ನು ಗಟ್ಟಿಗಳಿಸಿಕೊಂಡವರು ಆ ಸಾಕ್ಷಾತ್ಕಾರ ದಿಂದ ಬ್ರಹ್ಮಲೋಕಕ್ಕೆ ಹೋಗಿ ವಿಶ್ವೈಶ್ವರ್ಯವನ್ನು ಪಡೆದು ಬ್ರಹ್ಮಲೋಕವಿರುವವರೆಗೂ ಆನಂದದಿಂದಿರುವರು. ಅಲ್ಲಿ ಜ್ಞಾನವನ್ನು ಪಡೆದುಕೊಂಡರೆ **ಕಲ್ಪಾಂತ**ದಲ್ಲಿ ಮುಕ್ತರೇ ಆಗಿಬಿಡುತ್ತಾರೆ- ಎಂಬಿದು ಉಪನಿಷತ್ತುಗಳ ಉಪದೇಶವು.

**೨೪೯.** ನಾವು ನಿರ್ವಿಶೇಷವಾದ, ಏರುಪೇರುಗಳಿಲ್ಲದ, ದೇಶಕಾಲನಿಮಿತ್ತಗಳಿಗೆ ಕಟ್ಟುಬೀಳದ, ಧರ್ಮಾಧರ್ಮಾದಿಗಳಿಂದ ಎಂದಿಗೂ ಬದ್ಧವಾಗದ ಸದ್ರೂಪನಾದ ಪರಮೇಶ್ವರನಲ್ಲಿಯೇ ಒಂದಾಗಿರುವೆವು- ಎಂಬ **ಶುಭಸ್ಮೃತಿಸಂತಾನ**ವನ್ನು ಬೆಳೆಯಿಸಿ ಕೊಳ್ಳಬೇಕು. ಈ ಸಾಧನವನ್ನು ಒಂದೇ ಬಾರಿಗೆ ಅನುಷ್ಠಾನಮಾಡಲಾಗದಿದ್ದರೆ ನಾಮ

ರೂಪಗಳ ಕಟ್ಟನ್ನು ಸಡಲಿಸಿಕೊಳ್ಳುವದಕ್ಕೆ ಭಗವಂತನ ನಾಮರೂಪಗಳನ್ನೇ ಕುರಿತು ಚಿಂತಿಸುತ್ತಿರಬೇಕು.

**೨೫೦.** ಪ್ರತಿಯೊಬ್ಬ ಜೀವನೂ ಈಗಲೇ ಇಲ್ಲಿಯೇ ಸದ್ಬ್ರಹ್ಮಾತ್ಮಸ್ವರೂಪನೇ ಆಗಿರುತ್ತಾನೆ. ಒಂದವಸ್ಥೆಯಲ್ಲಿ ತಾರತಮ್ಯಗಳುಳ್ಳ ಜೀವನಾಗಿದ್ದು ಮತ್ತೊಂದು ಅವಸ್ಥೆಯಲ್ಲಿ ಆ ಬ್ರಹ್ಮಸ್ವರೂಪದಲ್ಲಿ ಬೆರೆತುಹೋಗುವವನಲ್ಲ. ಮತ್ತೇನೆಂದರೆ ಯಾವಾಗಲೂ ಎಂದೆಂದೂ ಆ ಪರಬ್ರಹ್ಮವೇ ಆಗಿರುತ್ತಾನೆ. ಈ **ಪರಮತತ್ತ್ವ**ವನ್ನು ವೇದಾಂತತತ್ತ್ವಾನುಸಂಧಾನದಿಂದಲೂ ಶಾಸ್ತ್ರಾಚಾರ್ಯರುಗಳ ಉಪದೇಶ, ಅನುಗ್ರಹ ಗಳ ಮೂಲಕವೂ ಮನಗಂಡುಕೊಳ್ಳಬೇಕು.

**೨೫೧.** ಜೀವರುಗಳಿಗೆಲ್ಲ ಒಬ್ಬನೇ ಆತ್ಮನು ಇರುತ್ತಾನಾದರೂ ಈ ತತ್ತ್ವವನ್ನು ಮನದಂದುಕೊಳ್ಳದೆ ಅವರು ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳೊಳಗೆ ಯಾವದಾದರೊಂದರಲ್ಲಿ ತಾದಾತ್ಮ್ಯವನ್ನು ಹೊಂದಿಕೊಂಡು ಅದನ್ನೇ 'ನಾನು' ಎಂದು ವ್ಯವಹರಿಸುತ್ತಿದಾರೆ. ನಾನು ಎಂಬ ಈ ತಪ್ಪುತಿಳಿವಳಿಕೆಯೇ ಅವಿದ್ಯೆಯು. ಅವಿದ್ಯೆಯ ದೃಷ್ಟಿಯಿಂದ ದೇಹಾದಿಗಳೆಲ್ಲ ಒಂದೊಂದು ಸಮಯಕ್ಕೆ ಆತ್ಮನೆಂದು ಕಲ್ಪಿತವಾಗಿರುತ್ತದೆ. ಶಾಸ್ತ್ರದೃಷ್ಟಿಯಿಂದ ವಿಚಾರಮಾಡಿ ನಿಜವನ್ನು ಕಂಡುಕೊಂಡವರಿಗೆ ಇವೆಲ್ಲ **ಹುಸಿತೋರಿಕೆ**ಯ ಅನಾತ್ಮಗಳೇ. ನಿಜವಾದ ಆತ್ಮನೆಂದರೆ ಎಲ್ಲ ಜೀವರುಗಳ ಉಪಾಧಿಗಳಾದ ದೇಹಾದಿಗಳಿಗೂ ಸಾಕ್ಷಿಯಾಗಿರುವ ಪರಮಾತ್ಮನೊಬ್ಬನೇ. ಆವನನ್ನು ಆರಿತುಕೊಳ್ಳುವದೇ ಅಧ್ಯಾತ್ಮವಿದ್ಯೆಯು.

**೨೫೨.** ಪರಮಾತ್ಮನು ಚೇತನಾಚೇತನಾತ್ಮಕವಾದ ಜಗತ್ತಿಗೆಲ್ಲ ತಿರುಳು. ಹಗ್ಗವನ್ನು ಹಾವೆಂದು ಅರಿಯುವ ಭ್ರಾಂತರಂತೆ ಜನರು ಪರಮಾತ್ಮನನ್ನು ಜಗತ್ತಾಗಿ ಕಾಣುತ್ತಿರುವರು. ಜಗತ್ತು (ವ್ಯಾಕೃತ) ನಾಮರೂಪಗಳಿಂದ ಬಿಡಿಯಾಗಿರುವದು, (ಅವ್ಯಾಕೃತ) ವ್ಯಾಕೃತಜಗತ್ತಿನ ಬೀಜರೂಪ-ಎಂಬ ಎರಡು ರೂಪಗಳಿಂದ ತೋರುತ್ತಿರುತ್ತದೆ. ಪರಮಾತ್ಮನ ಸ್ವರೂಪವು ಈ ಎರಡೂ ಅಲ್ಲ. ಇವೆರಡನ್ನೂ ಬೆಳಗುತ್ತಿರುವ ಸಾಕ್ಷಿ ಚೈತನ್ಯರೂಪನೇ ಪರಮಾತ್ಮನು-ಎಂದು **ಅನುಸಂಧಾನ**ಮಾಡಿಕೊಳ್ಳಿರಿ. ಆಗ್ಗೆ ನೀವು ಭಗವಂತನಲ್ಲಿಯೇ ನೆಲೆನಿಲ್ಲುವಿರಿ.

**೨೫೩** ನಮ್ಮೆಲ್ಲರಿಗೂ ಆತ್ಮನಾಗಿರುವ ಬ್ರಹ್ಮವನ್ನು ಇಂದ್ರಿಯಗಳಿಂದ ಅರಿಯುವ ದಕ್ಕಾಗುವದಿಲ್ಲ ; ಮನಸ್ಸಿನಿಂದ ವಿಕಲ್ಪಿಸುವದಕ್ಕೂ ಆಗುವದಿಲ್ಲ. ಬುದ್ಧಿಯಿಂದ ನಿಶ್ಚಯಿಸಿ ಅರಿತುಕೊಳ್ಳುವದಕ್ಕೂ ಆಗುವದಿಲ್ಲ. ಆದರೂ ಇಂದ್ರಿಯಗಳ ಅರಿವು, ಮನಸ್ಸಿನ, ವಿಕಲ್ಪನೆ, ಬುದ್ಧಿಯ ನಿಶ್ಚಯ -ಇವೆಲ್ಲವನ್ನೂ ತನ್ನ ಬೆಳಕಿನಿಂದಲೇ ವ್ಯಾಪಿಸಿಕೊಂಡಿರುವ ಅನುಭವದ ಸ್ವರೂಪವೇ ಆತನು - ಎಂಬುದನ್ನು ಅನುಭವಕ್ಕೆ ತಂದುಕೊಳ್ಳ

ಬಹುದಾಗಿರುತ್ತದೆ. ಹೀಗೆ ಅನುಭವಕ್ಕೆ ತಂದುಕೊಳ್ಳುವದೇ ಆ ಪರಮಾತ್ಮನ ನಿಜವಾದ **ಮನನ,** ನಿಜವಾದ ವಿಜ್ಞಾನ.

**೨೫೪.** ನಮ್ಮೆಲ್ಲರಿಗೂ ನಿಜವಾಗಿ ಆತ್ಮನಾಗಿರುವವನು ಪರಮಾತ್ಮನೇ. ಪರಮಾತ್ಮನೇ ನಮ್ಮ ನಿಜವಾದ ಆತ್ಮನೆಂಬುದನ್ನು ಮನಗಾಣುವದಕ್ಕೆ ಮನುಷ್ಯಜನ್ಮವೇ ಬೇಕಾಗಿದೆ. ಮುಂದೆ **ಮನುಷ್ಯಜನ್ಮವೇ** ಬರುವದೆಂಬ ಭರವಸೆಯಿಲ್ಲವಾದ್ದರಿಂದ ಸರ್ವಭೂತಗಳಲ್ಲಿಯೂ ಇರುವ ಪರಮಾತ್ಮನೇ ನಮ್ಮ ಆತ್ಮನೆಂಬುದನ್ನು ಈ ಜನ್ಮದಲ್ಲಿಯೇ ಕಂಡುಕೊಳ್ಳುವದಕ್ಕೆ ಪ್ರಯತ್ನಿಸಬೇಕು.

**೨೫೫.** ವೇದಾಂತವೆಂಬುದು 'ಸತ್ಯ, ಮಿಥ್ಯೆ', 'ಜ್ಞಾನ, ಭಕ್ತಿ', 'ವೈರಾಗ್ಯ, ಯೋಗ' - ಎಂದು ಮುಂತಾಗಿ ಕೆಲವು ಶಬ್ದಗಳನ್ನು ಬಳಸಿಕೊಂಡು ಮಾಡುವ ಒಣಭಾಷಣದ ಸುರಿಮಳೆಯಲ್ಲ. ದುರಾಚಾರವನ್ನು ಬಿಟ್ಟು, ಇಂದ್ರಿಯಗಳನ್ನು ಹಿಂಜಗ್ಗಿ,, ಮನಸ್ಸಿನ ಹರಿದಾಟವನ್ನು ನಿಲ್ಲಿಸಿಕೊಂಡು ಆತ್ಮನ ಸ್ವರೂಪವನ್ನೇ ನೆರೆನೋಡುವ ಪ್ರಯತ್ನವೇ **ವೇದಾಂತಜ್ಞಾನ**ಕ್ಕೆ ಹಾದಿಯು.

**೨೫೬.** ಶಾಸ್ತ್ರಾರ್ಥಪ್ರವಚನ, ಮೇಧಾಶಕ್ತಿ, ಶ್ರವಣಬಾಹುಳ್ಯ-ಇವೆಲ್ಲ ಆತ್ಮಪ್ರಾಪ್ತಿಗೆ ಸಾಧನಗಳೇ ಸರಿ. ಆದರೆ ಇವೆಲ್ಲಕ್ಕಿಂತಲೂ ನನಗೆ ಪರಮಾತ್ಮಪ್ರಾಪ್ತಿಯೇ ಬೇಕು- ಎಂಬ **ತಹತಹ**ವಿರುವದು ಮುಖ್ಯವಾದದ್ದು. ಪರಮಾತ್ಮಪ್ರಾಪ್ತಿಯ ಹಂಬಲು ಯಾರಿಗೆ ಹೆಚ್ಚಾಗಿರುವದೋ ಅವರಿಗೆ ಪರಮಾತ್ಮನು ತನ್ನ ಸ್ವರೂಪದ ಅನುಭವವನ್ನು ಅನುಗ್ರಹಿಸುವನು.

**೨೫೭.** ಈ ಸಂಸಾರವೆಂಬುದು ವಿಶಾಲವಾದ ಒಂದು ದೊಡ್ಡ ಅಶ್ವತ್ಥವೃಕ್ಷದಂತೆ ಅನಾದ್ಯನಂತವಾಗಿ ಹರಡಿಕೊಂಡಿರುತ್ತದೆ. ಇದು ಎಷ್ಟೇ ವಿಚಿತ್ರವೂ ಕುತೂಹಲಜನಕವೂ ಚಿತ್ತಪ್ರಲೋಭಕವೂ ಆಗಿದ್ದರೂ ಇದಕ್ಕೆ ಆಧಾರವಾಗಿರುವ ಪರಮಾತ್ಮನೆಂಬ ತತ್ತ್ವದ ಆಧಾರವಿಲ್ಲದೆ ಸ್ವತಂತ್ರವಾಗಿ ಒಂದು ಕ್ಷಣವೂ ನಿಲ್ಲಲಾರದು. ಅದೇ ಅಮೃತ ಸ್ವರೂಪವಾಗಿರುವ ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಬ್ರಹ್ಮವು. ಅದೇ ನಮ್ಮ ಆತ್ಮನು. ಅದನ್ನು ಕಂಡುಕೊಂಡವರೇ **ಕೃತಕೃತ್ಯರು.**

**೨೫೮.** ಪರಮಾತ್ಮನೇ ಕೆಳಗೆ, ಮೇಲೆ, ಹಿಂದೆ, ಮುಂದೆ, ಬಲಕ್ಕೆ, ಎಡಕ್ಕೆ- ಎಲ್ಲೆಲ್ಲಿಯೂ ವ್ಯಾಪಿಸಿರುತ್ತಾನೆ. ಆತ್ಮನನ್ನು ಆತ್ಮನಿಂದಲೇ ಅನುಭವಕ್ಕೆ ತಂದು ಕೊಂಡವನು **ಸ್ವಯಂರಾಜ**ನೆಂದು ಶ್ರುತಿಯು ಸಾರುತ್ತಿದೆ.

**೨೫೯.** ಚೇತನಾಚೇತನರೂಪವಾಗಿರುವ ಜಗತ್ತೆಲ್ಲವೂ ಪರಮಾರ್ಥದ **ರೂಪಾಂತರ**ವಾಗಿರುವದು. ಈ ಜಗತ್ತು ಆ ಅಕ್ಷರಶಬ್ದವಾಚ್ಯವಾದ ಬ್ರಹ್ಮಕ್ಕಿಂತ ಬೇರೆ

ಯಾಗಿರುವದೇ ಇಲ್ಲ. ನಮಗೆ ಕಾಣಿಸುತ್ತಿರುವ ಜಗತ್ತೆಲ್ಲವೂ ಆ ಪರಬ್ರಹ್ಮವೇ. ಈಗ ನಾವು ಅಚೇತನಜಗತ್ತು, ಜೀವರು-ಎಂದು ಕರೆಯುತ್ತಿರುವದು ವ್ಯಾವಹಾರಿಕದೃಷ್ಟಿಯಿಂದ ನೋಡಿದಾಗ ಅದರ ವಿಭೂತಿಯಾಗಿರುತ್ತದೆ.

**೨೬೦.** ಈ ಜಗತ್ತು ಚಿತ್ರವಿಚಿತ್ರವಾಗಿ ಕಾಣುತ್ತಿದ್ದರೂ ಇದೆಲ್ಲವೂ ನಿಜವಾಗಿ ಪರಮಾರ್ಥಸ್ವರೂಪನಾದ ನಮ್ಮೆಲ್ಲರ ಆತ್ಮನಾದ ಬ್ರಹ್ಮವೇ ಆಗಿರುತ್ತದೆ. ವೇದಾಂತದಲ್ಲಿ ಹೇಳಿರುವ ದೃಷ್ಟಿಯಿಂದ ನೋಡಿದರೆ ಆ ಪರಮಾತ್ಮನನ್ನು ಬಿಟ್ಟರೆ ಮತ್ತೆ ಬೇರೆ ಯಾವದೊಂದೂ ಇರುವದೇ ಇಲ್ಲವೆಂಬ ತತ್ತ್ವವು ಮನದಲ್ಲಿ **ಮಿಂಚುವದು.**

**೨೬೧.** ನಮ್ಮ ನಿಜವಾದ ಸ್ವರೂಪವು ಯಾವದೆಂಬುದನ್ನು ಗೊತ್ತುಪಡಿಸಿ ಕೊಳ್ಳಬೇಕಾದರೆ ನಾವೆಂದು ಕಲ್ಪಿಸಿಕೊಂಡಿರುವ ಶರೀರವೇ ಮುಂತಾದ ಯಾವಯಾವ ಭಾಗವು ಮಾರ್ಪಡುತ್ತಿರುವದೋ ಅದನ್ನೆಲ್ಲ ಕೈಬಿಡಬೇಕು. ನಮ್ಮಗಳ ತೀರ ಒಳಗೆ ಎಂದಿಗೂ ಮಾರ್ಪಡದ, ನಮ್ಮ ಶರೀರ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳೆಲ್ಲವನ್ನೂ ನೋಡುತ್ತಿರುವ **ಕೂಟಸ್ಥ**ಸಚ್ಚಿದಾನಂದಸ್ವರೂಪನಾದ ಪರಮಾತ್ಮನು ಇರುತ್ತಾನೆ. ಅವನಲ್ಲಿಯೇ ಈ ಶರೀರಾದಿಗಳು ಹುಟ್ಟಿ ತೋರಿಕೊಂಡು ಕಾಣದಂತಾಗುತ್ತಿರುವವು. ಆತನೇ ನಮ್ಮ ನಿಜವಾದ ಆತ್ಮನು.

**೨೬೨.** ಬಾಹ್ಯವಸ್ತುಗಳಲ್ಲಿ **ಕಾರ್ಯಕಾರಣ**ಭಾವವು ಇರುವಂತೆ ತೋರು ತ್ತಿದ್ದರೂ ಕಾರ್ಯವೆಂಬುದು ಕಾರಣಕ್ಕಿಂತ ಬೇರೆಯಾಗಿರುವದೇ ಇಲ್ಲವೆಂಬುದು ಕಾರ್ಯ ಸ್ವಭಾವವನ್ನು ಲಕ್ಷಿಸಿ ನೋಡಿದವರಿಗೆ ನಿಶ್ಚಯವಾಗುತ್ತದೆ. ಭೌತಿಕವಸ್ತುಗಳು ಯಾವವೂ ಭೂತಗಳಿಗಿಂತ ಬೇರೆಯಾಗಿಲ್ಲವೇ ಇಲ್ಲ. ಭೂತಗಳೊಳಗೂ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ- ಇವುಗಳಲ್ಲಿ ಹಿಂದುಹಿಂದಿನದು ಮುಂದಿನದಕ್ಕಿಂತ ಬೇರೆಯಾಗಿಲ್ಲವೇ ಇಲ್ಲ. ತೀರ ಕೊನೆಯಲ್ಲಿರುವ ಆಕಾಶವು ಸತ್‌ಪ್ರತ್ಯಯಕ್ಕೆ ವಿಷಯವಾಗಿದ್ದು 'ಇರವು' ಎಂಬ ತತ್ತ್ವಕ್ಕಿಂತ ಬೇರೆಯಾಗಿಲ್ಲ. ಇರವು ಎಂಬುದು ನಮ್ಮೆಲ್ಲರ ಆತ್ಮನಾಗಿರುವ ಕೂಟಸ್ಥಚೈತನ್ಯವಾದ ಬ್ರಹ್ಮವೇ. ಹೀಗೆ ನೋಡಿದರೆ ಜಗತ್ತಿಗೆಲ್ಲ ಪರಮಾರ್ಥ ಸದ್ರೂಪವಾದ ಬ್ರಹ್ಮವೇ ಆತ್ಮ (ಸ್ವರೂಪ)ವಾಗಿದೆ.

**೨೬೩.** ನಮ್ಮಗಳೆಲ್ಲರ ಆತ್ಮವು ನಿಜವಾಗಿ ನಿತ್ಯಾನಂದಸ್ವರೂಪವಾದ ಬ್ರಹ್ಮವೇ ಆಗಿರುತ್ತದೆ. ಅವಿದ್ಯಾಕಲ್ಪಿತವಾದ ಉಪಾಧಿಗಳಿಂದ ನಾವು ಸುಖದುಃಖಗಳ **ಏರಿಳಿತ** ಗಳನ್ನು ಅನುಭವಿಸುವ ಸಂಸಾರಿಜೀವರೆಂಬ ಭ್ರಾಂತಿಯುಂಟಾಗಿರುತ್ತದೆ. ಸಾಧನಾನುಷ್ಠಾನದಿಂದ ಚಿತ್ತಶುದ್ಧಿಯನ್ನು ಪಡೆದುಕೊಂಡು ವೇದಾಂತಪರಿಶೀಲನೆಯನ್ನು ಮಾಡಿದರೆ ನಾವು ಅದ್ವಿತೀಯನಿತ್ಯಾನಂದಸ್ವರೂಪರೇ- ಎಂಬ ತತ್ತ್ವವು ಮನಸ್ಸಿನಲ್ಲಿ ಮಿಂಚುವದು.

**೨೬೪.** ಅಜ್ಞರಿಗೆ ತಾವು ಬಯಸುವ ಕಾಮಗಳೆಲ್ಲವೂ ಹೊರಗೆ ಇರುವವೆಂಬ ಭ್ರಾಂತಿಯಾಗಿರುತ್ತದೆ. ಜ್ಞಾನಿಗಳಿಗೆ ಎಲ್ಲಾ ಕಾಮಗಳೂ ಅವರ **ಆತ್ಮಸ್ವರೂಪವೇ** ಆಗಿರುತ್ತದೆ. ಹೀಗೆ ಪರಮಾರ್ಥದೃಷ್ಟಿಯಿಂದ ನೋಡಿದಾಗ ಭಗವತ್ತತ್ತ್ವವನ್ನು ಬಲ್ಲ ಮಹಾತ್ಮರಿಗೆ ಪಡೆದುಕೊಳ್ಳಬೇಕಾದ ಕಾಮಗಳು ಯಾವವೂ ಉಳಿದಿರುವದೇ ಇಲ್ಲ. ಆತ್ಮಕಾಮರೇ ಆಪ್ತಕಾಮರು- ಎಂದು ಶ್ರುತಿಯು ಸಾರುತ್ತಿರುವದು.

**೨೬೫.** ಸಂಸಾರದುಃಖದಿಂದ ನರಳುತ್ತಿರುವ ಮಾನವನಿಗೆ ಉಪನಿಷತ್ತುಗಳಲ್ಲಿರುವ **ಒಸಗೆ** ಏನೆಂದರೆ : ನೀನು ಶರೀರದೊಳಗಿದ್ದುಕೊಂಡು ದೇಶಕಾಲಪರಿಚ್ಛಿನ್ನನಾಗಿರುವೆನೆಂದೂ ಜನ್ಮಾದಿವಿಕಾರಗಳುಳ್ಳವನೆಂದೂ ಅನಾದ್ಯವಿದ್ಯೆಯಿಂದ ಭ್ರಾಂತನಾಗಿರುವೆ. ಆತ್ಮಜ್ಞಾನಿಗಳ ದೃಷ್ಟಿಯನ್ನು ಅವಲಂಬಿಸಿಕೊಂಡು ನಿನ್ನ ಸ್ವರೂಪವನ್ನು ನೀನೇ ನೋಡಿಕೊ. ನೀನು ಹುಟ್ಟು ಮುಪ್ಪು ಸಾವು- ಮುಂತಾದ ಯಾವ ವಿಕಾರಗಳೂ ಇಲ್ಲದ ಅಭಯವೂ ಅಮೃತಸ್ವರೂಪವೂ ಆಗಿರುವ ಬ್ರಹ್ಮವೇ ಆಗಿರುವೆ. ಎಂಬುದು ಸ್ಫುಟವಾಗಿ ಮನದಲ್ಲಿ ಮಿಂಚಿಬಿಡುತ್ತದೆ.

**೨೬೬.** ಪರಮೇಶ್ವರನಲ್ಲಿ ಯಾವ ಧರ್ಮಾಧರ್ಮಗಳಾಗಲಿ, ಮುಪ್ಪು, ಸಾವು, ಹಸಿವುಬಾಯಾರಿಕೆ, ಶೋಕಮೋಹ-ಮುಂತಾದ ಸಂಸಾರಧರ್ಮಗಳಾಗಲಿ ಇರುವದಿಲ್ಲ. ಅವನು ಸತ್ಯಸಂಕಲ್ಪನು. ಸತ್ಯಕಾಮನು. ನಿಜವಾಗಿ ಅವನೇ ಜೀವರುಗಳಿಗೆಲ್ಲ ಆತ್ಮನಾಗಿರುತ್ತಿದ್ದರೂ ಈ **ಪರಮಾರ್ಥಸ್ವರೂಪ**ವನ್ನರಿತುಕೊಳ್ಳಲಾರದೆ ಜನರು ದುಃಖಮಯವಾದ ಸಂಸಾರದಲ್ಲಿ ತೊಳಲುತ್ತಿರುವರು- ಎಂದು ಉಪನಿಷತ್ತುಗಳು ಸಾರುತ್ತಿರುವವು.

**೨೬೭.** ಕನಸಿಲ್ಲದ ಬರಿನಿದ್ರೆಯ ಬೆಲೆಯು ಈ ಸಾಮಾನ್ಯಜನರಿಗೆ ಸರಿಯಾಗಿ ತಿಳಿದಿಲ್ಲ. ಎಚ್ಚರಕನಸುಗಳಲ್ಲಿ ಕಾಣುವ ಪ್ರಪಂಚದ ಅಥವಾ ಹುಸಿತೋರಿಕೆಯಲೇಶವೂ ಇಲ್ಲದೆ ಈ ತನಿನಿದ್ರೆಯಲ್ಲಿ ಆ ನಮ್ಮ ಆತ್ಮನು ನಿಷ್ಪ್ರಪಂಚನಾಗಿ ಪರಮಾತ್ಮನಲ್ಲಿ ಒಂದಾಗಿ ಬಿಟ್ಟಿರುತ್ತಾನೆ. ಸರಿಯಾಗಿ ಒಳಹೊಕ್ಕು ಪರೀಕ್ಷಿಸಿನೋಡಿದರೆ **ಗಾಢನಿದ್ರೆ**ಯೆಂಬುದು ಒಂದು ಅವಸ್ಥೆಯೇ ಆಗಿರುವದಿಲ್ಲ. ಅಲ್ಲಿ ಅವಿದ್ಯಾಕಾಮಕರ್ಮಗಳ ಸೋಂಕೇ ಇಲ್ಲದೆ ನಿತ್ಯಶುದ್ಧಬುದ್ಧಮುಕ್ತವಾದ ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತಾನೆಂದು ಉಪನಿಷತ್ತುಗಳು ಸಾರುತ್ತಿವೆ.

**೨೬೮.** ನಮ್ಮಲ್ಲಿ ಒಬ್ಬೊಬ್ಬರಿಗೂ ಒಬ್ಬೊಬ್ಬ ಆತ್ಮನು ಬೇರೆಯಾಗಿರುವನೆಂದೂ ಒಬ್ಬೊಬ್ಬನಿಗೂ ತನ್ನ ತನ್ನ ಹಿಡಿತದಲ್ಲಿರುವ ಶರೀರೇಂದ್ರಿಯಮನಸ್ಸುಗಳ ಸಂಘಾತವೊಂದು ಇರುವದೆಂದೂ ನಮ್ಮಲ್ಲನೇಕರಿಗೆ ನಂಬಿಕೆಯಿದೆ. ಆದರೆ ನಿಜವಾಗಿ ನಮಗೆಲ್ಲ ಒಬ್ಬನೇ ಆತ್ಮನು ಇರುತ್ತಾನೆ. ಆ ಆತ್ಮನ ಹಿಡಿತದಲ್ಲಿಯೇ ನಮ್ಮಗಳೆಲ್ಲರ ಸ್ವರೂಪ, ಸ್ಥಿತಿ, ವ್ಯಾಪಾರ- ಎಲ್ಲವೂ ನಡೆಯುತ್ತಿವೆ. ಆ **ಅಂತರ್ಯಾಮಿ**ಯಾದ ಆತ್ಮನೇ ನಮ್ಮ ನಿಜವಾದ ಆತ್ಮನು. ಅವನೇ ಭಗವಂತನು- ಎಂದು ವೇದಾಂತಗಳು ಸಾರುತ್ತಿವೆ.

**೨೬೯.** ಪರಮಾತ್ಮನು ಎಲ್ಲರ ಹೃದಯದೊಳಗೂ ಇದ್ದುಕೊಂಡು ಎಲ್ಲವನ್ನೂ ತನ್ನ ಚೈತನ್ಯದ ಬೆಳಕಿನಿಂದ ನೇರಾಗಿ ಬೆಳಗಿ ತೋರಿಸುತ್ತಾ ಇರುತ್ತಾನೆ. ಆದರೆ ಆತನನ್ನು ಮಾತ್ರ ಯಾರೂ ವಿಷಯೀಕರಿಸಿ ನೋಡಲಾರರು. ಆದ್ದರಿಂದ ಅವನನ್ನು **ಅದೃಷ್ಟೋ ದ್ರಷ್ಟಾ** (ತಾನು ಒಬ್ಬರಿಗೂ ಕಾಣಿಸದೆ ಎಲ್ಲವನ್ನೂ ಕಾಣುತ್ತಿರುವಾತನು) ಎಂದು ಕರೆದಿರುತ್ತದೆ.

**೨೭೦.** ನಮ್ಮ ಮುಂದೆ ಹರಡಿಕೊಂಡಿರುವ ದ್ವೈತಪ್ರಪಂಚಕ್ಕೆಲ್ಲ ಒಂದೇ ಒಂದು ತತ್ತ್ವವು ಆಧಾರವಾಗಿರುತ್ತದೆ. ಅದರಲ್ಲಿಯೇ ಜಗತ್ತೆಲ್ಲವೂ ಕಲ್ಪಿತವಾಗಿ ತೋರುತ್ತಿರುವದು. ಆ ಪರಮಾರ್ಥತತ್ತ್ವವನ್ನು ಅಕ್ಷರವೆಂದು ಕರೆಯುವರು. ಅದರಲ್ಲಿ ಬಾಹ್ಯವಿಷಯಗಳ ಧರ್ಮಗಳು ಯಾವವೂ ಇರುವದಿಲ್ಲ. ಅದು ವಿಷಯಿಯೂ ಅಲ್ಲ ; ವಿಷಯವೂ ಅಲ್ಲ. ಅದು ನಿಷ್ಕಲ, ನಿರ್ಧರ್ಮಕವಾದ ನಿರಂಜನ, ಅದ್ವೈತವಾದ ಕೂಟಸ್ಥ ಚೈತನ್ಯಾತ್ಮಸ್ವರೂಪವಾಗಿರುತ್ತದೆ. ಆದ್ದರಿಂದಲೇ ಅದನ್ನು **ಇದಲ್ಲ, ಇದಲ್ಲ**-ಎಂದು ಶ್ರುತಿಯಲ್ಲಿ ವರ್ಣಿಸಿರುತ್ತದೆ.

**೨೭೧.** ಉಪನಿಷತ್ತುಗಳಲ್ಲಿ ವಿದ್ಯಾ ಎಂಬ ಶಬ್ದವನ್ನು ಎರಡು ಅರ್ಥಗಳಲ್ಲಿ ಪ್ರಯೋಗಿಸಿರುತ್ತಾರೆ. ಭಾವನಾರೂಪವಾದ ಧ್ಯಾನ, ಉಪಾಸನೆ-ಎಂಬರ್ಥದಲ್ಲಿಯೂ ವಿದ್ಯೆ-ಎಂಬ ಶಬ್ದವು ಪ್ರಯುಕ್ತವಾಗುತ್ತದೆ. ಈ ಉಪಾಸನಾರೂಪವಾದ ಬ್ರಹ್ಮವಿದ್ಯೆಯಿಂದ ಭಾವನಾಪ್ರಕರ್ಷರೂಪವಾದ ಸಾಕ್ಷಾತ್ಕಾರವನ್ನು ಹೊಂದಿ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಐಶ್ವರ್ಯವನ್ನು ಅನುಭವಿಸಿ ಕಲ್ಪಾಂತರದಲ್ಲಿ ಜ್ಞಾನವನ್ನು ಪಡೆದು ಮುಕ್ತರಾಗಬಹುದು. ವಿದ್ಯೆ- ಎಂಬ ಶಬ್ದವು **ವಸ್ತುತಂತ್ರ**ವಾದ ಜ್ಞಾನವನ್ನು ಹೇಳುವಾಗ ಬ್ರಹ್ಮಜ್ಞಾನಸಮಸಮಯದಲ್ಲಿಯೇ ಮುಮುಕ್ಷುವು ಮುಕ್ತನಾಗುವನು. ಆಗ ಅವನಿಗೆ 'ನನಗೆ ಸಂಸಾರಬಂಧವು ಎಂದಿಗೂ ಇರಲೇ ಇಲ್ಲ, ಇರುವ ಸಂಭವವೂ ಇಲ್ಲ'-ಎಂಬ ರೂಪದ ನಿಶ್ಚಯವು ಉಂಟಾಗಿಬಿಡುತ್ತದೆ.

**೨೭೨.** ಕ್ರಿಯಾಕಾರಕಫಲಾತ್ಮಕವಾದ ಇಡಿಯ ಜಗತ್ತನ್ನೆಲ್ಲ ಪರಮಾತ್ಮನು ತುಂಬಿಕೊಂಡಿರುವದರಿಂದ ಅವನಿಗೆ 'ಪುರುಷ'ನೆಂಬ ಅನ್ವರ್ಥನಾಮವು ಬಂದಿದೆ. ಆ ಪರಮಪುರುಷನು ನಮ್ಮೆಲ್ಲರ **ಹೃದಯಗುಹೆ**ಯಲ್ಲಿಯೂ ಇರುತ್ತಾನೆ. ಆತನನ್ನು ಕಂಡುಕೊಂಡರೆ ನಮ್ಮ ಅವಿದ್ಯೆಯ ಕಗ್ಗಂಟು ಬಿಚ್ಚಿಕೊಳ್ಳುವದು. ಈಗಲೇ ಇಲ್ಲಿಯೇ ಕೃತಕೃತ್ಯರಾಗುವೆವು.

**೨೭೩.** ಚೇತನಾಚೇತನಾತ್ಮಕವಾದ ಜಗತ್ತೆಲ್ಲವೂ ಅದ್ವಿತೀಯಪರಮೇಶ್ವರನಿಂದಲೇ ಸೃಷ್ಟವಾಗಿರುತ್ತದೆ. ಪರಮೇಶ್ವರನು ತಾನು ಇದ್ದಂತೆಯೇ ಇದ್ದುಕೊಂಡು ಜಗತ್ತಿನ ರೂಪದಿಂದಲೂ ತೋರುತ್ತಿರುವದೇ ಅವನ **ಮಾಯಾಸೃಷ್ಟಿ**ಯು.

**೨೭೪.** ಒಂದೇ ಆಗಿರುವ ಸಮುದ್ರದಲ್ಲಿ **ತೆರೆ, ನೊರೆ,** ಗುಳ್ಳೆ-ಮುಂತಾದ ವಿಭಾಗಗಳು ವ್ಯವಹಾರದಲ್ಲಿ ತೋರುವಂತೆಯೂ ಒಬ್ಬನೇ ಆಗಿರುವ ಮನುಷ್ಯನು ತಂದೆ, ಮಗ, ಅಳಿಯ-ಎಂಬ ಬೇರೆಬೇರೆಯ ಹೆಸರುಗಳನ್ನು ಪರಾಪೇಕ್ಷೆಯಿಂದ ಪಡೆಯುವಂತೆಯೂ ಬ್ರಹ್ಮವು ಒಂದೇ ಆಗಿರುತ್ತಿದ್ದರೂ ಅದರಲ್ಲಿ ಈಶ್ವರ, ಜೀವರು, ಅಚೇತನದೃಶ್ಯಗಳು - ಎಂಬ ವಿಭಾಗವುಂಟಾಗಿರುತ್ತದೆ.

**೨೭೫.** ಒಂದೇ ಬ್ರಹ್ಮವೇ ತತ್ತ್ವಜ್ಞಾನಕ್ಕೆ ವಿಷಯವಾದಾಗ ಪರಬ್ರಹ್ಮವೆಂದೂ ಉಪಾಸನೆಗೆ ವಿಷಯವಾದಾಗ ಅಪರಬ್ರಹ್ಮವೆಂದೂ ವ್ಯವಹೃತವಾಗುತ್ತದೆ. ಅಪರಬ್ರಹ್ಮವನ್ನೂ ಕೂಡ ವ್ಯವಹಾರದೃಷ್ಟಿಯಿಂದ ಅದಕ್ಕಿಂತ ಕಡಿಮೆಯ ಅಂತಸ್ತಿನ ತತ್ತ್ವಗಳ **ಅಪೇಕ್ಷೆ**ಯಿಂದ ಪರಬ್ರಹ್ಮವೆಂದು ಕರೆಯಬಹುದು. ಆದರೆ ನಿಜವಾಗಿ ಪರಮಾತ್ಮಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ಯಾವ ಹೆಸರಿನಿಂದ ಕರೆದರೂ ಪರಮೇಶ್ವರನು ಪರಮಾತ್ಮನೇ. ಅವನೇ ಪರಮಾರ್ಥವು.

**೨೭೬.** ಬ್ರಹ್ಮವನ್ನು ವಾಕ್ಕಿನಿಂದ ಹೇಳಿ ತಿಳಿಯಿಸುವದಕ್ಕೆ ಬರುವದಿಲ್ಲ. ವಾಕ್ಕನ್ನೇ ಬ್ರಹ್ಮವು ಬೆಳಗಿ ತಿಳಿಯಿಸಿಕೊಡುತ್ತದೆ. ಬ್ರಹ್ಮವನ್ನು ಮನಸ್ಸಿನಿಂದ ವಿಷಯೀಕರಿಸಿ ಇದು ಇಂಥದ್ದು -ಎಂದು ತಿಳಿಯಿಸಿಕೊಡುವದಕ್ಕೂ ಆಗುವದಿಲ್ಲ. ಮನಸ್ಸನ್ನೇ ಬ್ರಹ್ಮವು ಬೆಳಗಿ ತಿಳಿಯಿಸಿಕೊಡುತ್ತದೆ. ಆದ್ದರಿಂದ ವೇದಾಂತವಾಕ್ಯವು ಹೇಗೆ ಬ್ರಹ್ಮವನ್ನು ತಿಳಿಯಿಸಿ ಕೊಡುವ ಪ್ರಮಾಣವು ? ಎಂದರೆ ಬ್ರಹ್ಮವು ವೇದಾಂತವಾಕ್ಯಕ್ಕೆ ವಿಷಯವೆಂಬ ಅಭಿಪ್ರಾಯವೇನೂ ಇಲ್ಲ. ಬ್ರಹ್ಮದಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿರುವ ಜ್ಞಾತೃಜ್ಞೇಯಾದಿ ವಿಭಾಗವನ್ನು ಅಲ್ಲಗಳೆದು ಅದು **ಸ್ವತಃಸಿದ್ಧ**ವಾದ ಸರ್ವರ ಆತ್ಮನೆಂದು ತಿಳಿಯಿಸುವದರಿಂದಲೇ ವೇದಾಂತವಾಕ್ಯವನ್ನು ಅದಕ್ಕೆ ಪ್ರಮಾಣವೆಂದು ಉಪಚಾರಕ್ಕೆ ಕರೆಯುತ್ತಾರೆ.

**೨೭೭.** ಬಂಧಮೋಕ್ಷಗಳ ವಿಂಗಡವನ್ನುಪದೇಶಿಸುವದು ವ್ಯವಹಾರದೃಷ್ಟಿಯಿಂದ. ಅವಿದ್ಯೆಯಿಂದ ಜನರು ತಮಗೆ ಶರೀರೇಂದ್ರಿಯಗಳ ಸಂಘಾತವು ಕಟ್ಟುಬಿದ್ದಿರುವದೆಂದೂ ಅದರಿಂದ ಸುಖದುಃಖಗಳ ಅನುಭವರೂಪವಾದ ಸಂಸಾರಬಂಧವು ಉಂಟಾಗಿರುವದೆಂದೂ ಭಾವಿಸಿಕೊಂಡಿರುತ್ತಾರೆ. ಈ ಶರೀರಾದಿಗಳ ಸಂಬಂಧವು ಸುಷುಪ್ತಿ ಮರಣಪ್ರಲಯಗಳಲ್ಲಿ ಕೂಡ ಅವ್ಯಕ್ತವಾಗಿದ್ದುಕೊಂಡೇ ಇರುವದೆಂದು ಕೆಲವರ ಭಾವನೆ. ಆದರೆ ನಿಜವೇನೆಂದರೆ : ನಮ್ಮ ಆತ್ಮನು ನಿಜವಾಗಿಯೂ ಎಂದೆಂದಿಗೂ **ಅಶರೀರನೇ** ಆಗಿರುತ್ತಾನೆ. ವ್ಯಕ್ತಾವ್ಯಕ್ತರೂಪವಾದ ಅವಿದ್ಯಾತ್ಮಕಪ್ರಪಂಚವೆಲ್ಲವನ್ನೂ ವ್ಯಾಪಿಸಿಕೊಂಡು ತಾನೊಬ್ಬನೇ ಇದ್ದುಕೊಂಡಿರುತ್ತಾನೆ. ಈ ಪರಮಾರ್ಥವನ್ನು ಅರಿತುಕೊಳ್ಳುವದೇ ನಿಜವಾದ ಮೋಕ್ಷವು.

**೨೭೮.** ವ್ಯವಹಾರವೆಂದರೆ ಮನಸ್ಸಿನಿಂದ ಪ್ರತ್ಯಯವನ್ನು ಮಾಡಿಕೊಂಡು ಆ ಅರಿವಿಗೆ ತಕ್ಕಂತೆ ತನ್ನ ನುಡಿಯನ್ನೂ ಇಟ್ಟುಕೊಳ್ಳುವದು. ಈ ವ್ಯವಹಾರವು

ಶರೀರೇಂದ್ರಿಯಮನಸ್ಸುಗಳಲ್ಲಿ ನಾನು, ನನ್ನದು- ಎಂಬ ಬುದ್ಧಿಯನ್ನಿಟ್ಟುಕೊಂಡು ಆತ್ಮಾನಾತ್ಮಗಳನ್ನು ಒಂದರಲ್ಲೊಂದನ್ನೂ ಒಂದರಲ್ಲೊಂದರ ಧರ್ಮವನ್ನೂ ಹುಟ್ಟುಗಟ್ಟಿಕೊಳ್ಳುವ ಅವಿದ್ಯೆಯಿಂದ ಕೂಡಿರುವಾತನಿಗೆ ಮಾತ್ರವೇ ಇರುತ್ತದೆ. ಆದರೆ ಯಾವನಿಗೆ ಇರುವದೆಲ್ಲವೂ **ನಿತ್ಯಶುದ್ಧಬುದ್ಧಮುಕ್ತಸ್ವಭಾವ**ವಾದ ಆತ್ಮನೇ-ಎಂಬ ಜ್ಞಾನವು ಇರುವದೋ ಅವನು ಸರ್ವವ್ಯವಹಾರವನ್ನೂ ಮೀರಿರುತ್ತಾನೆ. ಏಕೆಂದರೆ ಅವನಿಗೆ ಜ್ಞಾತೃಜ್ಞಾನಜ್ಞೇಯಬುದ್ಧಿಯಾಗಲಿ, ಕೃರ್ತಕರಣಕರ್ಮಬುದ್ಧಿಯಾಗಲಿ, ಇರುವದಕ್ಕೆ ಅವಕಾಶವೇ ಇರುವದಿಲ್ಲ.

**೨೭೯.** ವೇದಾಂತಶಾಸ್ತ್ರಕ್ಕೆ ವಿಷಯವಾಗಿರುವ ಬ್ರಹ್ಮವು ನಿರ್ವಿಶೇಷವಾಗಿರುತ್ತದೆ; ಎಂದರೆ ಅದು ದ್ರವ್ಯ, ಗುಣ, ಕ್ರಿಯೆ, ಸಾಮಾನ್ಯ, ಸಂಬಂಧ-ಮುಂತಾದವುಗಳಲ್ಲಿ ಒಂದೂ ಅಲ್ಲ. ವಿಶೇಷಗಳೆಲ್ಲವೂ ಬ್ರಹ್ಮದಲ್ಲಿ **ಕಲ್ಪಿತ**ವಾಗಿರುವ ನಾಮರೂಪಾತ್ಮಕವಾದ ಜಗತ್ತಿಗೇ ಸೇರಿದವಾಗಿರುತ್ತವೆ. ಹೀಗಿದ್ದರೂ ಬ್ರಹ್ಮವು ನಮ್ಮಗಳ ಆತ್ಮನೇ ಆಗಿರುವದರಿಂದ ಅದನ್ನು ಯಾವ ಪ್ರಮಾಣದ ಹಂಗೂ ಇಲ್ಲದೆ ನೇರಾಗಿ ಅನುಭವದಿಂದಲೇ ಅರಿತುಕೊಳ್ಳಬಹುದೆಂದು ವೇದಾಂತಿಗಳು ಹೇಳುತ್ತಿರುವರು.

**೨೮೦.** ಪರಮಾತ್ಮನು ಪರಮಸೂಕ್ಷ್ಮನೂ ಸರ್ವಕ್ಕೂ ಆತ್ಮನೂ **ಚಿನ್ಮಾತ್ರಸ್ವರೂಪ**ನೂ ಅದ್ವಿತೀಯನೂ ಆಗಿರುವದರಿಂದ ಅವನನ್ನು ಕಾಣುವದಕ್ಕೆ ಮತ್ತೊಂದು ಸಾಧನವಿಲ್ಲ. ಅಂಥ ಸಾಧನವು ನಿಜವಾಗಿ ಬೇಕೂ ಇಲ್ಲ.

**೨೮೧.** ವಿವೇಕಿಯಾದವನು ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ ಮನಸ್ಸನ್ನು ಬುದ್ಧ್ಯಾತ್ಮನಲ್ಲಿಯೂ ಆ ಬುದ್ಧಿಯನ್ನು ಪ್ರಪಂಚೋಪಶಮನಾದ ಪರಮಾತ್ಮನಲ್ಲಿಯೂ ಪ್ರತ್ಯಗ್‌ದೃಷ್ಟಿಯಿಂದ ಲಯಮಾಡಿಕೊಳ್ಳಬೇಕು. ಆಗ ಸ್ವಯಂಜ್ಯೋತಿಯಾದ ಪರಮಾತ್ಮನು ತಾನೇ ಅನುಭವಕ್ಕೆ ಬರುವನು. ಈ ಉಪಾಯಕ್ಕೆ **ಅಧ್ಯಾತ್ಮಯೋಗ**ವೆಂದು ಹೆಸರು.

**೨೮೨.** ಸಾಂಖ್ಯವೆಂಬ ಶಬ್ದವನ್ನು ಎಲ್ಲೆಲ್ಲಿಯೂ ಇರುವ ಅದ್ವೈತಾತ್ಮತತ್ತ್ವದ ಜ್ಞಾನವೆಂಬ ಅರ್ಥದಲ್ಲಿ ಉಪನಿಷತ್ತಿನಲ್ಲಿ ಬಳಸಿರುತ್ತದೆ. ನೇರಾಗಿ ಆತ್ಮತತ್ತ್ವವನ್ನು ಅನುಭವದಿಂದ ಕಂಡುಕೊಂಡವನಿಗೆ ಯಾವ ವಿಶೇಷವೂ ಇಲ್ಲದ ಅದೊಂದೇ ಪರಮಾರ್ಥವು ಎಂಬ ಮರ್ಮವು ತಿಳಿದಿರುತ್ತದೆ. ಅದೇ **ವೈದಿಕಸಾಂಖ್ಯ**ವು. ಸ್ಥೂಲ ತತ್ತ್ವವನ್ನು ವಿಮರ್ಶಿಸಿದರೆ ಅದು ಸೂಕ್ಷ್ಮವಾದ ವ್ಯಾಪಕವಾದ ಅದರ ತಿರುಳಾದ ಸೂಕ್ಷ್ಮದಲ್ಲಿ ಪರ್ಯವಸಾನವಾಗುವದು. ಹೀಗೆ ಸೂಕ್ಷ್ಮಸೂಕ್ಷ್ಮತರತತ್ತ್ವಗಳನ್ನು ಕಾಣುತ್ತಾ ಹೋದರೆ ಎಲ್ಲಕ್ಕೂ ಸೂಕ್ಷ್ಮವೂ ತಿರುಳೂ ಆಗಿರುವ ಪರಮಾರ್ಥದ ದರ್ಶನವೇ ಆಗಿಬಿಡುವದು. ಈ ಪ್ರಯತ್ನವಿಶೇಷವೇ ಯೋಗವು.

**೨೮೩.** ಭಗವಂತನು ಸಕಲಜೀವರುಗಳ ಹೃದಯದಲ್ಲಿಯೂ ಇರುತ್ತಿದ್ದರೂ ಸರ್ವವ್ಯಾಪಕನಾಗಿರುತ್ತಿದ್ದರೂ ವಿಷಯೋನ್ಮುಖರಾಗಿರುವವರಿಗೆ ಗೋಚರನಾಗದೆ ಇರುತ್ತಾನೆ. ಏಕೆಂದರೆ ಅವನ ಸ್ವರೂಪವು ಸೂಕ್ಷ್ಮವಾಗಿರುವ ವಸ್ತುಗಳೆಲ್ಲಕ್ಕಿಂತಲೂ ಸೂಕ್ಷ್ಮತರವಾಗಿರುತ್ತದೆ. **ಅತೀಂದ್ರಿಯ**ವಾಗಿರುವ ಆ ಸ್ವರೂಪವು ಎಲ್ಲರಿಗೂ ಆತ್ಮನೇ ಆಗಿದ್ದರೂ ಕಾಮದೂಷಿತವಾದ ಚಿತ್ತವುಳ್ಳವರಿಗೆ ಅದನ್ನು ಕಾಣುವದಕ್ಕೆ ಕಾಮವೇ ಅಡ್ಡಿಯಾಗಿರುತ್ತದೆ. ಆದ್ದರಿಂದ ಕಾಮವನ್ನು ತೊಲಗಿಸಿಕೊಂಡವರಿಗೆ ಇಂದ್ರಿಯಗಳೂ ಮನಸ್ಸೂ ತಿಳಿಯಾಗಿ ಸ್ವಚ್ಛವಾಗಿರುವದರಿಂದ ಅವನು ನಮ್ಮ ಪರಮಾರ್ಥವೇ- ಎಂಬ ಅನುಭವವುಂಟಾಗುವದು.

**೨೮೪.** ಬ್ರಹ್ಮವಿದ್ಯೆಯೆಂಬುದು ಬರಿಯ ಬುದ್ಧಿಯಿಂದ ಗ್ರಹಿಸತಕ್ಕ ತಿಳಿವಳಿಕೆ ಯಲ್ಲ. ಯಾವನು ನಿತ್ಯಾನಿತ್ಯವಿವೇಕ, ಇಹಾಮುತ್ರಫಲಭೋಗವಿರಾಗ, ಶಮಾದಿ ಸಾಧನಗಳು, ಮುಮುಕ್ಷುತ್ವ - ಎಂಬ **ನಾಲ್ಕು ಸಾಧನ**ಗಳನ್ನು ಅಳವಡಿಸಿಕೊಂಡಿರು ತ್ತಾನೋ ಅವನೇ ಶಾಸ್ತ್ರಾಚಾರ್ಯರುಗಳ ಉಪದೇಶದಿಂದ ಈ ವಿದ್ಯೆಯನ್ನು ಅನುಭವಕ್ಕೆ ತಂದುಕೊಳ್ಳಬಲ್ಲನು.

**೨೮೫.** ಭಗವಂತನಲ್ಲಿಯೇ ಮನಸ್ಸು ನೆಲೆನಿಲ್ಲಿಸಿಕೊಂಡು ಪ್ರೇಮಪೂರ್ವಕವಾಗಿ ಆತನನ್ನೇ ಭಜಿಸುತ್ತಾ ಶರಣುಬಂದವರಿಗೆ ತನ್ನನ್ನೇ ಸೇರುವ **ಸದ್ಬುದ್ಧಿ**ಯನ್ನು ಆತನೇ ಅನುಗ್ರಹಿಸುವನು.

**೨೮೬.** ಪರಮಾತ್ಮನು ಎಲ್ಲಕೂ ಆತ್ಮನು ; ಎಲ್ಲಕ್ಕೂ ಆಧಾರನು. ಎಲ್ಲೆಲ್ಲೂ ಇದ್ದು ಕೊಂಡಿರುವವನು. ಆದ್ದರಿಂದ ಆತನನ್ನು ಕಾಣಲು ಯಾವ ತೀರ್ಥಕ್ಷೇತ್ರಗಳಿಗೂ ಹೋಗಬೇಕಾಗಿರುವದಿಲ್ಲ. ನಮ್ಮ ಸ್ಥೂಲಸೂಕ್ಷ್ಮಶರೀರಗಳೆಂಬ ಕ್ಷೇತ್ರದಲ್ಲಿರುವ **ಹೃದಯದೇವಾಲಯದ** ಗರ್ಭಗುಡಿಯಲ್ಲಿ ಯಾವ ಪೂಜಾರಿಯ ಅಡ್ಡಿಯೂ ಇಲ್ಲದೆ ಆತನನ್ನು ಕಂಡು ಪೂಜಿಸಿ ಧನ್ಯರಾಗಬಹುದು.

**೨೮೭.** ನಮ್ಮಲ್ಲಿ ಪ್ರತಿಯೊಬ್ಬನಿಗೂ ಆತ್ಮವೆನಿಸಿಕೊಂಡಿರುವ ಪರಮಾರ್ಥ ತತ್ತ್ವಕ್ಕೆ **ಅಕ್ಷರ**ವೆಂದು ಹೆಸರು. ಅದು ಹೊರಗಿನ ವಿಷಯಗಳಂತೆ ಇಂದ್ರಿಯ ಗೋಚರವಾಗಿರುವದಿಲ್ಲ. ಕರ್ಮಗಳಿಗೆ ಸಾಧನವಾಗಿ ಉಪಯೋಗಿಸಿಕೊಳ್ಳುವದಕ್ಕೆ ಬರುವಂತಿರುವದಿಲ್ಲ. ಅದಕ್ಕೆ ಯಾವ ಇಂದ್ರಿಯಗಳಾಗಲಿ ಅಂತಃಕರಣವಾಗಲಿ ಇರುವದಿಲ್ಲ. ಹೀಗಿದ್ದರೂ ಅದೇ ಸಮಸ್ತವಿಶ್ವಕ್ಕೂ ಕಾರಣವಾಗಿ ಸಮಸ್ತ ವಿಶ್ವರೂಪದಿಂದಲೂ ತೋರುತ್ತಾ ಇರುವದು. ಆ ತತ್ತ್ವವು ಸಗುಣ, ನಿರ್ಗುಣ, ಸಾಕಾರ, ನಿರಾಕಾರ, ಜೀವೇಶ್ವರವಿಭಾಗರಹಿತ, ಜೀವೇಶ್ವರವಿಭಾಗವುಳ್ಳದ್ದಾಗಿಯೂ ತೋರುತ್ತಿರು ವದು.

**೨೮೮.** ನಾನು, ನೀನು, ಅವರು, ಇವರು - ಎಂದು ನಮಗೆ ಮನಸ್ಸಿನಲ್ಲಿ ಹೊಳೆಯುತ್ತಿರುವ ಜೀವರೆಲ್ಲರಿಗೂ ಸಮಾನವಾಗಿ ಒಂದು ಕೂಟಸ್ಥಚೈತನ್ಯಸ್ವರೂಪವು ಇರುತ್ತಿರುವದು. ಒಬ್ಬ ಸೂರ್ಯನನ್ನೇ ನಾವೆಲ್ಲರೂ ನಮ್ಮ ನಮ್ಮ ಮನೆಯ ಪೂರ್ವದಿಕ್ಕಿನಲ್ಲಿ ಕಾಣುತ್ತಿರುವಂತೆ ಈ ಒಂದು ತತ್ತ್ವವನ್ನೇ ನಮ್ಮೊಳಗಿನ ತಿರುಳಾದ ಆತ್ಮನೆನ್ನುತ್ತಿರುವೆವು. ಸರ್ವಾಂತರಾತ್ಮನೆಂದರೂ ಪರಮಾತ್ಮನೆಂದರೂ ಈತನೇ. ಈ ಆತ್ಮನು ಯಾವ ಇಂದ್ರಿಯಕ್ಕಾಗಲೀ ಮನಸ್ಸಿಗಾಗಲೀ ಗೋಚರನಲ್ಲ. ಪ್ರಮಾತೃ ಪ್ರಮಾಣಪ್ರಮೇಯಗಳೆಂದು ವಿಂಗಡವಾಗಿರುವ ಜಗತ್ತೆಲ್ಲವನ್ನೂ ಬೆಳಗುತ್ತಾ ಜಗತ್ತೆಲ್ಲವೂ ಪ್ರಳಯವಾದಾಗ ಅದರ **ಬೀಜರೂಪ**ವನ್ನೂ ಬೆಳಗುತ್ತಾ ತಾನೂ ತನಗೆ ತನ್ನದೇ ಆದ ಅನುಬೆಳಕಿನಿಂದಲೇ ಈ ಆತ್ಮನು ಬೆಳಗುತ್ತಿರುವನೆಂದು ಶ್ರುತಿಗಳು ತಿಳಿಸುತ್ತಿವೆ.

**೨೮೯.** ಸೂರ್ಯನು ಬೆಳಗಿ ತೋರುವ ವಸ್ತುಗಳ ಅಪೇಕ್ಷೆಯಿಂದ **ಪ್ರಕಾಶ**ಕನೆನಿಸಿದರೂ ಅವನ ಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಇಲ್ಲದಿರುವಂತೆ, ಬ್ರಹ್ಮವು ಈಶ್ವರನೆನಿಸಿರುವಾಗಲೂ ಅದರ ಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ.

**೨೯೦.** ಬ್ರಹ್ಮ, ಅಕ್ಷರ, ಪುರುಷ, ಸತ್ಯ - ಮುಂತಾದ ಹೆಸರುಗಳಿಂದ ಉಪನಿಷತ್ತುಗಳು ಕರೆದಿರುವ ಪರಮಾರ್ಥವು ತಾನಿದ್ದಂತೆಯೇ ಇದ್ದು ಈಶ್ವರ, ಜೀವ, ಜಗತ್ತು - ಮೂರು **ರೂಪ**ದಿಂದ ವಿಂಗಡಿಸಿಕೊಂಡಿರುವಂತೆ ತೋರುತ್ತಿರುವದು. ಇದನ್ನು ವಿಶದಗೊಳಿಸುವದಕ್ಕೆಂದೇ ಉಪನಿಷತ್ತುಗಳಲ್ಲಿ ಬ್ರಹ್ಮವು ಜಗತ್ತಿನ ಜನ್ಮಾದಿಗಳಿಗೆ ಕಾರಣವೆಂದು ಹೇಳಿದೆ. ಇದು ಕಾರ್ಯಕಾರಣವಾದವಲ್ಲ.

**೨೯೧.** ಉಪನಿಷತ್ತುಗಳಲ್ಲಿ ವಿದ್ಯೆ, ಜ್ಞಾನ - ಎಂಬ ಶಬ್ದಗಳನ್ನೂ ಅವುಗಳ ಪರ್ಯಾಯಶಬ್ದಗಳನ್ನೂ ಎರಡು ಬೇರೆಬೇರೆಯ ಅರ್ಥಗಳಲ್ಲಿ ಬಳಸಿರುತ್ತದೆ. ವಿದ್ಯೆ ಎಂದರೆ ಜ್ಞಾನ. ವಸ್ತುವನ್ನು ಇದ್ದುದ್ದು ಇದ್ದಂತೆ ತಿಳಿದುಕೊಳ್ಳುವ ಅರಿವು ಎಂಬುದು ಒಂದು ಅರ್ಥ. ಬ್ರಹ್ಮವಿದ್ಯೆಯಿಂದ ಅವಿದ್ಯೆಯೂ ಅದರಿಂದಾಗುವ ಅನರ್ಥಗಳೂ ನಾಶವಾಗುವವು - ಎಂಬಲ್ಲಿ ವಸ್ತುತಂತ್ರವಾದ ಅರಿವೆಂಬುದೇ ವಿದ್ಯಾಶಬ್ದಕ್ಕೆ ಅರ್ಥವು. ಆದರೆ ಶಾಸ್ತ್ರದಲ್ಲಿ ಹೇಳಿರುವಂತೆ ಬ್ರಹ್ಮವನ್ನು ಕೆಲಕೆಲವು ಗುಣಗಳುಳ್ಳದ್ದು - ಎಂದು ಭಾವನೆಮಾಡುವ ಉಪಾಸನೆಯೆಂಬ ಕ್ರಿಯೆಯನ್ನೂ ವಿದ್ಯೆ - ಎಂಬ ಶಬ್ದದಿಂದ ವೇದಾಂತದಲ್ಲಿ ಕರೆಯಲಾಗಿದೆ. **ಅಪರಬ್ರಹ್ಮವಿದ್ಯೆ** ಎಂಬಲ್ಲಿ ಇಂಥ ಉಪಾಸನಾರೂಪವಾದ ಕ್ರಿಯೆಯೇ ವಿದ್ಯಾಶಬ್ದಕ್ಕೆ ಎರಡನೆಯ ಅರ್ಥ. ಈ ವಿಂಗಡವನ್ನು ನಿಶ್ಚಯಿಸಿಕೊಳ್ಳದ್ದರಿಂದ ವೇದಾಂತಿಗಳಲ್ಲಿ ಉಪನಿಷತ್ತುಗಳ ಪರಮಸಿದ್ಧಾಂತದ ಬಗ್ಗೆ ಮತಭೇದಗಳುಂಟಾಗಿರುತ್ತವೆ.

**೨೯೨.** ಈಶ್ವರನು ಜಗತ್ತನ್ನು ಸೃಷ್ಟಿಸಿರುತ್ತಾನೆ ; ಈಶ್ವರನೇ ಜಗತ್ತಾಗಿರುತ್ತಾನೆ.- ಎಂದು ಉಪನಿಷತ್ತುಗಳಲ್ಲಿ ಹೇಳಿರುವದು ಈಶ್ವರನಿಗೂ ಜಗತ್ತಿಗೂ ಇರುವ ಸಂಬಂಧವನ್ನು ತಿಳಿಯಿಸುವದಕ್ಕೆ ಒಂದು ಉಪಾಯ. ಜಗತ್ತು ಈಶ್ವರನಿಗಿಂತ ಬೇರೆಯಾಗಿರುವದಿಲ್ಲ ; ಈಶ್ವರನನ್ನೇ ಜಗತ್ತಿನ ರೂಪದಲ್ಲಿ ಕಾಣುತ್ತಿದ್ದೇವೆ -ಎಂಬ ತತ್ತ್ವವನ್ನು ಶ್ರುತಿಗಳು ಹೇಳಿರುವವು. ಪ್ರಪಂಚವೆಂಬುದು ಈಶ್ವರನಲ್ಲಿ ಮಾಯೆಯಿಂದ ಕಲ್ಪಿತವಾಗಿರುವ ವ್ಯಾವಹಾರಿಕರೂಪ ; ಅದರ ಪರಮಾರ್ಥವು ಈಶ್ವರನೇ- ಎಂಬುದೇ ಶ್ರುತಿಗಳ **ತಾತ್ಪರ್ಯ.**

**೨೯೩.** ಪರಮಾರ್ಥಸತ್ಯಸ್ವರೂಪನಾದ ನಿರ್ವಿಶೇಷರೂಪದ ಪರಮಾತ್ಮನೇ ನಾಮರೂಪಾತ್ಮಕವಾದ ಜಗತ್ತೆಲ್ಲವೂ ಆಗಿರುತ್ತಾನೆ. ಸತ್ಯಾನೃತರೂಪವಾಗಿ ತೋರುತ್ತಿರುವ, ಚೇತನಾಚೇತನಾತ್ಮಕವಾಗಿರುವ ಈ ಜಗತ್ತೆಂಬ ವಿಕಲ್ಪಕ್ಕೆಲ್ಲ **ಆಸ್ಪದ**ವಾಗಿರುವಾತನು ಆ ಪರಮಾತ್ಮನೇ.

**೨೯೪.** ಶಾರೀರಾತ್ಮ, ಜೀವಾತ್ಮ, ವಿಜ್ಞಾನಾತ್ಮ - ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುವ ನಮ್ಮ ಆತ್ಮನು ವ್ಯವಹಾರದಲ್ಲಿ ಸಂಸಾರಿಯೆಂದು ಕಾಣುತ್ತಿದ್ದರೂ ಶಾಸ್ತ್ರದೃಷ್ಟಿಯಿಂದ ವಿಚಾರಮಾಡುವ ಅಧಿಕಾರಿಗಳಾದ **ಜಿಜ್ಞಾಸು**ಗಳಿಗೆ ಅವನೇ ಅಸಂಸಾರಿಯಾದ ಪರಬ್ರಹ್ಮವೆಂಬುದು ಅನುಭವಕ್ಕೆ ಬರುವದು.

**೨೯೫.** ಪರಮಾತ್ಮನು ನಿತ್ಯನಿರವಯವನಾಗಿದ್ದರೂ ಅವಿದ್ಯೆಯಿಂದ ತೋರಿಕೊಳ್ಳುವ ನಾಮರೂಪಾತ್ಮಕವಾದ ಮಾಯಾಪ್ರಪಂಚವು ವ್ಯವಹಾರಾವಸ್ಥೆಯಲ್ಲಿ ಅವನಲ್ಲಿ ತೋರುತ್ತಿರುವದು. ಎಲ್ಲಿಯವರೆಗೆ ಬಿಡಿಬಿಡಿಯಾಗಿರುವ ನಾಮರೂಪಗಳ ಪ್ರಪಂಚವನ್ನು ಕಾಣುವ ಅವಿದ್ಯೆಯಿಂದ ಜನರು ಭ್ರಾಂತರಾಗಿರುವರೋ ಅಲ್ಲಿಯವರೆಗೆ ಅವರಿಗೆ 'ನಾಮರೂಪಗಳಿಂದಾಗುವ ದೇಹೇಂದ್ರಿಯಗಳ ಸಂಘಾತದ ಅಭಿಮಾನವುಳ್ಳ ಸಂಸಾರಿಗಳು ನಾವು' - ಎಂಬ ತಪ್ಪು ತಿಳಿವಳಿಕೆಯು ಹೋಗವದಿಲ್ಲ. ಅಲ್ಲಿಯವರೆಗೂ ಮತ್ತೆ ಮತ್ತೆ ಹುಟ್ಟಿ ಸಾಯುವ ಜೀವರೇ ತಾವೆಂಬ ನಂಬಿಕೆಯು ಗಟ್ಟಿಯಾಗಿ ಇದ್ದುಕೊಂಡಿರುತ್ತದೆ. ಆದರೆ ಯಾವಾಗ 'ನಾಮರೂಪಾತ್ಮಕಜಗತ್ತೆಲ್ಲವೂ ನಿಷ್ಕಲನಾದ ಆತ್ಮನಲ್ಲಿ ಅವಿದ್ಯೆಯಿಂದ ತೋರುವ ಮಾಯಾಮಾತ್ರವು, ಅದರ ನಿಜವು ನಿಷ್ಕಲವಾದ, ನಾಮರೂಪರಹಿತನಾದ ಪುರುಷನೇ' - ಎಂಬುದು ಶಾಸ್ತ್ರಾಚಾರ್ಯರ ಉಪದೇಶದಿಂದ ಅನುಭವಕ್ಕೆ ಬರುವದೋ ಆಗ ಜಿಜ್ಞಾಸುಗಳಿಗೆ **ಮೃತ್ಯುವಿನ ಅಂಜಿಕೆ**ಯು ಹಾರಿಹೋಗುವದು.

**೨೯೬.** ಮನುಷ್ಯನು ಇಂದ್ರಿಯಗಳಲ್ಲಿ ತಾದಾತ್ಮ್ಯವನ್ನು ಹೊಂದಿ ಅವು ಎತ್ತ ಹರಿದರೆ ಅತ್ತ ತನ್ನ ಮನಸ್ಸನ್ನು ಹರಿಯಬಿಡುತ್ತಾ ಸ್ವೇಚ್ಛೆಯಿಂದ ವರ್ತಿಸಿ ಪಾಪವನ್ನು ಗಂಟುಹಾಕಿಕೊಂಡು ದುರ್ಗತಿಗೆ ಇಳಿಯುತ್ತಿರುವನು. ಇಲ್ಲವೆ ಶಾಸ್ತ್ರೀಯಕರ್ಮವನ್ನು

ಮಾಡಿದರೂ ಅನಿತ್ಯವಾದ ಸುಖವನ್ನೇ ಹೆಚ್ಚಿನ ಪುರುಷಾರ್ಥವೆಂದು ಭ್ರಮಿಸಿ ಮತ್ತೆ ಮತ್ತೆ ಸಂಸಾರಕ್ಕೆ ಇಳಿಯುತ್ತಿರುತ್ತಾನೆ. ಆದರೆ ಯಾವಾಗ **ವೈರಾಗ್ಯ**ದಿಂದ ಮನಸ್ಸನ್ನು ಹಿಮ್ಮೆಟ್ಟಿಸಿಕೊಂಡು ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ - ಎಂಬ ಸಾಧನಗಳನ್ನು ಅಳವಡಿಸಿಕೊಳ್ಳುವನೋ ಆಗ ಧರ್ಮಾಧರ್ಮಗಳ ಕಲ್ಮಷವನ್ನು ತೊಳೆದುಕೊಂಡು ತನ್ನ ಆತ್ಮನೇ ಪರಮಾತ್ಮನೆಂದು ಕಂಡುಕೊಳ್ಳುವನು. ಆಗ ಸರ್ವವೂ ತಾನೇ - ಎಂಬುದನ್ನು ನಿಶ್ಚಯಿಸಿಕೊಂಡು ಪರಮಪುರುಷಾರ್ಥವನ್ನು ಪಡೆದುಕೊಳ್ಳುವನು.

**೧೯೭.** ಅವಿದ್ಯೆ, ಕಾಮ, ಕರ್ಮ- ಇವುಗಳು ಮನುಷ್ಯನಿಗೆ ಒಂದರ ಹಿಂದೊಂದು ಆಗುತ್ತಲೇ ಇರುವದರಿಂದ ಜನನಮರಣರೂಪವಾದ ಸಂಸಾರವು ಜೀವನಿಗೆ ಆಗುತ್ತಿರುವಂತೆ ತೋರುತ್ತಿರುವದು. ಆದ್ದರಿಂದ ಕಾಮಗಳು ಅತ್ಯಂತವಾಗಿ ತೊಲಗಿದ್ದೇ ಮರ್ತ್ಯನಾದ **ಜೀವನು** ಅಮೃತವಾದ ಬ್ರಹ್ಮವನ್ನು ಪಡೆದುಕೊಂಡದ್ದರ ಗುರುತು.

**೧೯೮.** ನಮ್ಮ ಆತ್ಮನು ಈಗ ಮುಪ್ಪು, ಸಾವು, ಅಂಜಿಕೆ - ಮುಂತಾದ ಸಾಂಸಾರಿಕಧರ್ಮಗಳಿರುವವನಂತೆ ತೋರುತ್ತಿದ್ದರೂ ಇವನ ಪರಮಾರ್ಥರೂಪವು ಯಾವದೊಂದು ಧರ್ಮವೂ ಇಲ್ಲದ **ಪರಬ್ರಹ್ಮವೇ** ಆಗಿದೆ.

**೧೯೯.** ಜೀವರುಗಳು ಅಸುರ, ದೈವ - ಎಂಬ ಎರಡು ಬಗೆಗಳಲ್ಲಿ ಒಂದು ಸ್ವಭಾವದವರಾಗಿರುತ್ತಾರೆ. ಅಸುರಸಂಪತ್ತಿನವರು ಪ್ರಕೃತಿವಶರಾಗಿ ಕಾಮಕ್ರೋಧ ಲೋಭಗಳೆಂಬ ದೋಷಗಳಿಗೆ ವಶರಾಗಿ ನಡೆದುಕೊಂಡು ಅದೇ ಗತಿಗೆ ಹೋಗುತ್ತಾರೆ. **ದೈವಪ್ರಕೃತಿ**ಯವರು ದಮ, ದಯೆ, ದಾನ- ಎಂಬೀ ಪ್ರತಿಪಕ್ಷಗಳಿಂದ ಕಾಮಾದಿಗಳನ್ನು ಗೆದ್ದುಕೊಂಡು ಸಂಸಾರಬಂಧನದಿಂದ ಮುಕ್ತರಾಗುವರು.

**೨೦೦.** ವಾಸುದೇವಭಗವಂತನೊಬ್ಬನೇ ನಿಜವಾಗಿರುವವನು. ಅವನೇ ಎಲ್ಲಾ ಪ್ರಾಣಿಗಳಿಗೂ ಆತ್ಮನು. ಆದರೆ ಅಸುರಸಂಪತ್ತಿನ ಜನರು ತಮ್ಮ ತಮ್ಮಲ್ಲಿರುವ ಮತ್ತೆಲ್ಲರ ಆತ್ಮನೇ ಆಗಿರುವ ಆ ಭಗವಂತನನ್ನು ಮರೆತು ಜೀವರುಗಳಲ್ಲಿ **ತಾರತಮ್ಯ**ವನ್ನು ಕಲ್ಪಿಸಿಕೊಂಡು ರಾಗದ್ವೇಷಗಳಿಗೆ ಬಲಿಯಾಗಿರುತ್ತಾರೆ. ಈ ಭಗವದ್ದ್ವೇಷದ ಫಲವಾಗಿ ಅವರಿಗೆ ಕ್ರೂರತರವಾದ ಜಂತುಗಳ ಜನ್ಮವೇ ಮತ್ತೆ ಮತ್ತೆ ಬಂದು ಸ್ಥಾವರಾಂತವಾದ ಅಧೋಗತಿಯೇ ಪ್ರಾಪ್ತವಾಗುವದು.

**೨೦೧.** ಮಾನವನ **ಅಂತಃಕರಣವು** ತ್ರಿಗುಣಾತ್ಮಕವಾದ ಪ್ರಕೃತಿಯ ಪರಿಣಾಮ ದಿಂದಾದ ಕಾರ್ಯವಾಗಿರುತ್ತದೆ. ಆದ್ದರಿಂದ ಯಾವನಾದರೊಬ್ಬನ ನಡತೆಯಿಂದ ಅವನು ಸ್ವಾತಿಕನೋ, ರಾಜಸನೋ, ತಾಮಸನೋ - ಎಂಬುದನ್ನು ನಿಶ್ಚಯಿಸಿ ಕೊಳ್ಳಬೇಕಾಗುವದು. ಮನುಷ್ಯನ ಸ್ವಾಭಾವಿಕವಾದ ಆಹಾರ, ಅವನು ಮಾಡುವ ದೇವರ

ಪೂಜೆ, ದಾನ, ತಪಸ್ಸು - ಇವುಗಳು ಯಾವ ಗುಣದ ಕಾರ್ಯವೆಂಬುದನ್ನೂ ಆಯಾ ಅನುಷ್ಠಾನದ ಸ್ವಭಾವದಿಂದಲೇ ನಿಶ್ಚಯಿಸಬೇಕಾಗುವದು.

**೩೦೨.** ಪ್ರಕೃತಿಯೇ ತಾನೆಂಬ ಅಭಿಮಾನವನ್ನು ಪಡೆದು ಗುಣಗಳಲ್ಲಿ ಸಕ್ತರಾಗುವದರಿಂದ ಜೀವರು ತಮ್ಮ ತಮ್ಮ ಕರ್ಮಗಳಿಗೆ ಅನುಗುಣವಾಗಿ ಸಾತ್ವಿಕ ರಾಜಸತಾಮಸಜನ್ಮಗಳನ್ನು ಪಡೆಯುತ್ತಿರುವರು. ಆದರೆ ಮುಮುಕ್ಷುಗಳಾದವರು ಶುದ್ಧ ಸತ್ತ್ವದ ಅವಲಂಬನೆಯಿಂದ ಮೂರುಗುಣಗಳನ್ನೂ ಮೀರಿ ಪರಮಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕೆ ಯತ್ನಿಸಬೇಕು. ಇದನ್ನೇ **ಯೋಗಮಾರ್ಗ**ವೆಂದು ಕರೆಯುತ್ತಾರೆ.

**೩೦೩.** ಕರ್ತೃತ್ವಭೋಕ್ತೃತ್ವರೂಪವಾದ ಅಭಿಮಾನವನ್ನು ತ್ಯಜಿಸಿದವನು ಪರಮಾರ್ಥಸಂನ್ಯಾಸಿಯಾಗಿ ಮುಕ್ತನೇ ಆಗಿರುತ್ತಾನೆ. ಈ ಪರಮಾರ್ಥತತ್ತ್ವ ಜ್ಞಾನದಿಂದ ದೊರಕುವ ಸಂನ್ಯಾಸವು ಇನ್ನೂ ದಕ್ಕದೆ ಇರುವಾತನು ತಕ್ಕಷ್ಟು ತೀವ್ರವಾದ ವೈರಾಗ್ಯವು ಉಂಟಾಗುವವರೆಗೆ **ದ್ವಂದ್ವಪ್ರಹಾಣ**ಪೂರ್ವಕವಾಗಿ ಕರ್ಮವನ್ನು ಮಾಡುತ್ತಿರುವದೇ ಮೇಲು.

**೩೦೪.** ಸ್ವಾರ್ಥಪರರಾದ ಜನರು ತಮಗೆ ಇಷ್ಟವಾದ ವಸ್ತುಗಳಲ್ಲಿಯೇ ತಮ್ಮ ಮನೋಬುದ್ಧಿಗಳು ನೆಟ್ಟುಕೊಳ್ಳುವಂತೆ ಮಾಡಿರುತ್ತಾರೆ. ಅವರು ಸಾಯುವ ಕಾಲ ದಲ್ಲಿಯೂ ಅದನ್ನೇ ಸ್ಮರಿಸುತ್ತಾ ಆಯಾ ಸ್ಮರಣೆಗೆ ತಕ್ಕಂತೆ ಬೇರೆಬೇರೆಯ ಜನ್ಮವನ್ನು ಪಡೆಯುವರು. ಆದರೆ ಯಾರು ಇಡಿಯ ವಿಶ್ವವೇ ಭಗವಂತನ ಶರೀರವೆಂದು ಭಾವಿಸಿ ಕೊಂಡು ಆ ವಿಶ್ವರೂಪದಲ್ಲಿಯೇ ಮನೋಬುದ್ಧಿಗಳನ್ನು ಕೇಂದ್ರೀಕರಿಸಿಕೊಂಡಿರು ವರೋ ಅವರು ಶರೀರವು ಬಿದ್ದುಹೋದ ಬಳಿಕ ಆ **ವಿಶ್ವರೂಪ**ದಲ್ಲಿಯೇ ಒಂದಾಗಿ ಬಿಡುವರು.

**೩೦೫.** ಸರ್ವಪ್ರಾಣಿಗಳಲ್ಲಿಯೂ ಕೂಟಸ್ಥನಿತ್ಯಚೈತನ್ಯಸ್ವರೂಪದಿಂದಿರುವ, ಕೇವಲನೂ ನಿರ್ಗುಣನೂ ಆಗಿರುವ **ಸರ್ವಸಾಕ್ಷಿ**ಯೇ ಭಗವಂತನು. ಆತನು ನಿರ್ಗುಣ ನಾಗಿರುವದರಿಂದ ಆತನಿಗೆ ಬೇಕಾದವರೂ ಇಲ್ಲ, ಬೇಡವಾದವರೂ ಇಲ್ಲ. ಆದರೂ ಬೆಂಕಿಯು ಸ್ವಭಾವದಿಂದಲೇ ಬಿಸಿಯಾಗಿದ್ದು ತನ್ನ ಹತ್ತಿರಕ್ಕೆ ಬಂದವರ ಚಳಿಯನ್ನು ಹೋಗಲಾಡಿಸುವಂತೆ 'ಆತನೇ ನಮ್ಮೆಲ್ಲರ ಆತ್ಮನು' ಎಂದು ಯಾರು ಪ್ರೇಮದಿಂದ ಭಜಿಸುವರೋ ಅವರಲ್ಲಿ ಸ್ವಭಾವದಿಂದಲೇ ಇದ್ದುಕೊಂಡು ಅನುಗ್ರಹಿಸುತ್ತಿರುವನು.

**೩೦೬.** **ಭಗವದ್ಗೀತೆ**ಯ ಅರ್ಥವನ್ನು ಅರಿತುಕೊಂಡು ಭಗವಂತನೇ ನಮ್ಮೆಲ್ಲರ ಆತ್ಮನು - ಎಂಬುದನ್ನು ಅನುಸಂಧಾನಮಾಡುತ್ತಿರುವವರು ಭಗವಂತನ ಪರಮಾನು ಗ್ರಹಕ್ಕೆ ಪಾತ್ರರಾಗಿರುವರು. ಅವರಿಗೆ ಭಗವಂತನಲ್ಲಿ ಮಿಗಿಲಿಲ್ಲದ ಪ್ರೇಮವಿರು ವಂತೆಯೇ ಭಗವಂತನಿಗೂ ಅವರಲ್ಲಿ ಮಿಗಿಲಿಲ್ಲದ ಪ್ರೇಮವು ಬೇರೂರಿಕೊಂಡಿರುತ್ತದೆ.

ಅಂಥ ಭಗವದ್ಭಕ್ತರು ಗೀತಾರ್ಥವನ್ನು ಅರಿತುಕೊಂಡು ತಾವೂ ಆನಂದದಿಂದಿರುವಂತೆಯೇ ಅದನ್ನು ಭಗವಂತನ ಭಕ್ತರಿಗೆ ಹೇಳಿ ನಲಿಯುವದರಲ್ಲಿಯೂ ಅದೇ ಬಗೆಯ ಪರಮಾದರವನ್ನು ತೋರಿಸುತ್ತಿರುವರು. ಹೀಗೆ ಗೀತಾರ್ಥವನ್ನು ಪ್ರವಚನಮಾಡಿ ಆಸ್ತಿಕರಿಗೆ ಬೋಧನೆಮಾಡುವದು ಪರಭಕ್ತಿಯ ಒಂದು ಹೆಗ್ಗುರುತಾಗಿರುತ್ತದೆ.

**೩೦೭.** ಭಗವಂತನು ಜಗತ್ತಿಗೂ ಜೀವರಿಗೂ ನಿಜವಾಗಿ ಆತ್ಮನಾಗಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾನೆ. ಸಾಧಕರು ಇದನ್ನು ಮನದಂದುಕೊಂಡು ಶಾಸ್ತ್ರೀಯಕರ್ಮಗಳನ್ನೂ ತಮ್ಮ ಲೌಕಿಕಕರ್ಮಗಳನ್ನೂ ಆತನಿಗೆ ಅರ್ಪಿಸಿ ಆರಾಧನೆಯನ್ನು ಮಾಡಬೇಕು. ಇದೇ ಕರ್ಮಯೋಗವು. ಕರ್ಮಯೋಗದಲ್ಲಿ ಸಂಗತ್ಯಾಗಫಲತ್ಯಾಗಗಳ ರೂಪವಾದ ಸಂನ್ಯಾಸವೂ ಭಗವಂತನಲ್ಲಿಯೇ ಚಿತ್ತವನ್ನು ನೆಲೆನಿಲ್ಲಿಸಿಕೊಳ್ಳುವ ರೂಪದ ಯೋಗವೂ ಅಡಕವಾಗಿರುತ್ತವೆ. ಹೀಗೆ ಕರ್ಮಯೋಗವು **ಭಗವಂತನ** ಪ್ರಾಪ್ತಿಗೆ ಮೊಟ್ಟಮೊದಲನೆಯ ಮೆಟ್ಟಿಲಾಗಿರುವದು. ಇದನ್ನು ಏರದೆ ಅಧ್ಯಾತ್ಮಪಥದಲ್ಲಿ ಯಾವನೂ ಮುಂದುವರೆಯಲಾರನು.

**೩೦೮.** ಬಾಹ್ಯವಿಷಯಗಳಲ್ಲಿ ಆಸಕ್ತಿಯನ್ನು ಬಿಟ್ಟು ಎಲ್ಲರಿಗೂ ಆತ್ಮನಾಗಿರುವ ಭಗವಂತನ ಕಡೆಗೆ ತಿರುಗುವದೇ ಯೋಗವು. ಈ ಯೋಗಕ್ಕೆ **ಕರ್ಮಯೋಗ**ವೆಂಬುದು ಬಹಿರಂಗವು, ಎಂದರೆ ಮೊದಲು ಅಭ್ಯಾಸಮಾಡಬೇಕಾಗಿರುವ ಸಾಧನವು. ಕರ್ಮಯೋಗವು ಅಳವಟ್ಟಮೇಲೆ ಸಾಧಕನು ಭಗವಂತನ ಧ್ಯಾನಕ್ಕೆ ಅಧಿಕಾರಿಯಾಗುತ್ತಾನೆ. ಆಮೇಲೆ ಚಿತ್ತವಿಕ್ಷೇಪಕ್ಕೆ ಕಾರಣವಾಗಿರುವ ಇಂದ್ರಿಯಗಳ ಕರ್ಮವನ್ನು ಬಿಟ್ಟು ಮನಸ್ಸಿನ ಕ್ರಿಯೆಯ ರೂಪವಾದ ಧ್ಯಾನವನ್ನೇ ಮಾಡಬೇಕು. ಇದು ಯೋಗದ ಪರಮಸಿದ್ಧಿಯನ್ನು ಕೊಟ್ಟು ತತ್ತ್ವಜ್ಞಾನದ ಪ್ರಾಪ್ತಿಗೆ ಕಾರಣವಾಗುವದು.

**೩೦೯.** ಲೋಕದಲ್ಲಿ ಒಡೆಯರು, ಎನಿಸಿಕೊಂಡಿರುವವರೆಲ್ಲರಿಗೂ ಇಡೀ ಸ್ಥಾವರ ಜಂಗಮ, ಮನುಷ್ಯ, ಪಿತೃದೇವತಾದಿಗಳೆಲ್ಲರಿಗೂ ಒಡೆಯನಾಗಿರುವವನು ಸರ್ವಜ್ಞನೂ ಸರ್ವಶಕ್ತನೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ಆಗಿರುವ ಮಹೇಶ್ವರನಾದ **ಸರ್ವಾಂತರ್ಯಾಮಿ**ಯಾದ ಪರಮಾತ್ಮನೊಬ್ಬನೇ - ಎಂದು ವೇದಶಾಸ್ತ್ರಗಳು ತಿಳಿಸುತ್ತವೆ. ಸಕಲಕಲ್ಯಾಣಗುಣಗಳೂ ಸರ್ವಸುಂದರಾದ್ಭುತಾಕಾರಗಳೂ ಆತನವೇ. ಆತನಿಗಿಂತ ಬೇರೆಯಾಗಿ ಮತ್ತೆ ಏನೊಂದೂ ಇರುವದೇ ಇಲ್ಲ.

**೩೧೦.** ಉಪನಿಷತ್ತುಗಳಲ್ಲಿ ವೇದಾಂತಜ್ಞಾನವನ್ನು ಸಾಂಖ್ಯವೆಂದೂ ಜ್ಞಾನಕ್ಕೆ ಸಾವಧನವಾದ ಧ್ಯಾನವನ್ನು ಯೋಗವೆಂದೂ ಕರೆದಿರುವದುಂಟು. ಭಗವದ್ಗೀತೆಯಲ್ಲಿ ಜ್ಞಾನಕ್ಕೆ ಕಾರಣವಾಗಿರುವ ಸಾಧನಗಳನ್ನೆಲ್ಲ ಯೋಗವೆಂದು ಕರೆದಿರುವದಲ್ಲದೆ ಈ ಸಾಂಖ್ಯಜ್ಞಾನವನ್ನೂ ಯೋಗವೆಂದೇ ಕರೆದಿರುವದುಂಟು. ಹೀಗಿರುವದರಿಂದ

ಪರಮಾತ್ಮನ ಜ್ಞಾನವನ್ನಾಗಲೀ ಸಾಧನವನ್ನಾಗಲೀ ಯೋಗವೆಂಬ ಹೆಸರಿನಿಂದ ಕರೆದರೆ ತಪ್ಪಾಗುವದಿಲ್ಲ.

ಆದರೆ ಇಷ್ಟು ಮಾತ್ರದಿಂದ ಪಾತಂಜಲಯೋಗವನ್ನಾಗಲೀ, ಹಠಯೋಗಾದಿಗಳನ್ನಾಗಲಿ, ಅಧ್ಯಾತ್ಮವಿದ್ಯೆಗೆ ಅವಶ್ಯವಾಗಿರುವ ಯೋಗಗಳೆಂದು ಭ್ರಮಿಸಬಾರದು. ಸಾಂಖ್ಯಯೋಗದರ್ಶನಗಳ ಕೆಲವು ಭಾಗಗಳನ್ನು ಸ್ಮೃತಿಪುರಾಣಗಳಲ್ಲಿ ಸಾರಗ್ರಹಣ ದೃಷ್ಟಿಯಿಂದ ಬಳಸಿಕೊಂಡಿರುವದು ನಿಜವಾದರೂ ಆತ್ಮೈಕತ್ವವಿದ್ಯೆಗೆ ಅವುಗಳ ಸಿದ್ಧಾಂತವು ಸರ್ವಥಾ ಹೊಂದಿಕೆಯಾಗುವದಿಲ್ಲ. ಈಚಿನ ವೇದಾಂತಗ್ರಂಥಗಳಲ್ಲಿ ಅದ್ವೈತದರ್ಶನವನ್ನು ಸಾಂಖ್ಯಯೋಗಾದಿದರ್ಶನಗಳೊಡನೆ ಬೆರೆಸಿಯೇ ಉಪದೇಶಿಸುವದು ಹವ್ಯಾಸವಾಗಿಬಿಟ್ಟಿದೆ. ಆದರೆ ವೇದಾಂತದರ್ಶನವು **ಸ್ವತಂತ್ರದರ್ಶನ**ವಾಗಿದ್ದು ಅದು ಉಪದೇಶಿಸುವ ಜ್ಞಾನವು ಯಾವ ದರ್ಶನಗಳ ಹಂಗೂ ಇಲ್ಲದ ಅಸಾಧಾರಣವಾದ ಸ್ವರೂಪದ್ದು - ಎಂಬುದನ್ನು ಮರೆಯಬಾರದು.

**೩೧೧.** ಯಾರು ಪರಮಾತ್ಮನನ್ನೇ ಆಶ್ರಯಿಸಿಕೊಂಡು ಭಗವನಂತನ ಸ್ವರೂಪ ವನ್ನೇ ಅನುಸಂಧಾನಮಾಡುತ್ತಾ ತನ್ಮಯರಾಗುವರೋ, ಅವರಿಗೆ ಧರ್ಮಾಧರ್ಮಗಳ ಕಲ್ಮಷಗಳೆಲ್ಲವೂ ತೊಳೆದುಹೋಗುವವು. ಅವರು ಪರಭಕ್ತರೂಪರಾದ್ದರಿಂದ ನಿತ್ಯಶುದ್ಧ **ಬುದ್ಧಮುಕ್ತ** ಸ್ವರೂಪವಾದ ಭಗವದ್ಭಾವವನ್ನು ಬದುಕಿರುವಾಗಲೇ ಪಡೆದುಕೊಳ್ಳುವರು.

**೩೧೨.** ಇಂದ್ರಿಯಗಳಿಂದ ಹೊರಗಿನ ವಿಷಯಗಳನ್ನು ಕಂಡು ರಾಗದ್ವೇಷಗಳಿಗೆ ವಶರಾಗುವ ಜನರು ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಅವಶ್ಯವಾಗಿ ಪಡೆಯುವದೆಂಬ ಸಂಸಾರಬಂಧನಕ್ಕೆ ಕಟ್ಟುಬೀಳುತ್ತಾರೆ. ಹೀಗಿರುವದರಿಂದ ಈ **ಕರ್ತೃಭೋಕ್ತೃರೂಪ**ವಾದ ಸಂಸಾರದಿಂದ ಮುಕ್ತರಾಗಬೇಕೆನ್ನುವ ವಿವೇಕಿಗಳು ಸಕಲೇಂದ್ರಿಯವ್ಯಾಪಾರಗಳಿಗೂ ಮೂಲಕಾರಣನಾಗಿರುವ ಭಗವಂತನಿಗೇ ತಮ್ಮ ಕರ್ಮಗಳನ್ನು ಅರ್ಪಿಸಬೇಕು. ಜ್ಞಾನೇಂದ್ರಿಯಗಳಿಂದ ತಿಳಿದುಬರುವ ಉತ್ತಮ ದೃಶ್ಯವೆಲ್ಲವೂ ಆ ಭಗವಂತನ ವಿಭೂತಿಯೇ - ಎಂಬ ಭಾವನೆಯನ್ನು ಅಳವಡಿಸಿಕೊಳ್ಳಬೇಕು.

**೩೧೩.** ಸಂನ್ಯಾಸವೆಂಬುದು ಗೌಣವೆಂದೂ ಮುಖ್ಯವೆಂದೂ ಎರಡು ಬಗೆ. ಯಾವದೊಂದು ಕರ್ಮವನ್ನೂ ಮಾಡದೆ ಸ್ವಸ್ಥನಾಗಿರುವದೆಂಬ ಸದ್ಯೋಮುಕ್ತಿ ರೂಪವಾದ **ನೈಷ್ಕರ್ಮ್ಯಸಿದ್ಧಿ**ಯನ್ನು ಪರಮಾತ್ಮತತ್ತ್ವಜ್ಞಾನದಿಂದ ಲಭಿಸುವ ಪರಮಾರ್ಥಸಂನ್ಯಾಸದಿಂದಲೇ ಪಡೆದುಕೊಳ್ಳಬೇಕಾಗಿದೆ.

**೩೧೪.** ಭಗವಂತನ ಭಕ್ತಿಯು ಯಾವದಾದರೊಂದು ಪ್ರಯೋಜನಕ್ಕಾಗಿ ತೋರುವ **ಗೌಣಭಕ್ತಿ**ಯೆಂದೂ ಭಗವಂತನು ಎಲ್ಲರ ಆತ್ಮನೇ - ಎಂಬ ತತ್ತ್ವಜ್ಞಾನದಿಂದಾದ ಪರಭಕ್ತಿಯೆಂದೂ ಎರಡು ವಿಧವಾಗಿರುತ್ತದೆ. ಗೌಣಭಕ್ತರಿಗೆ ಭಗವಂತನು

ಅವರವರ ಇಷ್ಟಾರ್ಥಗಳನ್ನು ಈಡೇರಿಸಿ ಅನುಗ್ರಹಿಸುತ್ತಾನೆ. ಆದರೆ ಪರಭಕ್ತರಿಗೆ ಆ ಪರಮಾತ್ಮನು ತನ್ನ ಸ್ವರೂಪನೇ ಎಂಬ ನಿಶ್ಚಿತವಾದ ಅನುಭವವಾಗಿಬಿಟ್ಟಿರುವದರಿಂದ ತನ್ನ ಆತ್ಮನೇ ಆಗಿರುವ ಪರಮಾತ್ಮನನ್ನು ಯಾವ ಕಾರಣವನ್ನೂ ಬಯಸದೆ ಅವರು ಪ್ರೀತಿಸುತ್ತಿರುವರು.

**೩೧೫.** ಸಮಸ್ತವಿಕಾರವಸ್ತುಗಳೂ ನಾಶವನ್ನು ಹೊಂದುವವಾದ್ದರಿಂದ 'ಕ್ಷರಪುರುಷ'ನೆಂಬ ಗುಂಪಿಗೆ ಸೇರಿರುತ್ತವೆ. ಇವಕ್ಕೆ ಬೀಜವಾಗಿರುವ ಅವ್ಯಾಕೃತವು 'ಅಕ್ಷರ ಪುರುಷ'ನೆನಿಸುತ್ತದೆ. ಈ ಎರಡಕ್ಕಿಂತಲೂ ವಿಲಕ್ಷಣನಾಗಿರುವದರಿಂದ ಪರಮಾತ್ಮನು **ಉತ್ತಮಪುರುಷನು.** ಈತನೇ ಲೋಕತ್ರಯವನ್ನು ವ್ಯಾಪಿಸಿಕೊಂಡು ಶ್ರುತಿಸ್ಮೃತ್ಯಾದಿಗಳಲ್ಲಿ ಪ್ರಸಿದ್ಧನಾಗಿರುತ್ತಾನೆ.

**೩೧೬.** ಪರಮಾರ್ಥದ ಅಜ್ಞಾನದಿಂದ ಮೋಹಕ್ಕೆ ಪಕ್ಕಾದ ಜನರು ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ - ಮುಂತಾದ **ರಾಜಸಗುಣ**ಗಳಿಂದ ಮತ್ತೆ ಮತ್ತೆ ಅಸುರಸಂಪತ್ತಿನ ಜನ್ಮಗಳನ್ನೇ ಪಡೆಯುತ್ತಿರುವರು. ಹೀಗೆ ಅವಿದ್ಯಾಕಾಮಕರ್ಮಗಳಿಂದ ಬಗೆಬಗೆಯ ಜನ್ಮಗಳನ್ನು ಪಡೆಯುವದೆಂಬ ಸಂಸಾರದಲ್ಲಿ ತೊಳಲುತ್ತಾ ಮತ್ತೂ ಕೀಳುತೆರನಾದ ಜನ್ಮವನ್ನು ಪಡೆಯುವರು. ಅಂಥವರಿಗೆ ಸನ್ಮಾರ್ಗವಾಗಲಿ, ಭಗವದ್ಭಕ್ತಿಯಾಗಲಿ ಎಂದಿಗೂ ದೊರೆಯುವದಿಲ್ಲ.

**೩೧೭.** ನಾನು, ನನ್ನದು ಎಂಬ ಭಾವನೆಯಿಂದ ಕೂಡಿಕೊಂಡಿರುವ ಮನಸ್ಸಿನ ಜನರು ಅಸುರಸ್ವಭಾವದ ಮನಸ್ಸಿನವರು. ಅವರಿಗೆ ಕಾಮಕ್ರೋಧಲೋಭಗಳೇ ಜೀವನದ ಸೂತ್ರವಾಗಿರುತ್ತವೆ. ಆದ್ದರಿಂದ ಅವರು ನಾಸ್ತಿಕರಾಗಿ ದಿನದಿನಕ್ಕೂ ಆತ್ಮನಾಶಕ್ಕೆ ಕಾರಣವಾದ ನಡತೆಯನ್ನೇ ಅವಲಂಬಿಸಿ ಅಧೋಗತಿಯನ್ನು ಹೊಂದುವರು. ಇದಕ್ಕೆ ಪ್ರತಿಯಾಗಿ ಇಂದ್ರಿಯಮನಸ್ಸುಗಳನ್ನು ಬಿಗಿಹಿಡಿದು ತಮ್ಮ ಒಳಗೆ ಅಂತರಾತ್ಮನಾಗಿರುವ ಮತ್ತು ಎಲ್ಲಾ ಪ್ರಾಣಿಗಳ ಜನ್ಮಜೀವನಲಯಗಳಿಗೆ ನಿಮಿತ್ತನಾಗಿರುವ ಭಗವಂತನೇ ನಮಗೆ ಶರಣು - ಎಂದು ನೆರೆನಂಬಿ ಭಗವಂತನ ಸ್ಮರಣೆಯಲ್ಲಿಯೇ ನಿರತರಾಗಿರುವವರು **ದೈವಸ್ವಭಾವದವರು.** ಇವರಿಗೆ ಸತ್ಸಂಗದಿಂದಲೂ ಭಗವಂತನ ಕೃಪೆಯಿಂದಲೂ ಉತ್ತಮ ಗತಿಯನ್ನು ಪಡೆಯುವ ಪುಣ್ಯವು ಲಭಿಸುವದು.

**೩೧೮.** ಮನಸ್ಸಿನಲ್ಲಿ **ವಿವಿಧಪ್ರತ್ಯಯ**ಗಳುಂಟಾಗುವದು, ಮಾತಿನಲ್ಲಿ ಅದರಂತೆ ಆಡುವದು, ಬಳಿಕ ಹೊರಗೆ ಇಷ್ಟಾನಿಷ್ಟವಾಗಿರುವ ವಸ್ತುಗಳ ಪ್ರಾಪ್ತಿಗೂ ಪರಿಹಾರಕ್ಕೂ ಪ್ರಯತ್ನಿಸಿ ಕ್ರಿಯೆಯನ್ನು ಮಾಡುವದು - ಈ ಮೂರನ್ನೂ ವ್ಯವಹಾರವೆಂದು ತಿಳಿಯುತ್ತಾರೆ. ವ್ಯವಹಾರವು ಸಾಗುವದಕ್ಕೆ ಶರೀರದಲ್ಲಿ ತಾನೆಂಬ ಅಭಿಮಾನವೂ ಇಂದ್ರಿಯಗಳೂ ಪ್ರಾಣವ್ಯಾಪಾರಗಳೂ ಮತ್ತು ಮನಸ್ಸೂ ತನ್ನವೆಂಬ ದೃಢವಾದ ನಂಬಿಕೆಯೂ ಅವಶ್ಯವಾಗಿ ಬೇಕು. ಶರೀರಾದಿಗಳು ನಿಜವಾಗಿ ಆತ್ಮನಿಗೆ ಸಂಬಂಧ

ಪಟ್ಟಿವೆಯೆ ? ಎಂಬುದನ್ನು ವಿಚಾರಮಾಡದೆ ಜನರು ಇವುಗಳಲ್ಲಿ ನಾನುನನ್ನದೆಂಬ ಅಭಿಮಾನವನ್ನಿಟ್ಟುಕೊಂಡೇ ವ್ಯವಹಾರಮಾಡುತ್ತಿರುತ್ತಾರೆ.

**೩೧೯.** ಭಗವಂತನಲ್ಲಿರುವ ಭಕ್ತಿಯೂ ಆತನ ತತ್ತ್ವವನ್ನು ಅನುಭವಿಸುವ ವಿಜ್ಞಾನವೂ ಬೇರೆಬೇರೆಯಲ್ಲ. ಬೆಂಕಿಯ ಬಿಸಿಬೆಳಕುಗಳಂತೆ ಅವೆರಡೂ ಒಂದೇ ತತ್ತ್ವವಾಗಿರುತ್ತವೆ. ಈ ಜ್ಞಾನನಿಷ್ಠಾರೂಪವಾದ ಭಕ್ತಿಯೇ ಪರಮಪುರುಷಾರ್ಥಕ್ಕೆ ನೇರಾದ ಸಾಧನವು ಎಂಬಿದು **ಗೀತಾಶಾಸ್ತ್ರ**ದ ಪ್ರಥಮೋಪದೇಶವಾಗಿದೆ.

**೩೨೦.** ಪರಮಾತ್ಮನ ಅಂಶವೇ ಆಗಿ ತಮ್ಮೊಳಗೇ ಇರುವ ತಮ್ಮ ಆತ್ಮನ ಸ್ವರೂಪವನ್ನು 'ಇಗೊ, ಇದೇ ನನ್ನ ಸ್ವರೂಪವು' ಎಂದು ಜನರು ನಿಶ್ಚಯಿಸಿಕೊಳ್ಳಲಾರದೆ ಇರುವರು. ಇದಕ್ಕೆ ಅವರು ಈ ಲೋಕದ ಮತ್ತು ಪರಲೋಕದ ಬಗೆಬಗೆಯ ವಿಷಯಭೋಗಗಳ ಆಶೆಗೆ ಸಿಕ್ಕಿಬಿದ್ದು ತೊಳಲುತ್ತಿರುವದೇ ಕಾರಣ. ಆದರೆ ಯಾರು ವಿಷಯಗಳಲ್ಲಿ ಉಂಟಾಗಿರುವ ವೈರಾಗ್ಯದಿಂದ ವಿಷಯಭೋಗಗಳಿಂದ ಹಿಂಜರಿದು ತಮ್ಮೊಳಕ್ಕೇ ಸೇರಿ ಏಕಾಗ್ರತೆಯಿಂದ ನೋಡುವರೋ ಅಂಥವರಿಗೆ ತತ್ತ್ವಜ್ಞಾನವೆಂಬ ಒಳಗಣ್ಣು ತೆರೆದುಕೊಳ್ಳುವದರಿಂದ ಈ ಆತ್ಮನ ನಿಜವು **ದರ್ಶನಗೋಚರ**ವಾಗುವದು.

**೩೨೧.** ಮನುಷ್ಯರಲ್ಲಿ ಬಾಹ್ಯವಿಷಯಗಳಲ್ಲಿಯೇ ಆಸಕ್ತರಾಗಿ ಸುಖದುಃಖ ಭೋಗರೂಪವಾದ ಸಂಸಾರದಲ್ಲಿಯೇ ತೊಳಲುತ್ತಿರುವವರೇ ಬಲುಮಂದಿ. ಆದರೆ **ನಿರಾಸಕ್ತರಾಗಿ** ನಿಷ್ಕಾಮರಾಗಿ ಆತ್ಮತತ್ತ್ವದ ಮನನದಲ್ಲಿಯೇ ನಿರತರಾಗಿರುವ ಮಹಾತ್ಮರು ಪುನರಾವೃತ್ತಿಯಿಲ್ಲದ ಪರಮಪದವನ್ನೇ ಸೇರುವರು.

**೩೨೨.** ಭಗವಂತನು ಎಲ್ಲರ ಆತ್ಮನು. ಎಲ್ಲಾ ಪ್ರಾಣಿಗಳಿಗೂ ಒಳ್ಳೆಯದನ್ನು ಮಾಡುವ ಸ್ವಭಾವದವನು. ಆದ್ದರಿಂದ ಆತನ ಮಹಿಮೆಯನ್ನು ಕೊಂಡಾಡಿದ್ದನ್ನು ಕೇಳಿದ ಮಾತ್ರದಿಂದ ಜನರು ಹೆಚ್ಚಿನ ಹರ್ಷವನ್ನು ಪಡೆಯುವರು. ಆತ್ಮನಲ್ಲಿ ಅನುರಕ್ತರೂ ಆಗುವರು. ಸ್ವಾರ್ಥಪರರಾದ ರಾಕ್ಷಸಪ್ರಕೃತಿಯವರಾದರೋ, ಅಂಜಿಕೆಯಿಂದ ದಿಕ್ಕಾಪಾಲಾಗಿ ಓಡುವರು. ಕಪಿಲರೇ ಮೊದಲಾದ ಸಿದ್ಧರುಗಳು ನಿತ್ಯಸಿದ್ಧನಾದ ಆ ಭಗವಂತನಿಗೆ **ನಮಸ್ಕಾರ**ಮಾಡುವರು.

**೩೨೩.** ಶಾಸ್ತ್ರೋಕ್ತಕರ್ಮಗಳನ್ನು ವಿಧಿಯಂತೆ ಅನುಷ್ಠಾನಮಾಡಿ ಚಿತ್ತಶುದ್ಧಿ, ಜ್ಞಾನೋತ್ಪತ್ತಿ, ಜ್ಞಾನನಿಷ್ಠೆ - ಈ ಕ್ರಮದಿಂದ ಪರಮಪುರುಷಾರ್ಥವನ್ನೇ ಪಡೆದುಕೊಳ್ಳ ಬಹುದು. ಉತ್ತಮಾಧಿಕಾರಿಗಳು ಕರ್ಮಗಳನ್ನೇ ಸಂನ್ಯಾಸಮಾಡಿ ಜ್ಞಾನನಿಷ್ಠೆಯಿಂದ ಮುಕ್ತರಾಗಬಹುದು. ಮಧ್ಯಮಾಧಿಕಾರಿಗಳು ಚಿತ್ತಶುದ್ಧಿಯನ್ನು ಪಡೆದುಕೊಂಡಬಳಿಕ ಧ್ಯಾನಯೋಗಪರರಾಗಿ ಸಮಗ್ರಜ್ಞಾನವನ್ನು ಪಡೆದುಕೊಂಡು ಮೋಕ್ಷವನ್ನು ಪಡೆಯ ಬಹುದು. ಸಾಮಾನ್ಯವಾಗಿ ಆತ್ಮಜ್ಞಾನಿಗಳಲ್ಲದ ಸಾಧಕರಿಗೆ ಇವುಗಳೊಳಗೆಲ್ಲ ಕರ್ಮ ಯೋಗವೇ ಸುಕರವಾಗಿರುವ ಸಾಧನವಾಗಿರುತ್ತದೆ. ಏಕೆಂದರೆ ಮುಮುಕ್ಷುಗಳಿಗೆ ಈ

ಕರ್ಮಯೋಗದ ದ್ವಾರದಿಂದ ಜ್ಞಾನಸಾಧನೆಯ ಮೆಟ್ಟಿಲುಗಳನ್ನು ಕ್ರಮಕ್ರಮವಾಗಿ ಏರಿ **ಜ್ಞಾನನಿಷ್ಠೆ**ಯನ್ನು ಅಳವಡಿಸಿಕೊಂಡು ಕೃತಾರ್ಥರಾಗಲು ಸುಲಭವಾಗಿರುತ್ತದೆ.

**೩೨೪.** ಸತ್ತ್ವರಜಸ್ತಮೋಗುಣಗಳೆಂಬಿವೇ ಜೀವರನ್ನು ಶರೀರಕ್ಕೆ ಕಟ್ಟಿ ಹಾಕಿರುವವು. ಅವುಗಳಿರುವವರೆಗೆ ಮಾನವನು ಜನನಮರಣಗಳಿಗೆ ಪಕ್ಕಾಗಿ ಪ್ರತಿಯೊಂದು ಸೃಷ್ಟಿಸ್ಥಿತಿಪ್ರಲಯರೂಪವಾದ ಕಲ್ಪದಲ್ಲಿಯೂ ಹುಟ್ಟುವದು, ಸುಖದುಃಖಗಳನ್ನನುಭವಿಸುವದು, ಕೊನೆಯಲ್ಲಿ ವ್ಯಥೆಪಡುತ್ತಾ ಶರೀರವನ್ನು ತ್ಯಜಿಸುವದು - ಹೀಗೆ ಸಂಸಾರದಲ್ಲಿ ತೊಳಲುತ್ತಿರುವನು. ಆದರೆ ಯಾರು ಭಗವಂತನನ್ನು ಎಡೆಬಿಡದೆ **ಭಕ್ತಿಯೋಗಗ**ಳಿಂದ ಭಜಿಸುತ್ತಿರುವರೋ ಅಂಥ ಮಹಾತ್ಮರಿಗೆ ಭಗವತ್ ಸ್ವರೂಪವೇ ಪ್ರಾಪ್ತವಾಗಿಬಿಡುವದರಿಂದ ಅವರಿಗೆ ಸಂಸಾರದ ಕೋಟಲೆಯು ಎಂದಿಗೂ ಬಾಧಿಸದೆ ಇರುವದು.

**೩೨೫. ಜಗತ್ತಿ**ನಲ್ಲಿ ಜೀವರುಗಳು ದೈವಪ್ರಕೃತಿ, ಅಸುರಪ್ರಕೃತಿ - ಎಂಬ ಎರಡು ಬಗೆಯ ಸ್ವಭಾವಗಳಲ್ಲಿ ಯಾವದಾದರೊಂದನ್ನು ಆಶ್ರಯಿಸಿಕೊಂಡಿರುವ ಚಿತ್ತವುಳ್ಳವರಾಗಿರುವರು. ದೇಹೇಂದ್ರಿಯಗಳಲ್ಲಿ ತಾವೆಂಬ ಅಭಿಮಾನವಿಲ್ಲದವರೂ ಕಾಮರಾಗಾದಿಗಳಿಂದೊಡಗೂಡಿದ ಬಲ, ಹರ್ಷದಿಂದ ಉಬ್ಬಿ ಯಾರನ್ನೂ ಲೆಕ್ಕಿಸದೆ ಇರುವ ದರ್ಪ, ಜೀವನನಿಮಿತ್ತದಿಂದಲೂ ಧರ್ಮಾನುಷ್ಠಾನಕ್ಕಾಗಿಯೂ ಹೊರಗಿನ ವಸ್ತುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವದು - ಇವುಗಳಲ್ಲಿ ಯಾವದೊಂದರ ಹಂಗೂ ಇಲ್ಲದೆ, ಕೇವಲ ಆತ್ಮಸ್ವರೂಪದಲ್ಲಿಯೇ ನೆಲೆನಿಂತಿರುವವರು ಬ್ರಹ್ಮವನ್ನೇ ಪಡೆದುಕೊಳ್ಳುತ್ತಾರೆ.

**೩೨೬.** ಪರಮಾತ್ಮನೇ ತನ್ನ ಆತ್ಮನೆಂಬ ಅನುಭವವನ್ನು ಕಂಡುಕೊಂಡು ಜ್ಞಾನನಿಷ್ಠನಾಗಿರುವವನಿಗೆ ಬಾಹ್ಯವಿಷಯಗಳ ಚಿಂತನೆಯಲ್ಲಿ ರತಿಯಿರುವದಿಲ್ಲ. ಅವನಿಗೆ ಆಹಾರಾದಿಗಳಿಂದ ತೃಪ್ತಿ ಆಗದು. ಆತ್ಮಾನುಸಂಧಾನದಿಂದಲೇ ಅವನು **ತೃಪ್ತ**ನಾಗಿರುತ್ತಾನೆ. ಪ್ರಾಕೃತರಾದವರಿಗೆ ವಿಷಯಲಾಭದಿಂದ ಸಂತೋಷವಾಗುವಂತೆ ಅವನಿಗೆ ಆತ್ಮಲಾಭದಿಂದಲೇ ಪರಮಸಂತೋಷವಾಗಿರುತ್ತದೆ. ಹೀಗೆ ಆತ್ಮವೇ ಎಲ್ಲವೂ ಆಗಿ ಪಡೆದುಕೊಳ್ಳಬೇಕಾದ ಮತ್ತೆಯಾವದೊಂದೂ ಇರುವದಿಲ್ಲವಾದ್ದರಿಂದ ಅವನಿಗೆ ಮಾಡಬೇಕಾದ ಕಾರ್ಯವೇನೂ ಉಳಿದಿರುವದಿಲ್ಲ.

**೩೨೭.** ವ್ಯವಹಾರದ ಬೆಲೆಯನ್ನು ಒರೆಗೆ ಹಚ್ಚಿ ಇದೆಲ್ಲವೂ ಅವಿದ್ಯೆಯಿಂದ ತೋರುತ್ತಿರುವ ಹುಸಿತೋರಿಕೆಯೇ - ಎಂಬ **ನಿಶ್ಚಯ**ಕ್ಕೆ ಬಂದು, ಸರ್ವಭೇದಗಳ ಕಲ್ಪನೆಗೂ ಆಧಾರವಾಗಿರುವ ಅದ್ವಿತೀಯಾತ್ಮತತ್ತ್ವವನ್ನು ಕಂಡುಕೊಂಡಿರುವವನೇ ಸ್ಥಿತಪ್ರಜ್ಞನು. ಪರಮಾರ್ಥತತ್ತ್ವವನ್ನು ಬಲ್ಲ ಸ್ಥಿತಪ್ರಜ್ಞನು ಅದರ ಅನುಸಂಧಾನದಲ್ಲಿಯೇ ನೆಲೆನಿಂತಿರುವನಾದ್ದರಿಂದ ಅವನಿಗೆ ವ್ಯವಹಾರದಲ್ಲಿ ವಿಧವಿಧವಾದ ದೃಶ್ಯಗಳು

ಕಂಡರೂ ''ಇವೆಲ್ಲ ಕನಸಿನ ತೋರಿಕೆಗಳಂತೆ ಹುಸಿಯಾಗಿರುತ್ತವೆ ; ಪರಮಸತ್ಯವೆಂದರೆ ಅದ್ವಿತಿಯನಾದ ಪರಮಾತ್ಮನೊಬ್ಬನೇ, ಅವನೇ ನಾನು '' - ಎಂಬ ಗಟ್ಟಿಯಾದ ಅನುಭವವು ಅಳವಟ್ಟಿರುತ್ತದೆ.

**೩೨೮.** ಆತ್ಮನು ಎಲ್ಲಾ ದೇಹಗಳಲ್ಲಿಯೂ ಇರುತ್ತಿದ್ದರೂ ವಿಷಯ ರೂಪವಾಗಿರುವ **ಕಾಲಾಕಾಶಾದಿ**ಗಳೆಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಅವನನ್ನು ನಾಶಗೊಳಿಸುವದಕ್ಕೆ ಯಾವನೊಬ್ಬನೂ ಸಮರ್ಥನಾಗಲಾರನು. ಎಲ್ಲಾ ಶರೀರ ಗಳಲ್ಲಿಯೂ ಇರುತ್ತಿರುವ ಈ ಆತ್ಮನು ನಿತ್ಯನೂ ಅಪ್ರಮೇಯನೂ ಆಗಿರುತ್ತಾನೆ. ಈ ದೇಹಗಳು ಮಾತ್ರ ಪ್ರಮಾಣದಿಂದ ಪರೀಕ್ಷಿಸಿದಾಗ ಪರಮಾರ್ಥವಾಗಿಲ್ಲವೆಂದೇ ಗೊತ್ತಾಗುತ್ತದೆ. ಆದ್ದರಿಂದ ಆತ್ಮತತ್ತ್ವ ವೊಂದೇ ಪರಮಾರ್ಥವು. ವಿಕ್ಕದ್ದೆಲ್ಲವೂ ಹುಸಿತೋರಿಕೆಯೇ - ಎಂದು ಸಿದ್ಧವಾಗುತ್ತದೆ.

**೩೨೯.** ಸಾಮಾನ್ಯಜನರಿಗೆ ಹೊರಗಿನ ವಿಷಯಗಳಕಡೆಗೇ ದೃಷ್ಟಿಯು ಹಬ್ಬಿರುವದ ರಿಂದ ಅವರು ತಮಗೆ ಇಷ್ಟವಾದ ವಿಷಯಗಳನ್ನು ಸಂಪಾದಿಸಿಕೊಂಡು ಅವುಗಳ ಭೋಗದಿಂದಲೇ ತೃಪ್ತರಾಗಬೇಕಾಗುವದು. ಅವರ ಮನಸ್ಸು ಇನ್ನೂ ಇಂಥ ವಿಷಯ ಗಳನ್ನು ಸಂಪಾದಿಸಿಕೊಂಡು ಸುಖಿಸಬೇಕೆಂಬ ವಿಚಾರದಲ್ಲಿಯೇ ಮಗ್ನವಾಗಿರುತ್ತದೆ. ಹಿಂದೆ ಅನುಭವಿಸಿದ ವಿಷಯದ ಸುಖದ ನೆನಪು, ಮುಂದೆ ಸಂಪಾದಿಸಿಕೊಳ್ಳ ಬೇಕಾಗಿರುವ ವಿಷಯಗಳ ಹಂಬಲಿಕೆ, ಈಗ ಪ್ರಾಪ್ತವಾದ ಸುಖಸಾಮಗ್ರಿಗಳಲ್ಲಿಯೇ ಮನಸ್ಸು ಹೊರಳಾಡುತ್ತಿರುವದು - ಇಷ್ಟೇ ಹೊರತು ತಮ್ಮೊಳಗೆ ಇರುವ ಆತ್ಮನ ವಿಚಾರವು ಅವರ ಮನಸ್ಸಿಗೆ ತಟ್ಟುವ ನಿರೀಕ್ಷೆಯೇ ಇರುವದಿಲ್ಲ. ಆದರೆ ಜ್ಞಾನಿಗಳ ವಿಚಾರವು ಇದಕ್ಕೆ ತೀರ ವಿರುದ್ಧವಾಗಿರುತ್ತದೆ. ಅವರಿಗೆ ತೀರ ಒಳಗಿರುವ ಆತ್ಮನೊಬ್ಬನೇ ಪರಮಾರ್ಥವೆಂಬ ನಿಶ್ಚಯಬುದ್ಧಿಯು ಉಂಟಾಗಿಬಿಟ್ಟಿರುವದರಿಂದ ಆತ್ಮರತಿ, ಆತ್ಮಕ್ರೀಡೆ, ಆತ್ಮಾನಂದದ ಅನುಸಂಧಾನ- ಇವುಗಳೇ ಅವರಿಗೆ ಜೀವನದ **ನಿತ್ಯಕಟ್ಟಳೆ**ಯ ಕರ್ಮವಾಗಿರುವದು. ಅವರಿಗೆ ಕರ್ಮವನ್ನು ಮಾಡಿ ಇಂಥದ್ದನ್ನು ಪಡೆದುಕೊಳ್ಳಬೇಕು - ಎಂಬ ಇಚ್ಛೆಯು ಎಂದಿಗೂ ಆಗುವಂತಿರುವದಿಲ್ಲ.

**೩೩೦.** ಲೋಕದಲ್ಲಿರುವ ಅನಂತಜೀವರುಗಳಲ್ಲಿ ಒಬ್ಬೊಬ್ಬನ ಪರಮಾರ್ಥ ಸ್ವರೂಪವೂ ಪರಮಾತ್ಮನೇ ಆದರೂ ಸತ್ಯವಾಗಿರುವ ಆತ್ಮ, ಹುಸಿಯಾಗಿರುವ ಅನಾತ್ಮ - ಈ ಎರಡರ **ಅನ್ಯೋನ್ಯತಾದಾತ್ಮ್ಯ**ವನ್ನು ಹುಟ್ಟುಗಟ್ಟಿರುವದರಿಂದ ಆತ್ಮನಲ್ಲಿ ಬಗೆಬಗೆಯ ಅನಂತಜೀವರುಗಳಾಗಿ ತೋರುತ್ತಿರುವ ಜಗತ್ತು ಉಂಟಾಗಿರುತ್ತದೆ. ಆತ್ಮ, ಅನಾತ್ಮ ಇವೆರಡನ್ನೂ ವಿಂಗಡಿಸಿ ಇದ್ದದ್ದು ಇದ್ದಂತೆ ನಿಶ್ಚಯಿಸಿಕೊಳ್ಳುವ ಜ್ಞಾನದಿಂದ ಪರಮಾತ್ಮನೊಬ್ಬನೇ ಪರಮಾರ್ಥ - ಎಂಬ ಅನುಭವವುಂಟಾಗಿ ಜೀವನ ಅವಿದ್ಯೆಯೂ ಜನನಮರಣಾದಿಸಂಸಾರವೂ ಹೇಳಹೆಸರಿಲ್ಲದೆ ಮಾಯವಾಗುವವು.

**೩೩೧.** ಜೀವರು ಬಗೆಬಗೆಯ ಶರೀರಗಳನ್ನು ಧರಿಸಿ ಹುಟ್ಟಿ ಬಗೆಬಗೆಯ ಸಂಸಾರಸುಖದುಃಖಗಳನ್ನು ಅನುಭವಿಸುತ್ತಿರುವದಕ್ಕೆ ಮೂಲಕಾರಣವಾಗಿ ಸತ್ತ್ವ ರಜಸ್ಸು, ತಮಸ್ಸು - ಎಂಬ ಪ್ರಕೃತಿಯ ಮೂರು ಗುಣಗಳೇ ಬೀಜವಾಗಿರುತ್ತವೆ. ಯಾವ **ಮಹನೀಯನು** ಈ ಪ್ರಕೃತಿಯನ್ನು ಮೀರಿರುವ ಪರಮಾರ್ಥತತ್ತ್ವವೇ ತನ್ನ ನಿಜವಾದ ಸ್ವರೂಪವೆಂದು ಅರತುಕೊಳ್ಳುವನೋ ಅವನು ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಬ್ರಹ್ಮವೇ ತನ್ನ ಸ್ವರೂಪವೆಂದರಿತುಕೊಂಡು ಪರಮಪುರುಷಾರ್ಥವನ್ನು ಪಡೆದು ಕೊಳ್ಳುವನು.

**೩೩೨.** ಸಾಮಾನ್ಯಜನರು, ಸತ್ತ್ವ, ರಜಸ್ಸು, ತಮಸ್ಸು - ಎಂಬ ಪ್ರಕೃತಿಗುಣಗಳಲ್ಲಿ ಯಾವದಾದರೊಡನೆ ತಾವೂ ಒಂದಾಗಿ ಆ ಗುಣಗಳ ಅವಿರ್ಭಾವ, ತಿರೋಧಾನ, ಇವುಗಳಿಂದ ತಮ್ಮ ಮನಸ್ಸಿನಲ್ಲಿ ಏರುಪೇರುಗಳನ್ನು ಹೊಂದಿ ತಾವೇ ಗುಣಮಯರಾಗಿ ವ್ಯವಹರಿಸುತ್ತಿರುತ್ತಾರೆ. ಆದರೆ ಸರ್ವಸಾಕ್ಷಿಯಾಗಿರುವ ಭಗವಂತನು ಎಲ್ಲಾ ಪ್ರಾಣಿ ಗಳಿಗೂ **ಕರ್ಮಸಾಕ್ಷಿ**ಯಾಗಿರುತ್ತಾನೆ. ಆತನೇ ನಮಗೆ ಎಲ್ಲಕ್ಕಿಂತಲೂ ಪರಮಪ್ರೇಮಕ್ಕೆ ಆಸ್ಪದನಾಗಿರುವಾತನು - ಎಂದು ಕಂಡುಕೊಂಡ, ಭಗವಂತನಲ್ಲಿಯೇ ಎಡೆಬಿಡದೆ ಭಕ್ತಿಯೋಗದಿಂದ ಆತನನ್ನೇ ಸೇವಿಸುತ್ತಿರುವ ಮಹನೀಯರು ಈ ಗುಣಗಳ ಕಾರ್ಯಕ್ಕೆ ಸಿಲಕದೆ ಔದಾಸೀನ್ಯದಿಂದ ಅವುಗಳನ್ನು ನೋಡುತ್ತಾ ತಮ್ಮ ಪರಮಾರ್ಥ ಸ್ವರೂಪದಲ್ಲಿಯೇ ನೆಲೆನಿಂತಿರುವರು.

**೩೩೩.** ಭಗವದ್ಗೀತೆಯ ಉಪದೇಶಗಳಲ್ಲೆಲ್ಲ ಸಾಧನರೂಪವಾದ ಭಕ್ತಿಯೊಂದು, ಸಿದ್ಧಾಂತದ ವಿಜ್ಞಾನರೂಪವಾದ ಪರಮಾತ್ಮಾನುಭವವೊಂದು - ಈ ಎರಡೇ ಪ್ರಧಾನೋ ಪದೇಶಗಳು. ಸರ್ವಕ್ರಿಯಾಕಾರಕಫಲಗಳನ್ನು ಸಂನ್ಯಾಸಮಾಡುವದಕ್ಕೆ ಶಾರೀರಿಕ, ವಾಚಿಕ, ಮಾನಸಿಕ - ಎಂಬ ಮೂರು ವಿಧವಾದ ಕರ್ಮಗಳೂ ಭಗವಂತನ ಅನುಗ್ರಹ ದಿಂದಲೇ ತನ್ನ ಮೂಲಕ ನಡೆಯುತ್ತಿರುವದೆಂಬ ನಂಬಿಕೆಯಿಂದ ಕರ್ಮಗಳನ್ನೆಲ್ಲ ಭಗವಂತನಿಗೆ ಅರ್ಪಣೆಮಾಡಿ ಆತನನ್ನೇ ಶರಣುಹೊಂದಿ ಭಗವದ್ಭಕ್ತಿಯಿಂದ ಆತನ ಕಡೆಗೇ ಅಭಿಮುಖನಾಗಬೇಕು. ಆಗ **ಪರಮಧ್ಯೇಯ**ವನ್ನು ಮುಟ್ಟುವ ಸುಯೋಗವು ದೊರಕುವದು.

**೩೩೪.** ಶಾಸ್ತ್ರದಲ್ಲಿ ಹೇಳಿರುವ ಸಕಲಶುಭಾಶುಭಕರ್ಮಗಳೂ ವಿಷಯವಾಗಿರುವ ದೇಹೇಂದ್ರಿಯಸಂಘಾತಕ್ಕೇ ಸೇರಿರುವದರಿಂದ ನನಗೂ ಅವಕ್ಕೂ ಯಾವ ಸಂಬಂಧವೂ ಇಲ್ಲ - ಎಂಬ ಅನುಭವವನ್ನು ನೇರಾಗಿ ಪಡೆದುಕೊಂಡು ಸರ್ವಸಾಕ್ಷಿಯಾದ ವಾಸುದೇವಭಗವಂತನೇ ನನ್ನ ಆತ್ಮನೆಂಬ ನಿಶ್ಚಯದಿಂದ ಅವನಲ್ಲಿಯೇ ನೆಲೆ ನಿಲ್ಲುವದೆಂಬ ಜ್ಞಾನನಿಷ್ಠೆಯಿಂದ ಕರ್ಮಬಂಧದಿಂದ ಅತ್ಯಂತವಾಗಿ ಬಿಡುಗಡೆ ಹೊಂದಿದವನೇ **ನಿತ್ಯಸಿದ್ಧನು**. ಶೋಕಮೋಹರಹಿತವಾದ ಪರಮಪುರುಷಾರ್ಥವು ಅವನಿಗೇ ದೊರಕುವದು.

**೩೩೫.** ಬ್ರಹ್ಮವು ಅಥವಾ ಆತ್ಮನು ಎಂದು ಉಪನಿಷತ್ತುಗಳಲ್ಲಿ ಬೋಧಿಸಿರುವ ಪರಮಾರ್ಥತತ್ತ್ವವು ತನಗೆರಡನೆಯದಿಲ್ಲದ ಒಂದೇ ಒಂದಾಗಿರುವ ವಸ್ತುವಾದ್ದರಿಂದಲೂ ಅದು ಇಡಿಯ ಜಗತ್ತಿನ ಮತ್ತು ನಮ್ಮಗಳ ಸ್ವರೂಪವೇ ಆಗಿರುವದರಿಂದಲೂ ಅದರ ಜ್ಞಾನವು ಬಂದಾದ ಬಳಿಕ ಮತ್ತೆ ಯಾವ ಬಾಧಕಜ್ಞಾನವೂ ಇರುವಂತಿಲ್ಲವಾದ್ದರಿಂದಲೂ ಅದೇ ಕಟ್ಟಕಡೆಯ ಜ್ಞಾನವಾಗಿರುತ್ತದೆ. ಅದು ಬಂದೊಡನೆಯೇ ಜಿಜ್ಞಾಸುವು ಆ ಬ್ರಹ್ಮವೇ ತಾನು - ಎಂದು **ಸುನಿಶ್ಚಿತ**ವಾಗಿ ಮನಗಾಣುತ್ತಾನೆ. ಅವನಿಗೆ ದೇಹತ್ಯಾಗವಾದ ಬಳಿಕ ಮತ್ತೆ ಜನ್ಮವುಂಟಾಗುವದೆಂಬ ಶಂಕೆಯಿರುವದಿಲ್ಲ. ಅವನು ಎಲ್ಲಾ ಬಗೆಯ ಬಂಧಗಳಿಂದಲೂ ಮುಕ್ತನಾಗಿರುತ್ತಾನೆ.

**೩೩೬.** ಬ್ರಹ್ಮವಿದ್ಯೆ, ಪರಮಾತ್ಮವಿದ್ಯೆ, ಆತ್ಮೈಕತ್ವವಿದ್ಯೆ - ಎಂದು ಬೇರೆ ಬೇರೆಯ ಹೆಸರಿನಿಂದ ಪ್ರಸಿದ್ಧವಾಗಿರುವ ವಿದ್ಯೆಯು **ಸರ್ವವಿದ್ಯೆ**ಗಳಿಗೂ ಆಶ್ರಯವಾಗಿರುತ್ತದೆ. ಬ್ರಹ್ಮವೇ ಎಲ್ಲಾ ಜಗತ್ತಿನ ತೋರುವಿಕೆಗೂ ಆಧಾರವಾಗಿರುವದರಿಂದ ಈ ವಿದ್ಯೆಯನ್ನು ಅರಿತುಕೊಂಡವರು ಎಲ್ಲದರ ತತ್ತ್ವವನ್ನೂ ಅರಿತ ಸರ್ವಜ್ಞರಾಗುವರು. ಮಿಕ್ಕ ವಿದ್ಯೆಗಳು ಪ್ರತಿಪಾದಿಸುವ ಬೇರೆಬೇರೆಯ ವಿಷಯಗಳು ಈ ಪರಮಾರ್ಥದ ಒಂದಂಶವನ್ನು ಮಾತ್ರ ತಿಳಿಯಿಸಿಕೊಡುತ್ತವೆಯಾದ್ದರಿಂದ ವ್ಯವಹಾರದೃಷ್ಟಿಯಿಂದ ಅವೂ 'ವಿದ್ಯೆ' ಎನಿಸಿಕೊಂಡಿರುವವು.

**೩೩೭.** ಈ ಜನ್ಮದಲ್ಲಿ ಸಿಕ್ಕಬಹುದಾದ ಅಥವಾ ಜನ್ಮಾಂತರದಲ್ಲಾಗಲಿ, ಲೋಕಾಂತರಗಳಲ್ಲಾಗಲಿ ದೊರಕಬಹುದಾದ ಇಷ್ಟವಸ್ತುಗಳ ಭೋಗಕ್ಕೆ ಮನಸ್ಸು ಜೋಲದೆ ಪರಮಾರ್ಥತತ್ತ್ವವೇ ಬೇಕೆನ್ನುವವನಿಗೆ ಆತ್ಮವಿದ್ಯೆಯಲ್ಲಿ ಅಧಿಕಾರವಿರುತ್ತದೆ. **ಆತ್ಮವಿದ್ಯೆಯೇ** ಸರ್ವಾನರ್ಥಗಳಿಗೂ ಮೂಲವಾಗಿರುವ ಅವಿದ್ಯೆಯನ್ನು ನಾಶಗೊಳಿಸಬಲ್ಲದು.

**೩೩೮.** ಪರಮಾರ್ಥವು ಕ್ರಿಯಾಕಾರಕಫಲ - ಎಂಬ ಭೇದವಿಲ್ಲದ ತನಗೆರಡನೆಯದೇ ಇಲ್ಲದ ಅದ್ವಿತೀಯತತ್ತ್ವವಾಗಿರುತ್ತದೆ. ಆ **ಅದ್ವೈತಾನುಭವ**ದ ದೃಷ್ಟಿಯಿಂದ ನೋಡಿದಾಗ ಯಾವ ಕಾರಕವಾಗಲಿ ಕ್ರಿಯೆಯಾಗಲಿ, ಫಲವಾಗಲಿ ಇರುವದಿಲ್ಲ. ಆದ್ದರಿಂದ ಆತ್ಮಜ್ಞಾನದಲ್ಲಿ ಯಾವ ಭೇದವೂ ಎಳ್ಳಷ್ಟೂ ಇರುವದಿಲ್ಲ.

**೩೩೯.** ಪರಮಾತ್ಮತತ್ತ್ವದಲ್ಲಿ ಯಾವ ವಿಶೇಷವೂ ಇರುವದಿಲ್ಲ. ಇದು ಯಾವ ಪ್ರಮಾಣಕ್ಕೂ ವಿಷಯವೂ ಅಲ್ಲ. ಆದ್ದರಿಂದ ಇದನ್ನು **ಪ್ರಜ್ಞಾನೈಕಘನಸ್ವರೂಪ**ವಾಗಿ ಒಂದೇ ರೀತಿಯಲ್ಲಿರುವದೆಂದು ತಿಳಿಯಬೇಕು. ಇದನ್ನು ವಾಕ್ಯದಿಂದ ವರ್ಣಿಸುವದಕ್ಕಾಗಲಿ, ಮನೋವೃತ್ತಿಗಳಿಂದ ಅರಿಯುವದಕ್ಕಾಗಲಿ ಸಾಧ್ಯವಿಲ್ಲ. ಅನುಭವದಿಂದ ಮಾತ್ರವೇ ಇದನ್ನು ಅರಿತುಕೊಳ್ಳಬೇಕು.

**ಇತಿ ಶಮ್**

# ಪರಿಶಿಷ್ಟ

## ಶಬ್ದಾನುಕ್ರಮಣಿಕೆ

1) ಸೂಕ್ತಿಯಲ್ಲಿ ಉಪಯೋಗಿಸಿರುವ ಒಂದು ಪ್ರಧಾನ ಶಬ್ದವು ಸೂಕ್ತಿಯ ಪೂರ್ತಾ ತಾತ್ಪರ್ಯವನ್ನು ಸೂಚಿಸುತ್ತದೆ.

2) ಶಬ್ದದ ಮುಂದೆ ಹಾಕಿರುವ ಸಂಖ್ಯೆ ಸೂಕ್ತಿಯ ಸಂಖ್ಯೆಯನ್ನು ಸೂಚಿಸುತ್ತದೆ.


| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| | **ಅ** | |
| ೧ | ಅಕ್ಷರ | 287 |
| ೨ | ಅತೀಂದ್ರಿಯ | 283 |
| ೩ | ಅರ್ಥಹೀನ | 203 |
| ೪ | ಅದ್ವಿತೀಯ | 173 |
| ೫ | ಅದೃಷ್ಟೋ ದ್ರಷ್ಟಾ | 269 |
| ೬ | ಅದ್ವೈತಾನುಭವ | 338 |
| ೭ | ಅಧ್ಯಸ್ತ | 81 |
| ೮ | ಅಧ್ಯಾತ್ಮ ಜೀವನ | 39 |
| ೯ | ಅಧ್ಯಾತ್ಮಯೋಗ | 281 |
| ೧೦ | ಅಧ್ಯಾತ್ಮ ವಿದ್ಯೆ | 24 |
| ೧೧ | ಅನಂತ | 50 |
| ೧೨ | ಅನಿತ್ಯ | 177 |
| ೧೩ | ಅನುಗ್ರಹ | 22 |
| ೧೪ | ಅನುಭವ | 35 |
| ೧೫ | ಅನುಸರಣೆ | 130 |
| ೧೬ | ಅನುಸಂಧಾನ | 252 |
| ೧೭ | ಅನೇಕಾನೇಕ | 167 |
| ೧೮ | ಅನ್ಯೋನ್ಯತಾದಾತ್ಮ್ಯ | 330 |
| ೧೯ | ಅಪರಬ್ರಹ್ಮವಿದ್ಯೆ | 291 |
| ೨೦ | ಅಪೇಕ್ಷೆ | 275 |
| ೨೧ | ಅರ್ಪಣೆ | 48 |
| ೨೨ | ಅಭಿರುಚಿ | 77 |
| ೨೩ | ಅಮೃತತ್ವ | 70 |
| ೨೪ | ಅರಿವು | 44 |
| ೨೫ | ಅವಲಂಬನೆ | 136 |
| ೨೬ | ಅವಸ್ಥೆಗಳು | 179 |
| ೨೭ | ಅಶರೀರ | 277 |
| ೨೮ | ಅಷ್ಟಮೂರ್ತಿ | 181 |
| ೨೯ | ಅರ್ಹ | 98 |
| ೩೦ | ಅಹಂಭಾವ | 42 |
| ೩೧ | ಅಂಜಿಕೆಯ | 46 |
| ೩೨ | ಅಂಜುವಿಕೆ | 26 |
| ೩೩ | ಅಂತರ್ಯಾಮಿ | 268 |
| ೩೪ | ಅಂತಃಕರಣ | 301 |
| | **ಆ** | |
| ೩೫ | ಆಗಮೋಕ್ತಿ | 175 |
| ೩೬ | ಆತ್ಮಜ್ಞಾನ | 148 |
| ೩೭ | ಆತ್ಮನ ದೃಷ್ಟಿ | 241 |
| ೩೮ | ಆತ್ಮರತಿ | 210 |
| ೩೯ | ಆತ್ಮಲಾಭ | 223 |
| ೪೦ | ಆತ್ಮವಿದ್ಯೆ | 337 |
| ೪೧ | ಆತ್ಮಸ್ವರೂಪ | 264 |
| ೪೨ | ಆಧ್ಯಾತ್ಮಿಕಸ್ವಾತಂತ್ರ್ಯ | 219 |

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೪೩ | ಆನಂದ | 64 |
| ೪೪ | ಆರಾಧನೆ | 199 |
| ೪೫ | ಆರ್ಷದೃಷ್ಟಿ | 201 |
| ೪೬ | ಆಸರೆ | 174 |
| ೪೭ | ಆಸ್ಪದ | 293 |
| ೪೮ | ಆಹಾರ | 58 |
| | **ಇ** | |
| ೪೯ | ಇಚ್ಛೆ | 76 |
| ೫೦ | ಇದಲ್ಲ, ಇದಲ್ಲ | 270 |
| ೫೧ | ಇರವು | 2 |
| | **ಈ** | |
| ೫೨ | ಈ ಕ್ಷಣವೇ | 40 |
| ೫೩ | ಈಶ್ವರ | 205 |
| | **ಉ** | |
| ೫೪ | ಉಕ್ಕೇರು | 222 |
| ೫೫ | ಉತ್ತಮಪುರುಷ | 315 |
| ೫೬ | ಉತ್ಕಟ | 75 |
| ೫೭ | ಉತ್ಕರ್ಷ | 235 |
| ೫೮ | ಉತ್ಕೃಷ್ಟ- ನಿಕೃಷ್ಟ | 158 |
| ೫೯ | ಉದಾತ್ತ ಭಾವನೆ | 108 |
| ೬೦ | ಉದಾರಚರಿತೆ | 34 |
| ೬೧ | ಉಪದೇಶ | 109 |
| ೬೨ | ಉಪನಿಷತ್ತು | 139 |
| ೬೩ | ಉಪಾಯ | 137 |
| ೬೪ | ಉಪಾಸನೆ | 228 |
| | **ಏ** | |
| ೬೫ | ಏಕಾಂತವಾಸ | 91 |
| ೬೬ | ಏಕಾಗ್ರತೆ | 79 |
| ೬೭ | ಏರಿಳಿತ | 263 |
| | **ಐ** | |
| ೬೮ | ಐಕ್ಯ | 118 |
| | **ಒ** | |
| ೬೯ | ಒಸಗೆ | 265 |
| ೭೦ | ಒಳದೃಷ್ಟಿ | 107 |
| ೭೧ | ಒಳನೋಟ | 47 |
| ೭೨ | ಒಂದೇ | 56 |
| | **ಓ** | |
| ೭೩ | ಓಂಕಾರ | 110 |
| | **ಕ** | |
| ೭೪ | ಕರ್ತೃಭೋಕ್ತೃರೂಪ | 312 |
| ೭೫ | ಕರ್ಮಯೋಗ | 308 |
| ೭೬ | ಕರ್ಮಸಂನ್ಯಾಸ | 80 |
| ೭೭ | ಕರ್ಮಸಾಕ್ಷಿ | 332 |
| ೭೮ | ಕಲಿಯುಗ | 151 |
| ೭೯ | ಕಲಿಯುಗದಲ್ಲಿ ಆದರ್ಶ-ಪುರುಷರು | 198 |
| ೮೦ | ಕಲ್ಪಿತ | 279 |
| ೮೧ | ಕಲ್ಪಾಂತ | 248 |
| ೮೨ | ಕಲ್ಯಾಣಗುಣ | 3 |
| ೮೩ | ಕಾಲಪ್ರವಾಹ | 43 |
| ೮೪ | ಕಾಲಾಕಾಶಾದಿ | 328 |
| ೮೫ | ಕಾರ್ಯಕಾರಣ | 262 |
| ೮೬ | ಕೂಟಸ್ಥ | 261 |
| ೮೭ | ಕೇಂದ್ರ | 32 |

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೮೮ | ಕೈವಶ | 190 |
| ೮೯ | ಕೃತಕೃತ್ಯರು | 257 |
| ೯೦ | ಕೃತಾರ್ಥ | 231 |
| ೯೧ | ಕ್ಷಮಾಗುಣ | 193 |
| | **ಗ** | |
| ೯೨ | ಗಾಢನಿದ್ರೆ | 267 |
| ೯೩ | ಗೀತಾಶಾಸ್ತ್ರ | 319 |
| ೯೪ | ಗುಟ್ಟು | 178 |
| ೯೫ | ಗುರು | 31 |
| ೯೬ | ಗೌಣಭಕ್ತಿ | 314 |
| ೯೭ | ಗೌರವ | 17 |
| | **ಚ** | |
| ೯೮ | ಚಿಕಿತ್ಸೆ | 187 |
| ೯೯ | ಚಿತ್ತ | 122 |
| ೧೦೦ | ಚಿತ್ತಶುದ್ಧಿ | 224 |
| ೧೦೧ | ಚಿತ್ತಾಕಾಶ | 131 |
| ೧೦೨ | ಚಿನ್ಮಾತ್ರಸ್ವರೂಪ | 280 |
| ೧೦೩ | ಚಿಮ್ಮು | 217 |
| ೧೦೪ | ಚೊಕ್ಕಟ | 5 |
| ೧೦೫ | ಚೈತನ್ಯ | 105 |
| ೧೦೬ | ಚಿಂತನೆ | 36 |
| | **ಜ** | |
| ೧೦೭ | ಜಗತ್ತು | 325 |
| ೧೦೮ | ಜಾಣ | 147 |
| ೧೦೯ | ಜ್ಞಾನನಿಷ್ಠೆ | 323 |
| ೧೧೦ | ಜಿಜ್ಞಾಸು | 294 |
| ೧೧೧ | ಜೀವ | 297 |
| ೧೧೨ | ಜೀವನ ಕೇಂದ್ರ | 138 |
| ೧೧೩ | ಜೀವನದ ಗುರಿ | 88 |
| ೧೧೪ | ಜೇನುತುಪ್ಪ | 204 |
| | **ತ** | |
| ೧೧೫ | ತತ್ತ್ವಜಿಜ್ಞಾಸು | 82 |
| ೧೧೬ | ತತ್ತ್ವಶ್ರವಣ | 85 |
| ೧೧೭ | ತನಿನಿದ್ರೆ | 114 |
| ೧೧೮ | ತನ್ಮಯಾಸಕ್ತಿ | 184 |
| ೧೧೯ | ತಹತಹ ಇರುವಿಕೆ | 256 |
| ೧೨೦ | ತಾತ್ಪರ್ಯ | 292 |
| ೧೨೧ | ತಾರತಮ್ಯ | 300 |
| ೧೨೨ | ತಾಳ್ಮೆ | 30 |
| ೧೨೩ | ತ್ಯಾಗ | 87 |
| ೧೨೩ | ತಿರುಳು | 127 |
| ೧೨೫ | ತಿರುಳು-ತತ್ವ | 161 |
| ೧೨೬ | ತಿಳಿಮಾಡಿಕೊ | 142 |
| ೧೨೭ | ತೀರ ಒಳಗೆ | 194 |
| ೧೨೮ | ತುಟ್ಟತುದಿ | 97 |
| ೧೨೯ | ತುಂತುರು | 208 |
| ೧೩೦ | ತೆರೆನೊರೆ | 274 |
| ೧೩೧ | ತೃಪ್ತ | 326 |
| | **ದ** | |
| ೧೩೨ | ದವಡೆ | 159 |
| ೧೩೩ | ದರ್ಶನಗೋಚರ | 320 |
| ೧೩೪ | ದಿವ್ಯಶಕ್ತಿ | 186 |
| ೧೩೫ | ದೂರ | 146 |
| ೧೩೬ | ದೇವರು | 141 |
| ೧೩೭ | ದ್ವಂದ್ವ | 89 |
| ೧೩೮ | ದ್ವಂದ್ವಪ್ರಹಾಣ | 303 |

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೧೩೯ | ದ್ವಾರ | 18 |
| ೧೪೦ | ದೈವಪ್ರಕೃತಿ | 299 |
| ೧೪೧ | ದೈವಸ್ವಭಾವ | 317 |
| | **ಧ** | |
| ೧೪೨ | ಧನ್ಯ | 113 |
| ೧೪೩ | ಧರ್ಮ | 53 |
| ೧೪೪ | ಧ್ಯಾನ | 19 |
| ೧೪೫ | ಧಾರಣೆ | 215 |
| | **ನ** | |
| ೧೪೬ | ನಲಿದಾಡು | 129 |
| ೧೪೭ | ನಮಸ್ಕಾರ | 322 |
| ೧೪೮ | ನಾಮ | 16 |
| ೧೪೯ | ನಾಮಸ್ಮರಣೆ | 60 |
| ೧೫೦ | ನಾರಾಯಣ | 245 |
| ೧೫೧ | ನಾಲ್ಕು ಸಾಧನಗಳು | 284 |
| ೧೫೨ | ನಿರ್ಗುಣ | 213 |
| ೧೫೩ | ನಿರ್ಣಯ | 120 |
| ೧೫೪ | ನಿತ್ಯಕಟ್ಟಳೆ | 329 |
| ೧೫೫ | ನಿತ್ಯತೃಪ್ತಿ | 218 |
| ೧೫೬ | ನಿತ್ಯಸಿದ್ಧ | 334 |
| ೧೫೭ | ನಿತ್ಯಶುದ್ಧಬುದ್ಧಮುಕ್ತ-ಸ್ವಭಾವ | 278 |
| ೧೫೮ | ನಿತ್ಯಾನಂದ | 149 |
| ೧೫೯ | ನಿತ್ಯಾನುಭವ | 236 |
| ೧೬೦ | ನಿರ್ಮಲ | 14 |
| ೧೬೧ | ನಿರಾಸಕ್ತ | 321 |
| ೧೬೨ | ನಿರ್ಲೇಪ | 153 |
| ೧೬೩ | ನಿರ್ವಿಕಾರ | 152 |
| ೧೬೪ | ನಿರ್ವಿಶೇಷ | 244 |
| ೧೬೫ | ನಿವೃತ್ತಿ ನಿಷ್ಠುರು | 83 |
| ೧೬೬ | ನಿಶ್ಚಯ | 327 |
| ೧೬೭ | ನಿಷ್ಠೆ | 117 |
| ೧೬೮ | ನಿಷ್ಕರ್ಮ | 209 |
| ೧೬೯ | ನಿಸ್ಸಾರ | 145 |
| ೧೭೦ | ನಿಷ್ಪ್ರಪಂಚರೂಪ | 243 |
| ೧೭೧ | ನೆನಪು | 144 |
| ೧೭೨ | ನೆಲೆ | 33 |
| ೧೭೩ | ನೆಲೆಜೀವನ | 65 |
| ೧೭೪ | ನೈಷ್ಕರ್ಮ್ಯಸಿದ್ಧಿ | 313 |
| ೧೭೫ | ನಂದದ ನಂದಾದೀಪ | 207 |
| | **ಪ** | |
| ೧೭೬ | ಪರಬ್ರಹ್ಮ | 298 |
| ೧೭೭ | ಪರಮತತ್ತ್ವ | 250 |
| ೧೭೮ | ಪರಮಧ್ಯೇಯ | 333 |
| ೧೭೯ | ಪರಮಪದ | 69 |
| ೧೮೦ | ಪರಮಪುರುಷ | 247 |
| ೧೮೧ | ಪರಮಪುರುಷಾರ್ಥ | 227 |
| ೧೮೨ | ಪರಮಹಂಸಸಂನ್ಯಾಸ | 45 |
| ೧೮೩ | ಪರಮಾತ್ಮಜ್ಞಾನ | 128 |
| ೧೮೪ | ಪರಮಾರ್ಥಸ್ವರೂಪ | 266 |
| ೧೮೫ | ಪರಮೇಶ್ವರನ (ಅನುಗ್ರಹ) | 96 |
| ೧೮೬ | ಪರಿಚ್ಛಿನ್ನಭಾವ | 242 |
| ೧೮೭ | ಪರಿಶುದ್ಧಪ್ರೇಮ | 66 |
| ೧೮೮ | ಪರಿಹಾರ | 61 |
| ೧೮೯ | ಪಶ್ಚಾತ್ತಾಪ | 195 |
| ೧೯೦ | ಪೂರ್ಣ | 95 |

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೧೯೧ | ಪೂರ್ಣರೂಪ | 101 |
| ೧೯೨ | ಪ್ರಕಾಶ | 289 |
| ೧೯೩ | ಪ್ರಜ್ಞಾನೈಕಘನಸ್ವರೂಪ | 339 |
| ೧೯೪ | ಪ್ರಜ್ಞೆ | 71 |
| ೧೯೫ | ಪ್ರಮಾತೃಸ್ವರೂಪ | 116 |
| ೧೯೬ | ಪ್ರಯಾಣ | 156 |
| ೧೯೭ | ಪ್ರಾರ್ಥನೆ | 15 |
| ೧೯೮ | ಪ್ರಾಪ್ತಿ | 37 |
| ೧೯೯ | ಪ್ರೇಮ | 28 |
| | **ಬ** | |
| ೨೦೦ | ಬಲ್ಲವರು | 163 |
| ೨೦೧ | ಬಿಡಬೇಕು | 103 |
| ೨೦೨ | ಬೀಜರೂಪ | 288 |
| ೨೦೩ | ಬುದ್ಧಮುಕ್ತ | 311 |
| ೨೦೪ | ಬುದ್ಧಿ | 140 |
| ೨೦೫ | ಬ್ರಹ್ಮ | 67 |
| ೨೦೬ | ಬ್ರಹ್ಮಜ್ಞಾನ | 96 |
| ೨೦೭ | ಬ್ರಹ್ಮತತ್ತ್ವ | 168 |
| ೨೦೮ | ಬ್ರಹ್ಮವಿದ್ಯೆ | 111 |
| ೨೦೯ | ಬ್ರಹ್ಮಾನಂದವಿದ್ಯೆ | 240 |
| | **ಭ** | |
| ೨೧೦ | ಭಕ್ತಿಯೋಗ | 324 |
| ೨೧೧ | ಭಗವಂತ | 307 |
| ೨೧೩ | ಭಗವದ್ಭಕ್ತಿ | 188 |
| ೨೧೩ | ಭಗವದ್ಗೀತೆ | 306 |
| ೨೧೪ | ಭಾವನೆ | 9 |
| ೨೧೫ | ಭ್ರಾಂತಿ | 180 |
| | **ಮ** | |
| ೨೧೬ | ಮರ್ತ್ಯ | 171 |
| ೨೧೭ | ಮನನ | 253 |
| ೨೧೮ | ಮನಸ್ಸು | 10 |
| ೨೧೯ | ಮನಃಪ್ರಧಾನ | 123 |
| ೨೨೦ | ಮನುಷ್ಯಜನ್ಮ | 254 |
| ೨೨೧ | ಮಹನೀಯ | 331 |
| ೨೨೨ | ಮಹಾಪುರುಷ | 197 |
| ೨೨೩ | ಮಹಿಮೆ | 206 |
| ೨೨೪ | ಮಾರ್ಗ | 29 |
| ೨೨೫ | ಮಾನಸಪ್ರಯತ್ನ | 126 |
| ೨೨೬ | ಮಾಯಾ-ಜಗತ್ತು | 135 |
| ೨೨೭ | ಮಾಯಾಸೃಷ್ಟಿ | 273 |
| ೨೨೮ | ಮಾಯೆ | 102 |
| ೨೨೯ | ಮಿತ | 90 |
| ೨೩೦ | ಮಿಂಚುವದು | 260 |
| ೨೩೧ | ಮುಕ್ತ | 59 |
| ೨೩೨ | ಮುಪ್ಪು | 25 |
| ೨೩೩ | ಮುಮುಕ್ಷು | 221 |
| ೨೩೪ | ಮೂಲ | 23 |
| ೨೩೫ | ಮೃತ್ಯುವಿನ ಅಂಜಿಕೆ | 295 |
| ೨೩೬ | ಮೇಧಾಶಕ್ತಿ | 237 |
| ೨೩೭ | ಮೈದೋರು | 246 |
| | **ಯ** | |
| ೨೩೮ | ಯತಿ | 150 |
| ೨೩೯ | ಯೋಗಮಾರ್ಗ | 302 |
| | **ರ** | |
| ೨೪೦ | ರಾಜಸಗುಣ | 316 |

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೨೪೧ | ರೂಪ | 290 |
| ೨೪೨ | ರೂಪಾಂತರ | 259 |
| | **ಲ** | |
| ೨೪೩ | ಲಕ್ಷ್ಯ | 62 |
| ೨೪೪ | ಲಯ | 157 |
| | **ವ** | |
| ೨೪೫ | ವರ | 192 |
| ೨೪೬ | ವಶ | 72 |
| ೨೪೭ | ವಸ್ತುತಂತ್ರ | 271 |
| ೨೪೮ | ವಾದ | 212 |
| ೨೪೯ | ವಾಸನಾಶಯ | 8 |
| ೨೫೦ | ವಿಚಿತ್ರ | 165 |
| ೨೫೧ | ವಿಭೂತಿ | 93 |
| ೨೫೨ | ವಿಭೂತಿಯೋಗ | 134 |
| ೨೫೩ | ವಿದ್ಯೆ | 54 |
| ೨೫೪ | ವಿಧಿ | 229 |
| ೨೫೫ | ವಿರಕ್ತ | 119 |
| ೨೫೬ | ವಿಲಕ್ಷಣ | 214 |
| ೨೫೭ | ವಿವೇಕಿ | 169 |
| ೨೫೮ | ವಿವಿಧಪ್ರತ್ಯಯಗಳು | 318 |
| ೨೫೯ | ವಿಶುದ್ಧ | 94 |
| ೨೬೦ | ವಿಶ್ವರೂಪ | 304 |
| ೨೬೧ | ವಿಶ್ವಶಾಂತಿ | 52 |
| ೨೬೨ | ವೃತ್ತಿ | 20 |
| ೨೬೩ | ವಿಂಗಡ | 155 |
| ೨೬೪ | ವೇದಾಂತಜ್ಞಾನ | 255 |
| ೨೬೫ | ವೈದಿಕಸಾಂಖ್ಯ | 282 |
| ೨೬೬ | ವೈರಾಗ್ಯ | 296 |
| ೨೬೭ | ವ್ಯವಸ್ಥೆ | 100 |
| ೨೬೮ | ವ್ಯವಹಾರ | 176 |
| | **ಶ** | |
| ೨೬೯ | ಶಮದಮ | 154 |
| ೨೭೦ | ಶರಣು | 11 |
| ೨೭೧ | ಶಾಂತಿ | 92 |
| ೨೭೨ | ಶಾಸ್ತ್ರದೃಷ್ಟಿ | 200 |
| ೨೭೩ | ಶುಭಚಿಂತನೆ | 233 |
| ೨೭೪ | ಶುಭಭಾವನೆ | 225 |
| ೨೭೫ | ಶುಭಮತಿ | 216 |
| ೨೭೬ | ಶುಭಸ್ಮೃತಿಸಂತಾನ | 249 |
| ೨೭೭ | ಶುದ್ಧಚಿತ್ತ | 21 |
| ೨೭೮ | ಶ್ರದ್ಧೆ | 13 |
| ೨೭೯ | ಶ್ರವಣ | 84 |
| ೨೮೦ | ಶ್ರವಣಗೋಚರ | 234 |
| ೨೮೧ | ಶ್ರುತಿ | 202 |
| ೨೮೨ | ಶ್ರೇಯಃ ಪದ | 230 |
| | **ಸ** | |
| ೨೮೩ | ಸಚ್ಛಿಷ್ಠ | 172 |
| ೨೮೪ | ಸತ್ತರ್ಕ | 86 |
| ೨೮೫ | ಸತ್ಫಲ | 124 |
| ೨೮೬ | ಸತ್ಸಂಗ | 78 |
| ೨೮೭ | ಸದ್ಬುದ್ಧಿ | 285 |
| ೨೮೮ | ಸನ್ಮಾತ್ರ | 183 |
| ೨೮೯ | ಸಮ | 1 |
| ೨೯೦ | ಸಮಾಹಿತ | 239 |
| ೨೯೧ | ಸಮೂಲ | 27 |
| ೨೯೨ | ಸರ್ವವಿದ್ಯೆ | 336 |

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೨೯೩ | ಸರ್ವಸಾಕ್ಷಿ | 305 |
| ೨೯೪ | ಸರ್ವಾಂತರ್ಯಾಮಿ | 309 |
| ೨೯೫ | ಸರ್ವಾತ್ಮಭಾವ | 182 |
| ೨೯೬ | ಸಾಕ್ಷಿ | 55 |
| ೨೯೭ | ಸಾಕ್ಷಿಸ್ಫುಟ | 112 |
| ೨೯೮ | ಸಾಧನ | 106 |
| ೨೯೯ | ಸಾರ್ಥಕ | 104 |
| ೩೦೦ | ಸಾಫಲ್ಯ | 68 |
| ೩೦೧ | ಸಾವಿನ ಅಂಜಿಕೆ | 125 |
| ೩೦೨ | ಸ್ಥಿತಪ್ರಜ್ಞ | 132 |
| ೩೦೩ | ಸ್ಥಿರಪ್ರಯತ್ನ | 121 |
| ೩೦೪ | ಸುಜ್ಞ | 162 |
| ೩೦೫ | ಸುನಿಶ್ಚಿತ | 335 |
| ೩೦೬ | ಸುಷುಪ್ತಿ | 115 |
| ೩೦೭ | ಸ್ಫೂರ್ತಿ | 73 |
| ೩೦೮ | ಸೋಪಾಧಿಕ | 238 |
| ೩೦೯ | ಸ್ತೋತ್ರ | 232 |
| ೩೧೦ | ಸಂಕಲ್ಪತ್ಯಾಗ | 133 |
| ೩೧೧ | ಸಂಗ | 189 |
| ೩೧೨ | ಸಂಗತ್ಯಾಗ | 143 |
| ೩೧೩ | ಸಂಗ್ರಾಮ | 74 |
| ೩೧೪ | ಸಂತೋಷ | 49 |
| ೩೧೫ | ಸಂಬಂಧ | 4 |
| ೩೧೬ | ಸಮೃದ್ಧಿ | 191 |
| ೩೧೭ | ಸಂಸಾರ | 57 |
| ೩೧೮ | ಸಂಸ್ಕಾರ | 7 |
| ೩೧೯ | ಸಂಸ್ಕೃತಿ | 99 |
| ೩೨೦ | ಸಾಂನಿಧ್ಯ | 164 |
| ೩೨೧ | ಸ್ಮರಣೆ | 6 |
| ೩೨೨ | ಸ್ವಭಾವ | 166 |
| ೩೨೩ | ಸ್ವತಂತ್ರದರ್ಶನ | 310 |
| ೩೨೪ | ಸ್ವತಃಸಿದ್ಧ | 276 |
| ೩೨೫ | ಸ್ವರೂಪ | 51 |
| ೩೨೬ | ಸ್ವಯಂರಾಜ | 258 |

## ಹ

| ಕ್ರಮ ಸಂಖ್ಯೆ | ಸೂಕ್ತಿಯಲ್ಲಿ ಪ್ರಧಾನ ಶಬ್ದ | ಸೂಕ್ತಿಯ ಸಂಖ್ಯೆ |
|---|---|---|
| ೩೨೭ | ಹರಿದಾಟ | 211 |
| ೩೨೮ | ಹವಣಿಸು | 226 |
| ೩೨೯ | ಹಾದಿ | 12 |
| ೩೩೦ | ಹಿಡಿತ | 185 |
| ೩೩೧ | ಹೀಗೆ ಇದೆ | 170 |
| ೩೩೨ | ಹುಸಿತೋರಿಕೆ | 251 |
| ೩೩೩ | ಹೃದಯಕೇಂದ್ರ | 41 |
| ೩೩೪ | ಹೃದಯಗುಹೆ | 272 |
| ೩೩೫ | ಹೃದಯದೇವಾಲಯ | 286 |
| ೩೩೬ | ಹೆಗ್ಗುರಿ | 220 |
| ೩೩೭ | ಹೊರೆ | 38 |
| ೩೩೮ | ಹಂಬಲ | 63 |
| ೩೩೯ | ಹಿಂದಕ್ಕೆ | 160 |

ವಿನೋದಕಾಲಕ್ಷೇಪವನ್ನೂ ತತ್ತ್ವವಿಚಾರವನ್ನೂ ಏಕಕಾಲದಲ್ಲಿ ಒದಗಿಸುವ

## ಕಥೆಗಳು

೧. **ವೇದಾಂತಕಥಾವಳಿ** : ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೆಳಗೂ ಅದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಬಹುಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತವಿಷಯದ ಎಷ್ಟೋ ತಪ್ಪುತಿಳಿವಳಿಕೆಗಳು ಇದನ್ನು ಓದುವದರಿಂದ ಮಾಯವಾಗುವವು. ಮೊದಲನೆಯಸಲಕ್ಕೆ ವೇದಾಂತವನ್ನು ಓದುವವರಿಗೆ ತಕ್ಕದ್ದಾಗಿದೆ.

೨. **ವಿಲಕ್ಷಣಮೌನಿ : ಅರುಣಗಿರಿ**ಯವರು ಬರೆದಿರುವ ಸಂಭಾಷಣರೂಪವಾದ ಕಥೆಯಿದು. ಇದರಲ್ಲಿ ಭೋಜರಾಜನಿಗೆ ಒಬ್ಬ ಮುನಿವರ್ಯರು ಸೂತ್ರರೂಪವಾಗಿ ಉಪದೇಶಿಸಿದ ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ವಿವರಿಸಿದೆ. ಉಪನಿಷತ್ತುಗಳೆಲ್ಲವೂ ಬ್ರಹ್ಮಾತ್ಮೈಕತ್ವಪರವೆಂಬುದನ್ನು ಮನಗಾಣಿಸುವ ಗ್ರಂಥವಿದು.

೩. **ಉಪನಿಷತ್ತುಗಳ ಮೊದಲನೆಯ ಪರಿಚಯ** : ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳು; ದೃಷ್ಟಾಂತಗಳು, ಸಿದ್ಧಾಂತ, ಸಾಧನ - ಇಷ್ಟು ವಿಷಯಗಳನ್ನು ಲಲಿತವಾದ ಶೈಲಿಯಲ್ಲಿ ಬರೆದಿದೆ. ಉಪನಿಷತ್ತುಗಳಲ್ಲಿರುವ ವಿಚಾರಕ್ರಮವನ್ನು ಭಾಷ್ಯಸಂಪ್ರದಾಯಾನುಸಾರವಾಗಿ ವಿಚಾರಮಾಡಬೇಕೆಂಬ ಜಿಜ್ಞಾಸುಗಳಿಗೆ ಉತ್ತಮಪುಸ್ತಕವಿದು. ಸ್ತ್ರೀಯರಿಗೂ ಮಕ್ಕಳಿಗೂ ಸಹ ತಿಳಿಯುವಂತಿದೆ.

೪. **ಲಕ್ಷಣಶಾಸ್ತ್ರಿ ಉರುಫ್ ಹಸೇನ್** : ಬಂಗಾಳದಲ್ಲಿ ಲಕ್ಷಣಶಾಸ್ತ್ರಿ ಎಂಬುವನು ತರ್ಕವಿದ್ಯಾನೈಪುಣ್ಯವನ್ನು ಪಡೆದು ವಿದ್ಯಾಮದದಿಂದ ಅನೇಕರನ್ನು ಸೋಲಿಸಿದ ನಿಮಿತ್ತ ಹಸೇನ್ ಎಂಬ ಹೆಸರಿನ ಕುದುರೆಯಾಗಿ ದೇಶಾಂತರಗಳಲ್ಲಿ ಅಲೆದದ್ದೇ ಮುಂತಾದ ವಿಚಿತ್ರ ಘಟನೆಗಳಿಂದ ತುಂಬಿದ ಕಥೆ. ತರ್ಕಶಾಸ್ತ್ರಕ್ಕೂ ವೇದಾಂತಕ್ಕೂ ಇರುವ ತಾರತಮ್ಯವನ್ನು ಮನಗಾಣಿಸುವದು.

೫. **ಸಮುದ್ರಮಥನ** : ದೇವತೆಗಳೂ ರಾಕ್ಷಸರೂ ಕೂಡಿ ಕ್ಷೀರಸಮುದ್ರವನ್ನು ಮಥನಮಾಡಿ ಅಮೃತವನು ಪಡೆದುಕೊಂಡ ಪೌರಾಣಿಕಕಥೆಯಿದು. ಸಮಯಕ್ಕೆ ತಕ್ಕಂತೆ ನೀತಿಯನ್ನೂ ಅಧ್ಯಾತ್ಮಶಾಸ್ತ್ರದ ಗುಟ್ಟನ್ನೂ ವಿವರಿಸುತ್ತದೆ.

೬. **ಶಿವಕವಚ** : ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರು ಉಪದೇಶಿಸಿದ ಸ್ತೋತ್ರ, ಭಾವಾರ್ಥ, ವಿವರಣೆಗಳನ್ನೊಳಗೊಂಡಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

---

**ಅಧ್ಯಾತ್ಮಪ್ರಕಾಶಕಾರ್ಯಾಲಯ**
೬೮, ೨ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - ೫೬೦ ೦೨೮. ✆ : ೬೭೬೫೫೪೪

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - ೦೮೧೭೫ -೫೭೩೮೨೦

# ಸಂಸ್ಥಾಪಕರ ಸ್ಮರಣೆ

ಕರ್ನಾಟಕರಾಜ್ಯದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ **ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5-1-1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ.ಸುಬ್ಬರಾವ್ ಎಂದಿತ್ತು. 1948 ರವರೆಗೆ (68ನೆಯ ವಯಸ್ಸಿನವರೆಗೆ) ಅವರು ಸುಬ್ಬರಾಯ ರೆಂದೇ ಪ್ರಖ್ಯಾತರಾಗಿದ್ದರು. 10-6-1948 ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ** ಎಂಬ ಅಭಿದಾನದಿಂದ ವಿರಾಜಮಾನರಾದರು.

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **''ಪುರುಷಸರಸ್ವತಿ''** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ **ಅಭಿನವಶಂಕರಾಚಾರ್ಯ**ರಾಗಿ ಬಾಳಿ 1975ನೇ ಆಗಸ್ಟ್ 5 (1880-1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ-573211
ದೂರವಾಣಿ : 08175-573820

ವಿನ್ಯಾಸ - ಮುದ್ರಣ : ಶ್ರೀಗಣೇಶಮಾರುತಿ ಪ್ರಿಂಟರ್ಸ್, ದೂ- 6766 342